# ಯುಗರಶ್ಮಿ

- ಏಕದೇವ ವಿಶ್ವಾಸ ಮತ್ತು ಮಾನವ ಮೈತ್ರಿ
- ಮುಹಮ್ಮದ್ ಪೈಗಂಬರ್ ಸರ್ವಶ್ರೇಷ್ಠ ಮಾದರಿ ಪುರುಷ
- ನೇರ ಮಾತು
- ಖಿಲಾಫತ್ ಒಂದು ಮಹಾನುಗ್ರಹ
- ಇಮಾಂ ಮಹ್‌ದಿಯ ಆವಿರ್ಭಾವ
- ಮೌದೂದಿಗೆ ಮರಣ ದಂಡನೆ!
- ಜಮಾತೆ ಇಸ್ಲಾಮಿಯ 'ಶಾಂತಿ ಮಂತ್ರ'

ತ್ರೈಮಾಸಿಕ
ಆಗಸ್ಟ್ 1999
ಬೆಲೆ ರೂ. 5-00

*ಒಳಿತಿನ ಕಡೆಗೆ ಆಹ್ವಾನಿಸುವ, ಒಳಿತನ್ನು ಉಪದೇಶಿಸಿ ಕೆಡುಕನ್ನು ವಿರೋಧಿಸುವ ಒಂದು ಪಂಗಡ ನಿಮ್ಮಲ್ಲಿ ಇರಬೇಕಾಗಿದೆ. ಅವರೇ ವಿಜಯಶಾಲಿಗಳಾಗುವರು.*

*-ಪವಿತ್ರ ಖುರ್‌ಆನ್ (3:105)*

# ಯುಗರಶ್ಮಿ

ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ: ರೂ. 5-00 ವಾರ್ಷಿಕ ಚಂದಾ: ರೂ. 20-00 ಅಂಚೆ ಮೂಲಕ : ರೂ. 25-00


ವಿಷಯ ಸೂಚಿಕೆ: ಪುಟ


- ಪ್ರವಾದಿಶ್ರೇಷ್ಠ 1
- ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು 2
- ಏಕದೇವ ವಿಶ್ವಾಸ ಮತ್ತು ಮಾನವ ಮೈತ್ರಿ 3
- ಮುಹಮ್ಮದ್ ಪೈಗಂಬರ್ ಸರ್ವಶ್ರೇಷ್ಠ ಮಾದರಿ ಪುರುಷ 10
- ನೇರ ಮಾತು 17
- ಖಿಲಾಫತ್ ಒಂದು ಮಹಾನುಗ್ರಹ 22
- ಮುಸ್ಲಿಂ ಸಮುದಾಯದ ವಿಮೋಚನೆಗಾಗಿ ಇಮಾಂ ಮಹ್‌ದಿಯ ಆವಿರ್ಭಾವ 26
- ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ - 13 29
- ಮೌದೂದಿಗೆ ಮರಣದಂಡನೆ ! 31
- ಜಮಾತೆ ಇಸ್ಲಾಮಿಯ 'ಶಾಂತಿಮಂತ್ರ' 33
- ಭವಿಷ್ಯದ ಮುಗುಳ್ನಗೆ 34
- ನಿಧನ ವಾರ್ತೆ 35





"ಕಾರ್ಗಿಲ್" ಸಂತ್ರಸ್ತ ಯೋಧರ

ಪರಿಹಾರ ನಿಧಿಗೆ ಉದಾರವಾಗಿ ದೇಣಿಗೆ ನೀಡಿರಿ

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

ಆರಂಭ : 1975 | ಸಂಪುಟ : 19 | ಆಗಸ್ಟ್ 1999 | ಝುಹೂರ್ 1378 | ಸಂಚಿಕೆ : 2

## ಪ್ರವಾದಿಶ್ರೇಷ್ಠ

ಒಬ್ಬನ ಜೀವನದಲ್ಲಿ ಕಷ್ಟಾರಿಷ್ಟದ ಕಾಲದ ಹಾಗೆಯೇ ಅಧಿಕಾರ ಶಕ್ತಿ ಮತ್ತು ಐಶ್ವರ್ಯದ ಕಾಲ ಸಹ ಬಾರದಿದ್ದರೆ ಅವನ ಯಥಾರ್ಥ ಸದ್ಗುಣಗಳು ವ್ಯಕ್ತಗೊಳ್ಳಲಾರವು. ಆದರೆ ಪ್ರತೀಕಾರ ಮಾಡಲು ಸಂದರ್ಭ ಸಿಗದೆ ಸದಾ ಪರಪೀಡನೆಗೆ ಗುರಿಯಾದವನ ಸಹನೆ ಮತ್ತು ಶತ್ರುವನ್ನು ಎದುರಿಸದಿರುವಿಕೆ ಯಥಾರ್ಥ ಕ್ಷಮಾಗುಣವಾಗಿ ಗಣಿಸಲ್ಪಡುವುದಿಲ್ಲ. ಕಾರಣವೇನೆಂದರೆ, ಪ್ರತೀಕಾರ ಮಾಡಲು ಸಂದರ್ಭ ಸಿಕ್ಕುವಾಗ ಅವನು ತನ್ನ ವೈರಿಯೊಡನೆ ಹೇಗೆಲ್ಲ ವರ್ತಿಸುವನೆಂದು ಊಹಿಸಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ, ಒಬ್ಬನು ಅಶಕ್ತನೂ ಅಧಿಕಾರವಿಲ್ಲದವನೂ ಬಡವನೂ ಆಗಿರುವ ಸ್ಥಿತಿಯಲ್ಲಿ ಅನ್ಯರ ದೌರ್ಜನ್ಯಗಳನ್ನು ಸಹಿಸಿಕೊಂಡಿದ್ದು, ಅಧಿಕಾರ ಮತ್ತು ಐಶ್ವರ್ಯದ ಅನುಭೋಗಗಳನ್ನು ಪಡೆಯದಿದ್ದರೆ ಅವನ ನೈತಿಕ ಗುಣಗಳನ್ನು ನಿರ್ಣಯಿಸಲು ಸಾಧ್ಯವಿಲ್ಲ. ಅವನು ಒಮ್ಮೆಯಾದರೂ ಯುದ್ಧರಂಗಕ್ಕೆ ಇಳಿಯದಿದ್ದರೆ ಅವನ ಧೀರತೆಯಾಗಲೀ ಭೀರುತ್ವವಾಗಲೀ ಬಹಿರಂಗಗೊಳ್ಳಲಾರದು. ಹೀಗೆ ವಿವಿಧ ಅವಸ್ಥೆಗಳು ಓರ್ವನ ಜೀವನದಲ್ಲಿ ಉಂಟಾಗುವ ವರೆಗೆ ಅವನ ಸದ್ಗುಣಗಳ ಕುರಿತು ಅಭಿಪ್ರಾಯವನ್ನು ಹೇಳಲು ಅಸಾಧ್ಯ. ಅವನು ಎದುರಾಳಿಗಳನ್ನು ಸೋಲಿಸಿ ಅವರ ಜೀವದ ಅಧಿಕಾರಿಯಾಗಿ ಮಾರ್ಪಟ್ಟರೆ ಅವರೊಡನೆ ಹೇಗೆ ವರ್ತಿಸುವನೆಂದೂ, ಧನಿಕನಾಗಿ ಮಾರ್ಪಟ್ಟರೆ ಬಡವರಿಗೂ ನಿರ್ಗತಿಕರಿಗೂ ಧಾನಧರ್ಮ ಮಾಡುವನೋ ಅಥವಾ ಧನವನ್ನೆಲ್ಲಾ ಬಚ್ಚಿಡುತ್ತಾನೋ ಎಂದೂ, ಯುದ್ಧಕಣಕ್ಕೆ ಇಳಿಯಬೇಕಾಗಿ ಬಂದರೆ ಬೆನ್ನು ತಿರುಗಿಸಿ ಓಡಿಹೋಗುವನೋ ಅಥವಾ ಧೀರೋದಾತ್ತನ ಹಾಗೆ ನಿರ್ಭಯವಾಗಿ ಹೋರಾಡುವನೋ ಎಂಬುದನ್ನೂ ಆಯಾ ಸಂದರ್ಭ ಬಾರದೆ ನಮಗೆ ನಿರ್ಣಯಿಸಲು ಸಾಧ್ಯವಿಲ್ಲ. ಆದರೆ ಅಲ್ಲಾಹನ ವಿಶಿಷ್ಟವಾದ ಕರುಣಾ ಕಟಾಕ್ಷದಿಂದ ಪ್ರವಾದಿ ಶ್ರೇಷ್ಠರಾದ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರಿಗೆ ಸಕಲ ನೈತಿಕ ಗುಣಗಳನ್ನು ತನ್ನ ಜೀವನದಲ್ಲಿ ತೋರಿಸಲು ಸೌಭಾಗ್ಯ ಸಿದ್ಧಿಸಿತ್ತು. ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಕಾಣಲು ಅಸಾಧ್ಯವಾದ ರೀತಿಯ ಅತುಲ್ಯ ಪ್ರಭಾವದಿಂದ ಕೂಡಿದ ಔದಾರ್ಯ, ಧೀರತೆ, ಸಹನೆ, ಕ್ಷಮೆ, ನ್ಯಾಯನಿಷ್ಠೆ ಎಂಬೀ ಗುಣಗಳೆಲ್ಲ ಪೈಗಂಬರರ ಜೀವನದಲ್ಲಿ ಪ್ರತಿಫಲಿಸಿದುದನ್ನು ಕಾಣಬಹುದು. ಅಶಕ್ತತೆ ಮತ್ತು ಶಕ್ತಿ ಪ್ರತಾಪದ, ದಾರಿದ್ರ್ಯ ಮತ್ತು ಐಶ್ವರ್ಯದ ಸ್ಥಿತ್ಯಂತರ ಘಟ್ಟಗಳಲ್ಲೆಲ್ಲ ತಾನು ಸಕಲ ಉತ್ಕೃಷ್ಟ ಸದ್ಗುಣಗಳ ತುಂಬಿದ ಪಾತ್ರೆಯೆಂದು ಪೈಗಂಬರರು ಲೋಕಕ್ಕೆ ತೋರಿಸಿಕೊಟ್ಟಿರುವರು. ಅವರ ಶೋಭಾಯಮಾನವಾದ ಜೀವನದಲ್ಲಿ ಪ್ರತಿಬಿಂಬಿಸಿ ಕಾಣದ ಲೋಕದ ಯಾವುದೇ ಮಾನವೀಯ ಮಹದ್ಗುಣ ಇಲ್ಲವೆಂದೇ ಹೇಳಬಹುದು.

ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

## ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

# ಯುದ್ಧ ನೀತಿ

* ಯುದ್ಧದಲ್ಲಿ ಮೃತದೇಹಗಳನ್ನು ವಿರೂಪಗೊಳಿಸುವುದು ಮುಸ್ಲಿಮರಿಗೆ ನಿಷೇಧಿಸಲ್ಪಟ್ಟಿದೆ.
* ಯುದ್ಧದಲ್ಲಿ ಮೋಸ ಮಾಡುವುದು ಮುಸ್ಲಿಮರಿಗೆ ನಿಷೇಧಿಸಲ್ಪಟ್ಟಿದೆ.
* ವೃದ್ಧರನ್ನಾಗಲೀ ನಿರ್ಬಲರನ್ನಾಗಲೀ ಸ್ತ್ರೀಯರನ್ನಾಗಲೀ ಮಕ್ಕಳನ್ನಾಗಲೀ ಕೊಲ್ಲಬಾರದು. ಶಾಂತಿ ಸಂಧಾನದ ಸಾಧ್ಯತೆಯನ್ನು ಸದಾ ದೃಷ್ಟಿಯಲ್ಲಿಡಬೇಕು.
* ಧರ್ಮಪಂಡಿತರನ್ನಾಗಲೀ ಧರ್ಮ ನೇತಾರರನ್ನಾಗಲೀ ಹತ್ಯೆ ಮಾಡಬಾರದು.
* ಶತ್ರುರಾಜ್ಯದೊಳಗೆ ಮುಸ್ಲಿಮರು ಪ್ರವೇಶಿಸಿದರೆ ಜನರೆಡೆಯಲ್ಲಿ ಭಯೋತ್ಪಾದನೆ ಮಾಡಬಾರದು. ಜನಸಾಮಾನ್ಯರಿಗೆ ಯಾವುದೇ ರೀತಿಯ ಉಪದ್ರ ಕೊಡಬಾರದು.
* ಜನಸಾಮಾನ್ಯರಿಗೆ ತೊಂದರೆಯಾಗುವ ಸ್ಥಳಗಳಲ್ಲಿ ಸೈನ್ಯ ಶಿಬಿರ ಹೂಡಬಾರದು. ಸೈನ್ಯ ಸಾಗುವಾಗ ಮಾರ್ಗತಡೆಯುಂಟಾಗದಂತೆಯೂ ದಾರಿಹೋಕರಿಗೆ ತೊಂದರೆಯಾಗದಂತೆಯೂ ಜಾಗ್ರತೆ ವಹಿಸಬೇಕು.
* ಶತ್ರುವಿನ ಮುಖವನ್ನು ವಿರೂಪಗೊಳಿಸಬಾರದು.
* ಶತ್ರುವಿಗೆ ಅತಿ ಕಡಿಮೆ ನಷ್ಟವಾಗುವಂತೆ ಮಾಡಿ ಜಯಹೊಂದಲು ಪ್ರಯತ್ನಿಸಬೇಕು.
* ಯುದ್ಧಕೈದಿಗಳನ್ನು ಸೆರೆಯಲ್ಲಿಡುವಾಗ ಅವರ ಪೈಕಿ ನಿಕಟಬಂಧುಗಳನ್ನು ಬೇರ್ಪಡಿಸಬಾರದು.
* ಮುಸ್ಲಿಮರು ತಮಗಿಂತ ಯುದ್ಧಕೈದಿಗಳ ಸುಖಾರಾಮಕ್ಕೆ ಹೆಚ್ಚು ಗಮನಕೊಡಬೇಕು.
* ಪರದೇಶಗಳ ರಾಯಭಾರಿಗಳನ್ನು ಅತ್ಯಾದರದಿಂದ ಉಪಚರಿಸಬೇಕು. ಅವರು ಏನಾದರೂ ತಪ್ಪು ಮಾಡಿದರೂ ಅದನ್ನು ಅವಗಣಿಸಬೇಕು.
* ಒಬ್ಬ ಮುಸ್ಲಿಂ ಒಬ್ಬ ಯುದ್ಧ ಕೈದಿಯೊಡನೆ ಕೆಟ್ಟದ್ದಾಗಿ ವರ್ತಿಸಿದರೆ, ಅದಕ್ಕೆ ಪ್ರಾಯಶ್ಚಿತ್ತವೆಂಬಂತೆ, ಪರಿಹಾರಧನವನ್ನು ಪಡೆಯದೆಯೇ ಆ ಕೈದಿಯನ್ನು ಮುಕ್ತಗೊಳಿಸಬೇಕು.
* ಒಬ್ಬ ಮುಸ್ಲಿಮನು ತನ್ನ ಅಧೀನದಲ್ಲಿರುವ ಯುದ್ಧಕೈದಿಗೆ ತಾನು ಉಣ್ಣುವಂತಹ ಆಹಾರವನ್ನೂ ತಾನು ಧರಿಸುವಂತಹ ಉಡುಪನ್ನೂ ನೀಡಬೇಕು.

# ಏಕದೇವ ವಿಶ್ವಾಸ ಮತ್ತು ಮಾನವ ಮೈತ್ರಿ

ಮೌಲವಿ ಮುಹಮ್ಮದ್ ಉಮರ್ H.A.

ಲೋಕವು ಇಂದು ಅಸಾಮಾನ್ಯವಾದ ಒಂದು ವಿಧ ಭೀಕರತೆಯ ಅಸ್ವಸ್ಥತೆಯಲ್ಲಿ ಸಿಲುಕಿ ತೊಳಲಾಡುತ್ತಿದೆ. ಕೊಳ್ಳೆ, ಕೊಲೆ, ಇನ್ನಿತರ ದುಷ್ಕೃತ್ಯಗಳು ದೈನಂದಿನ ಜೀವನದ ಅಂಶವೆಂಬಂತೆ ನಿತ್ಯ ಘಟನೆಗಳಾಗಿ ಮಾರ್ಪಟ್ಟಿವೆ. ರಕ್ತದ ವಾಸನೆಯಿಂದ ಕೂಡಿದ ಭೀಕರ ವಾರ್ತೆಗಳನ್ನು ದಿನಂಪ್ರತಿ ಮಾಧ್ಯಮಗಳು ನಮ್ಮ ಮುಂದಿಡುತ್ತವೆ. ರಾಷ್ಟ್ರಗಳು ರಕ್ಷಣೋಪಾಯಗಳ ಹೆಸರಿನಲ್ಲಿ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಡಿತಗೊಳಿಸಿ ಬಹಳ ದೊಡ್ಡ ಮೊತ್ತವನ್ನು ವ್ಯಯಿಸಿ ಅತ್ಯಂತ ಮಾರಕವಾದ ಆಯುಧಗಳನ್ನು ಸಂಗ್ರಹಿಸುತ್ತಿರುವಾಗ ಸಮಸ್ಯೆ ಪರಿಹಾರಗಳೇ ಪುನಃ ಹೊಸ ಸಮಸ್ಯೆಗಳನ್ನು ಹುಟ್ಟುಹಾಕಿ ಮನುಷ್ಯಕುಲ ಅಶಾಂತಿಯ ಅಗ್ನಿ ಕುಂಡದಲ್ಲಿ ಬಿದ್ದು ನರಳುತ್ತಿದೆ. ಭೌತಿಕವಾದ ಉನ್ನತಿಯನ್ನು ಗಳಿಸಲು ಯಾವುದೇ ಮಾರ್ಗದಲ್ಲಿ ಧನ ಸಂಪಾದಿಸಲು ವ್ಯಕ್ತಿಗಳೂ ಸಮುದಾಯಗಳೂ ನಾಗಲೋಟ ಮಾಡುತ್ತವೆ. ಮಾನವೀಯ ಮೌಲ್ಯಗಳನ್ನೂ ಧಾರ್ಮಿಕ ಪ್ರಜ್ಞೆಯನ್ನೂ ಗಾಳಿಗೆ ತೂರಿ, ಸಂಪತ್ತು ಮಾನವೀಯ ಸಂಬಂಧಗಳನ್ನು ನಿಯಂತ್ರಿಸುವ ಮುಖ್ಯ ಘಟಕವಾಗಿ ಬಿಟ್ಟಿದೆ. ಸಂಪತ್ತಿನ ಮುಂದೆ ಧಾರ್ಮಿಕ ಸದಾಚಾರ ಮೌಲ್ಯಗಳು ಅವಗಣಿಸಲ್ಪಡುವ ಅಧಃಪತಿಸಿದ ಪರಿಸ್ಥಿತಿ ಇಂದು ಹುಟ್ಟಿಕೊಂಡಿದೆ.

ಈ ದುರವಸ್ಥೆಯ ಕಾರಣವೇನು? ಸೂಕ್ಷ್ಮವಾಗಿ ಅವಲೋಕಿಸಿದರೆ ನಮ್ಮನ್ನೆಲ್ಲ ಸೃಷ್ಟಿಸಿ ಪರಿಪಾಲಿಸುವ ಏಕದೇವನೊಡನಿರುವ ವಿಶ್ವಾಸ ನಷ್ಟವಾಗಿರುವುದೇ ಇವುಗಳ ಹಿಂದೆ ಇರುವ ಮುಖ್ಯ ಕಾರಣವೆಂದು ಮನಗಾಣಬಹುದು. ಬೇರೆ ಮಾತಿನಲ್ಲಿ ಹೇಳುವುದಾದರೆ, ಆಯಾ ಕಾಲಗಳಲ್ಲಿ ದೇವನಿಯುಕ್ತರಾಗಿ ಧರ್ಮೋಪದೇಶ ನೀಡಿದ ಆಧ್ಯಾತ್ಮಿಕಾಚಾರ್ಯರುಗಳು ಕಲಿಸಿಕೊಟ್ಟ ಮಾನವ ಸಾಹೋದರ್ಯದ ಮಹತ್ತರ ಮೌಲ್ಯಗಳನ್ನು ಲೋಕವು ಪರಿತ್ಯಜಿಸಿದೆ ಎಂಬುದೇ ಈ ಪತನಕ್ಕೆ ಕಾರಣ.

ಧಾರ್ಮಿಕ ಅವನತಿಯಿಂದ ಲೋಕಕ್ಕೆ ವಿಮೋಚನೆ ನೀಡಲಿಕ್ಕಾಗಿ ಲೋಕಾನುಗ್ರಹಿಯಾಗಿ ಆವಿರ್ಭವಿಸಿದ ಮುಹಮ್ಮದ್ ಪೈಗಂಬರ್(ಸ) ಮೂಲಕ ಸ್ಥಾಪಿತವಾದ ಇಸ್ಲಾಂ ಕೇವಲ ಕೆಲವು ಆಚಾರಾನುಷ್ಠಾನಗಳಿಂದ ಕೂಡಿಕೊಂಡಿರುವ ಧರ್ಮವಲ್ಲ. ಅದು ಮನುಷ್ಯನ ಆಧ್ಯಾತ್ಮಿಕ, ಭೌತಿಕ, ಸಾಮಾಜಿಕ, ಸಾಂಪತ್ತಿಕ, ಸಾಂಸ್ಕಾರಿಕ, ನೈತಿಕ, ರಾಜಕೀಯ ಮುಂತಾದ ಸರ್ವರಂಗಗಳಲ್ಲೂ ಪರಿಪೂರ್ಣವಾದ ಮಾರ್ಗದರ್ಶನ ನೀಡುವ ಅದ್ವಿತೀಯವೂ ಅನ್ಯೂನವೂ ಆದ ಜೀವನ ಮಾರ್ಗವಾಗಿದೆ. ವಿಶ್ವ ಸಾಹೋದರ್ಯದ ಸುಂದರವಾದ ಆಶಯ ಸಂಪತ್ತು ಮತ್ತು ಮಾನವ ಮೈತ್ರಿಯ ಸಾರ್ವಲೌಕಿಕವಾದ ಸಮತ್ವಸಿದ್ಧಾಂತ ಕೂಡಿಕೊಂಡಿರುವ ಇಸ್ಲಾಮಿನ ತಳಪಾಯ ಅಚಂಚಲವಾದ ಏಕದೇವ ವಿಶ್ವಾಸದಲ್ಲಿ ಅಧಿಷ್ಠಿತವಾಗಿದೆ. ಪರಿಶುದ್ಧ ಇಸ್ಲಾಮನ್ನು ತನ್ನ ಪರಿಪಾವನವಾದ ಜೀವನ ಮಾದರಿ ಮೂಲಕ ಪರಿಪೂರ್ಣವಾದ ರೀತಿಯಲ್ಲಿ ಲೋಕಸಮಕ್ಷ ಸಮರ್ಪಿಸಿದ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳುತ್ತಾರೆ :

> "ಎಲೈ ಜನರೆ, ನಿಮ್ಮ ಸೃಷ್ಟಿಕರ್ತನೂ ರಕ್ಷಕನೂ ಏಕನು. ನೀವು ಒಬ್ಬನೇ ಪಿತನಾದ ಆದಮನ ಸಂತತಿಗಳಾಗಿದ್ದೀರಿ. ಆದಂ ಮಣ್ಣಿನಿಂದ ಸೃಷ್ಟಿಸಲ್ಪಟ್ಟವರಾಗಿದ್ದಾರೆ. ನಿಮ್ಮ ಪೈಕಿ ಅತಿ ಹೆಚ್ಚು ಭಯಭಕ್ತಿಯುಳ್ಳವನು ದೇವದೃಷ್ಟಿಯಲ್ಲಿ ನಿಮ್ಮ ಪೈಕಿ ಅತ್ಯುತ್ತಮನು. ಆದುದರಿಂದ ಒಬ್ಬ ಅರಬನಿಗೆ ಅರಬಿಯೇತರನ ಮೇಲೆ ಅಥವಾ ಒಬ್ಬ ಅರಬಿಯೇತನಿಗೆ ಅರಬನ ಮೇಲೆ ದೇವಭಕ್ತಿಯಲ್ಲಿ ಹೊರತು ಯಾವುದೇ ಶ್ರೇಷ್ಠತೆ ಇಲ್ಲ."
>
> (ಸಾದುಲ್ ಮಆದ್)

ಜಾತಿ-ಮತದ ಹೆಸರಿನಲ್ಲಿ ಸಾವಿರಾರು ವರ್ಷಗಳಿಂದ ಈ ಮಣ್ಣಿನಲ್ಲಿ ರಕ್ತದ ಹೊಳೆಗಳು ಹರಿದಿವೆ. ವರ್ಗ, ವರ್ಣ, ಭಾಷೆಯ ಹೆಸರಿನಲ್ಲಿ ಕಣ್ಣೀರು ಕುಡಿಯುವ ಕಪ್ಪು ಮಕ್ಕಳ ದೀನ ರೋದನ ಇಂದು ಸಹ ಕೇಳಿ ಬರುತ್ತದೆ. ಭಾಷೆಯ ಬಗ್ಗೆ ಪಕ್ಷಪಾತ ವಿವಿಧ ಭಾಷೆಗಳನ್ನಾಡುವ ಜನರಿಂದ ಕೂಡಿದ ರಾಷ್ಟ್ರಗಳ ಅಖಂಡತೆಗೂ ಐಕ್ಯಕ್ಕೂ ಅಪಾಯವನ್ನುಂಟುಮಾಡುವ ಕಾಲಘಟ್ಟದಲ್ಲಿ ನಾವಿದ್ದೇವೆ. ಆದರೆ ಹದಿನಾಲ್ಕು ಶತಮಾನಗಳನ್ನು ಹಿಂದೆ ಹಾಕಿದ ಪವಿತ್ರ ಇಸ್ಲಾಮಿನ ನಿತ್ಯನೂತನವೂ ಅಸಂದಿಗ್ಧವೂ ಆದ ಘೋಷಣೆ ಜಾತಿ-ಮತ, ವರ್ಗ-ವರ್ಣ, ಭಾಷೆ-ವೇಷ ಇವುಗಳ ಆಧಾರದಲ್ಲಿ ಮನುಷ್ಯರೆಡೆಯಲ್ಲಿ ಯಾವುದೇ ಪಕ್ಷಪಾತ ಮಾಡಬಾರದು ಎಂದಾಗಿದೆ.

ಮುಹಮ್ಮದ್ ಪೈಗಂಬರ್(ಸ) ತನ್ನ ಜೀವಿತಾಂತ್ಯದಲ್ಲಿ ಹಜ್ಜತುಲ್ ವಿದಾದಲ್ಲಿ ಮಾಡಿದ ಇತಿಹಾಸ ಪ್ರಸಿದ್ಧ ಭಾಷಣದಲ್ಲಿ ಹೀಗೆ ಹೇಳಿದರು:

> "ಎಲೈ ಜನರೆ, ಅಲ್ಲಾಹನು ನಿಮ್ಮ ಜೀವವನ್ನೂ ಧನವನ್ನೂ ಅಂತ್ಯ ಕಾಲದವರೆಗೆ ಪರಸ್ಪರ ಆಕ್ರಮಣದಿಂದ ಸುರಕ್ಷಿತಗೊಳಿಸಿದ್ದಾನೆ. ನೀವು ಪರಸ್ಪರ ಸಹೋದರರು. ವಿವಿಧ ಕುಟುಂಬಗಳಿಗೂ ಗೋತ್ರಗಳಿಗೂ ವರ್ಗಗಳಿಗೂ ಸೇರಿದ ನೀವೆಲ್ಲರೂ ಸಮಾನರು. ಎರಡು ಕೈಗಳ ಬೆರಳುಗಳು ಸಮಾನವಾಗಿರುವಂತೆ ಮನುಷ್ಯರೆಲ್ಲರೂ ಸಮಾನರು. ಯಾರಿಗೂ ಯಾರ ಮೇಲೂ ಯಾವುದೇ ವಿಧದ ಶ್ರೇಷ್ಠತೆ ಇಲ್ಲ. ನೆನಪಿಡಿರಿ, ನೀವು ಪರಸ್ಪರ ಏಕೋದರ ಸಹೋದರರಾಗಿದ್ದೀರಿ.

ಈ ಮಾಸವೂ ಈ ದಿನವೂ ಈ ಭೂಮಿಯೂ ನಿಮಗೆ ಎಷ್ಟು ಆದರಣೀಯವಾಗಿವೆಯೋ ಅದೇ ಪ್ರಕಾರ ಅಲ್ಲಾಹನು ನಿಮ್ಮ ಜೀವವನ್ನೂ ಧನವನ್ನೂ ಮಾನವನ್ನೂ ಪರಿಪಾವನ ಗೊಳಿಸಿದ್ದಾನೆ. ಯಾರದೇ ಜೀವ, ಧನ, ಮಾನಗಳಿಗೆ ಹಾನಿಮಾಡುವುದು ಈ ಪುಣ್ಯಭೂಮಿಯ ಮಾಹಾತ್ಮ್ಯೆಗೆ ಹಾನಿಮಾಡುವುದಕ್ಕೆ ತುಲ್ಯವಾದ ಪಾಪಕರ್ಮವಾಗಿದೆ. ನಾನು ಹೀಗೆ ಹೇಳುವುದು ಇಂದಿಗೆ ಮಾತ್ರವುಳ್ಳದ್ದಲ್ಲ. ಎಂದೆಂದಿಗೂ ಇರುವಂಥದ್ದಾಗಿದೆ. ಇದನ್ನು ಸದಾ ನೆನಪಿನಲ್ಲಿಡಿರಿ. ನಿಮ್ಮ ಯಥಾರ್ಥ ಯಜಮಾನನಾದ ಅಲ್ಲಾಹನನ್ನು ಭೇಟಿಯಾಗುವ ವರೆಗೆ ಈ ಉಪದೇಶವನ್ನು ಅನುಸರಿಸಿ ಬದುಕಿರಿ."

ಉಚ್ಚ-ನೀಚ, ಉಳ್ಳವನು-ಇಲ್ಲದವನು ಇತ್ಯಾದಿ ವ್ಯತ್ಯಾಸಗಳು ಹಾಗೂ ಪಕ್ಷಪಾತಪರವಾದ ಇತರ ವಿಚಾರಗಳನ್ನು ದೂರೀಕರಿಸುವ ವಿಷಯದಲ್ಲಿ ಇಸ್ಲಾಮಿಕ ಅಧ್ಯಾಪನೆಗಳು ಜಗತ್ತಿಗೆಲ್ಲ ಮಾರ್ಗದರ್ಶಿಯಾಗಿವೆ.

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

"ಓ ಜನರೆ, ನಿಮ್ಮನ್ನು ನಾವು ಗಂಡು-ಹೆಣ್ಣು ವ್ಯತ್ಯಾಸದಲ್ಲಿ ಮಾತ್ರ ಸೃಷ್ಟಿಸಿದ್ದೇವೆ. ನೀವು ಪರಸ್ಪರ ಗುರುತಿಸಲಿಕ್ಕೋಸ್ಕರ ನಿಮ್ಮನ್ನು ವಿವಿಧ ಗೋತ್ರಗಳನ್ನಾಗಿಯೂ ವಂಶಗಳನ್ನಾಗಿಯೂ ಮಾಡಿದ್ದೇವೆ. ನಿಮ್ಮ ಪೈಕಿ ಅತಿ ಹೆಚ್ಚು ದೇವಭಕ್ತಿಯುಳ್ಳವನು ಖಂಡಿತವಾಗಿಯೂ ದೇವದೃಷ್ಟಿಯಲ್ಲಿ ನಿಮ್ಮ ಪೈಕಿ ಅತ್ಯಂತ ಗೌರವಾರ್ಹನು. ನಿಶ್ಚಯವಾಗಿಯೂ ಅಲ್ಲಾಹನು ಸರ್ವಜ್ಞನೂ ಪ್ರಾಜ್ಞನೂ ಆಗಿದ್ದಾನೆ" (49:14)

ಕುಲ ಮಹಿಮೆ ಮತ್ತು ಜಾತಿಮತ ವ್ಯತ್ಯಾಸಗಳ ಹೆಸರಿನಲ್ಲಿ ವಿದ್ವೇಷ ಮತ್ತು ಸ್ಪರ್ಧೆ ತಾಂಡವವಾಡುತ್ತಿರುವ ಇಂದಿನ ಜನಸಮೂಹಕ್ಕೆ ಅಲ್ಲಾಹನು ನೀಡುವ ತಾಕೀತು ಇದಾಗಿದೆ: ದೇಶ, ವಂಶ, ಗೋತ್ರ ಇತ್ಯಾದಿ ವೈವಿಧ್ಯಗಳು ಪರಸ್ಪರ ಗುರುತಿಸಲಿಕ್ಕೂ ಗೌರವಿಸಲಿಕ್ಕೂ ಆಗಿದೆ ಹೊರತು ಅಹಂಭಾವ, ಅಸಹಿಷ್ಣುತೆ ಮತ್ತು ಅಕ್ರಮವಾಗಿ ವರ್ತಿಸಲಿಕ್ಕೋಸ್ಕರವಲ್ಲ. ಹಾಗೆ ಮಾಡುವವರು ಇಸ್ಲಾಮಿಕ ಅಧ್ಯಾಪನಕ್ಕೆ ವಿರುದ್ಧವಾಗಿ ನಡೆಯುವವರಾಗಿದ್ದಾರೆ.

ಇಸ್ಲಾಂ ಸಮತ್ವ ಸುಂದರವೂ ಸಾರ್ವಲೌಕಿಕವೂ ಆದ ಸಾಹೋದರ್ಯವನ್ನು ಪೋಷಿಸಲು ಆಹ್ವಾನಿಸುತ್ತದೆ. ದೇಶ, ಭಾಷೆ, ವರ್ಗ, ವರ್ಣ, ದನಿಕ-ದರಿದ್ರ ಇತ್ಯಾದಿ ಭೇದಭಾವ ತೋರಿಸದೆ ತೋಳಿಗೆ ತೋಳು ಸೇರಿಸಿ ಸಾಲಾಗಿ ನಿಂತುಕೊಂಡು ಚರಾಚರಗಳನ್ನು ಸೃಷ್ಟಿಸಿ ಪರಿಪಾಲಿಸುವ ಕಾರುಣ್ಯನಿಧಿಯಾದ ಏಕದೇವನೊಡನೆ ಸಂಬಂಧವನ್ನು ಸ್ಥಾಪಿಸುವ ಇಸ್ಲಾಮಿಕ ಪ್ರಾರ್ಥನಾಕ್ರಮ ಸಹ ಅದರ ಮಹತ್ತರ ಘೋಷಣೆಯಾಗಿದೆ. ಇಸ್ಲಾಂ ಬೋಧಿಸುವ ದೇವನು ಸಕಲ ಸಮುದಾಯಗಳ ರಕ್ಷಕನೂ ಸರ್ವ ಕಾಲ ಘಟ್ಟಗಳ ನಿಯಾಮಕನೂ ಆಗಿದ್ದಾನೆ. ಸರ್ವ ಧರ್ಮಗಳ ಕೇಂದ್ರಬಿಂದುವಾದ ಈ ಏಕದೇವನೊಡನೆ ಜಾತಿ-ಮತ ವರ್ಗ-ವರ್ಣ ವ್ಯತ್ಯಾಸ ರಹಿತವಾಗಿ ಸಂಪರ್ಕ ಸ್ಥಾಪಿಸುವುದಾದರೆ ವಿಶ್ವ ಸಾಹೋದರ್ಯ ಹಾಗೂ ಮಾನವ ಮೈತ್ರಿ ಸಾಧ್ಯವಾಗುವುದು.

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ) ಹೀಗೆ ಹೇಳುತ್ತಾರೆ :

"ಪ್ರಿಯ ದೇಶ ಬಾಂಧವರೆ, ಸಹಾನುಭೂತಿಯ ಉಪದೇಶವನ್ನೀಯದ ಧರ್ಮವು ಯಥಾರ್ಥವಾದ ಧರ್ಮವಲ್ಲ. ಹಾಗೆಯೇ ಸಹಾನುಭೂತಿಯನ್ನು ತೋರಿಸದ ಮನುಷ್ಯನು ಮನುಷ್ಯನೆಂದು ಕರೆಯಲ್ಪಡಲು ಅರ್ಹನಲ್ಲ. ದೇವರು ಯಾವುದೇ ಸಮುದಾಯದೊಡನೆ ಭೇದಭಾವ ತೋರಿಸಲಿಲ್ಲ. ಆರ್ಯಾವರ್ತದ ಪೂರ್ವಿಕರಿಗೆ ಅವನು ಏನೆಲ್ಲ ಶಕ್ತಿ ಸಾಮರ್ಥ್ಯಗಳನ್ನು ನೀಡಿದ್ದನೋ ಅಂಥ ಶಕ್ತಿ ಸಾಮರ್ಥ್ಯಗಳನ್ನು ಅವನು ಅರಬರಿಗೂ ಪಾರ್ಸಿಯರಿಗೂ ಸಿರಿಯಾದವರಿಗೂ ಚೀನೀಯರಿಗೂ ಜಾಪಾನೀಯರಿಗೂ ಯುರೋಪಿಯನರಿಗೂ ಅಮೇರಿಕನರಿಗೂ ನೀಡಿರುವನು. ಸಕಲ ಜನಾಂಗಗಳಿಗೂ ದೇವರ ಭೂಮಿಯು ಒಂದು ವಿಶಾಲವಾದ ಪ್ರಾಂಗಣದಂತಿದೆ. ಹಾಗೆಯೇ ಎಲ್ಲರಿಗೂ ಸೂರ್ಯ, ಚಂದ್ರ, ನಕ್ಷತ್ರಾದಿಗಳು ಪ್ರಕಾಶವನ್ನು ಕೊಡುತ್ತವೆಯಲ್ಲದೆ ಅವುಗಳು ಮಾಡಬೇಕೆಂದು ದೇವರು ನಿಶ್ಚಯಿಸಿದ ಮತ್ತಿತರ ಕಾರ್ಯಗಳನ್ನು ಸಹ ಅವು ನಿರ್ವಹಿಸುತ್ತವೆ. ಎಲ್ಲ ಜಾತಿಯವರೂ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಾಯು, ನೀರು, ಬೆಂಕಿ, ಮಣ್ಣು ಎಂಬಿತ್ಯಾದಿಗಳಿಂದ ಪ್ರಯೋಜನ ಪಡೆಯುತ್ತಾರೆ. ಹಾಗೆಯೇ ಭೂಮಿಯ ಉತ್ಪತ್ತಿಗಳಾದ ಧಾನ್ಯಗಳನ್ನೂ ಮೂಲಿಕೆಗಳನ್ನೂ ಫಲಪುಷ್ಪಾದಿಗಳನ್ನೂ ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸುತ್ತಾರೆ. ಮನುಷ್ಯ ಕುಲಕ್ಕೆ ಒಳಿತನ್ನುಂಟು ಮಾಡಬೇಕೆಂದೂ ಸಂಕುಚಿತ ಮನೋಭಾವ ವಾಗಲಿ ಅಸಹಾನುಭೂತಿ ಯಾಗಲಿ ನಮ್ಮಲ್ಲಿ ಇರಬಾರ ದೆಂದೂ ಪರಮಾತ್ಮನ ಈ ವಿಶಾಲವಾದ ಉದಾರತೆ ನಮಗೆ ಕಲಿಸಿಕೊಡುತ್ತದೆ."

(ಪೈಗಾಮೆ ಸುಲ್ಹ್)

ವಿವಿಧ ಧರ್ಮಗ್ರಂಥಗಳ ಅಧ್ಯಾಪನೆಗಳನ್ನು ನಿಷ್ಪಕ್ಷವಾಗಿ ಅಧ್ಯಯನ ಮಾಡುವಾಗ ಸಕಲ ಧರ್ಮಗಳ ಅಸ್ತಿವಾರ ಏಕದೇವ ನಂಬಿಕೆಯಲ್ಲಿ ಅಧಿಷ್ಠಿತವಾಗಿದೆ ಎಂದು ಮನಗಾಣಲು ಸಾಧ್ಯ. ಉದಾಹರಣೆಗಾಗಿ ಹೈಂದವ, ಕ್ರೈಸ್ತವ ಧರ್ಮಗ್ರಂಥಗಳ ಕೆಲವು ಅಧ್ಯಾಪನೆಗಳೆಡೆಗೆ ಕಣ್ಣುಹಾಯಿಸೋಣ.

## ಬೈಬಲ್‌ನಲ್ಲಿ

ಕ್ರೈಸ್ತವ ಧರ್ಮಗ್ರಂಥವಾದ ಬೈಬಲಿನ ಹಳೆಯ ಮತ್ತು ಹೊಸ ಒಡಂಬಡಿಕೆಗಳನ್ನು ಓದಿದರೆ ಕ್ರೈಸ್ತವ ನಂಬಿಕೆಯ ಅಡಿಪಾಯ ಅಚಂಚಲವಾದ ಏಕದೇವನಲ್ಲಿ ಅಧಿಷ್ಠಿತವಾಗಿದೆ ಎಂದು ಸಾಮಾನ್ಯರಿಗೆ ಕೂಡ ಮನವರಿಕೆಯಾಗುವ ಸತ್ಯವಾಗಿದೆ.

ಹಳೆಯ ಒಡಂಬಡಿಕೆ ಹೇಳುವುದನ್ನು ನೋಡಿರಿ :

"ಇಸ್ರಾಯೇಲ್ಯರೇ, ಕೇಳಿರಿ; ನಮ್ಮ ದೇವರಾದ ಕರ್ತನು ಒಬ್ಬನೇ ದೇವರು; ನೀವು ನಿಮ್ಮ ದೇವರಾದ ಕರ್ತನನ್ನು

ಪೂರ್ಣಹೃದಯದಿಂದಲೂ ಪೂರ್ಣಪ್ರಾಣದಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು."

(ಧರ್ಮೋಪದೇಶ ಕಾಂಡ 6:4,5)

"ಕರ್ತನೊಬ್ಬನೇ ದೇವರು, ಬೇರೆ ದೇವರೇ ಇಲ್ಲವೆಂದು ನೀವು ತಿಳಿದುಕೊಳ್ಳುವುದಕ್ಕಾಗಿ ಇದೆಲ್ಲಾ ನಿಮಗೆ ಮಾತ್ರ ತೋರಿಸಲ್ಪಟ್ಟಿತು. ಆತನು ನಿಮ್ಮ ಶಿಕ್ಷಣಕ್ಕೋಸ್ಕರ ಆಕಾಶದಿಂದ ತನ್ನ ಸ್ವರವನ್ನು ನಿಮಗೆ ಕೇಳಿಸುವಂತೆ ಮಾಡಿದನು;......................... ನೀವು ಇದನ್ನೆಲ್ಲಾ ಆಲೋಚಿಸಿ ಆಕಾಶದಲ್ಲಿಯೂ ಭೂಮಿಯಲ್ಲಿಯೂ ಕರ್ತನೊಬ್ಬನೇ ದೇವರು, ಬೇರೆ ಯಾವ ದೇವರೂ ಇಲ್ಲವೆಂಬುದನ್ನು ಈಗ ಗ್ರಹಿಸಿಕೊಂಡು ಜ್ಞಾಪಕದಲ್ಲಿಡಬೇಕು."

(ಧರ್ಮೋಪದೇಶ ಕಾಂಡ 4:35-39)

"ದೇವರೇ, ಕರ್ತನೇ, ನೀನೇ ದೊಡ್ಡವನು; ನಿನ್ನ ಸಮಾನರು ಯಾರೂ ಇಲ್ಲ. ನಾವು ಕೇಳಿದವುಗಳನ್ನೆಲ್ಲಾ ಆಲೋಚಿಸಿ ನೋಡಿದರೆ ನಿನ್ನ ಹೊರತು ದೇವರೇ ಇಲ್ಲವೆಂಬುದು ನಿಶ್ಚಯ."

(2 ಸಮುವೇಲನು 7:22)

"ಇಸ್ರಾಯೇಲ್ ದೇವರಾದ ಕರ್ತನೇ, ಭೂಲೋಕದಲ್ಲಿಯೂ ಪರಲೋಕದಲ್ಲಿಯೂ ನಿನಗೆ ಸಮಾನನಾದ ದೇವರಿಲ್ಲ." (1 ಅರಸುಗಳು 8:23)

"ಮಹತ್ಕಾರ್ಯಗಳನ್ನು ನಡಿಸುವವರಲ್ಲಿ ಅದ್ವಿತೀಯನೂ ಇಸ್ರಾಯೇಲ್ಯರ ದೇವರೂ ಆದ ಕರ್ತದೇವರಿಗೆ ಸ್ತೋತ್ರವು. ಆತನ ಪ್ರಭಾವವುಳ್ಳ ನಾಮಕ್ಕೆ ಸದಾಕಾಲವೂ ಪ್ರಣಾಮವಿರಲಿ; ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿರಲಿ. ಆಮೆನ್. ಆಮೆನ್. (ಕೀರ್ತನೆಗಳು 72:18, 19)

ಮೇಲೆ ಉದ್ಧರಿಸಲಾದ ಬೈಬಲ್ ವಚನಗಳಲ್ಲದೆ ಹಳೆಯ ಒಡಂಬಡಿಕೆಯ 2 ಅರಸುಗಳು 19:15-19, ಯೆಶಾಯ 44:6-7, 45:5-7, ಕೀರ್ತನೆಗಳು 86:8-10, ಧರ್ಮೋಪದೇಶ ಕಾಂಡ 4:35, 7:9, 2 ಸಮುವೇಲನು 22:32-33, 2 ಪೂರ್ವಕಾಲ ವೃತ್ತಾಂತ 6:14 ಮುಂತಾದ ಅನೇಕ ವಚನಗಳು ದೇವರ ಏಕತೆಯನ್ನು ಸಾರುತ್ತವೆ.

ಇನ್ನು ಬೈಬಲಿನ ಹೊಸ ಒಡಂಬಡಿಕೆಯ ಅಧ್ಯಾಪನವೇನೆಂದು ನೋಡೋಣ :

"ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿ ಕೊಟ್ಟ ಯೇಸು ಕ್ರಿಸ್ತನನ್ನೂ ತಿಳಿಯುವದೇ ನಿತ್ಯಜೀವವು."

(ಯೋಹಾನ 17:3)

"ಜಗತ್ತಿನಲ್ಲಿ ವಿಗ್ರಹವು ಏನೂ ಅಲ್ಲವೆಂದೂ ಒಬ್ಬ ದೇವರಿದ್ದಾನೆ ಹೊರತು ಬೇರೆ ದೇವರಿಲ್ಲವೆಂದೂ ಬಲ್ಲೆವು. ಅನೇಕರನ್ನು ದೇವರುಗಳೆಂದೂ ಕರ್ತರೆಂದೂ ಪೂಜಿಸುವುದುಂಟು ನಿಜವೇ; ಆಕಾಶದಲ್ಲಿಯಾಗಲಿ ಭೂಮಿಯ ಮೇಲೆಯಾಗಲಿ ದೇವರುಗಳೆನಿಸಿ ಕೊಳ್ಳುವವರಿದ್ದಾರೆ, ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ತಂದೆಯೆಂಬಾತನೇ; ಆತನು ಸಮಸ್ತಕ್ಕೂ ಮೂಲಕಾರಣನು; ನಾವು ಆತನಿಗಾಗಿ ಉಂಟಾದೆವು."

(1 ಕೊರಿಂಥದವರಿಗೆ 8:4-6)

"ಜಗತ್ತನ್ನೂ ಅದರಲ್ಲಿರುವ ಎಲ್ಲಾ ವಸ್ತುಗಳನ್ನೂ ಉಂಟುಮಾಡಿದ ದೇವರು ಭೂಮ್ಯಾಕಾಶಗಳ ಒಡೆಯನಾಗಿರುವುದರಿಂದ ಆತನು ಕೈಯಿಂದ ಕಟ್ಟಿರುವ ಗುಡಿಗಳಲ್ಲಿ ವಾಸಮಾಡುವವನಲ್ಲ; ತಾನೇ ಎಲ್ಲರಿಗೂ ಜೀವಶ್ವಾಸ ಮುಂತಾದದ್ದೆಲ್ಲವನ್ನೂ ಕೊಡುವವನಾಗಿರಲಾಗಿ ಕೊರತೆಯಿದ್ದವನಂತೆ ಮನುಷ್ಯರ ಕೈಗಳಿಂದ ಸೇವೆಹೊಂದುವವನೂ ಅಲ್ಲ."

(ಅಪೊಸ್ತಲರ ಕೃತ್ಯಗಳು 17:24,25)

"ತಾವು ಜ್ಞಾನಿಗಳೆಂದು ಹೇಳಿಕೊಂಡು ಅವರು ಹುಚ್ಚರಾದರು. ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯ ಪಶು ಪಕ್ಷಿ ಸರ್ಪಾದಿಗಳ ಮೂರ್ತಿಯನ್ನು ಮಾಡಿಕೊಂಡರು."

(ರೋಮಾಪುರದವರಿಗೆ 1: 22, 23)

"ಗುರುವೇ, ಧರ್ಮಶಾಸ್ತ್ರದಲ್ಲಿ ಯಾವ ಆಜ್ಞೆ ಮುಖ್ಯವಾದದ್ದು ಎಂದು ಆತನನ್ನು(ಯೇಸುವನ್ನು) ಕೇಳಿದ್ದಕ್ಕೆ ಆತನು- ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು ...... ಎಂದು ಹೇಳಿದನು"

(ಮತ್ತಾಯ 22:36-38)

ಇವುಗಳಲ್ಲದೆ, ಮತ್ತಾಯ 4:10, ಯೋಹಾನ 5:44, ಮಾರ್ಕ 12:30,32,33 ಮುಂತಾದ ಕಡೆಗಳಲ್ಲಿ ಏಕದೇವ ನಂಬಿಕೆಯ ಬಗ್ಗೆ ಬೋಧಿಸಿರುವುದಾಗಿ ಕಾಣಬಹುದು.

ಸಂಕ್ಷಿಪ್ತವಾಗಿ, ಬೈಬಲಿನ ಹಳೆಯ ಮತ್ತು ಹೊಸ ಒಡಂಬಡಿಕೆಗಳ ಅಧ್ಯಾಪನೆಗಳಿಂದ ನಿಸ್ಸಂದೇಹವಾಗಿ ತಿಳಿದು ಬರುವುದೇನೆಂದರೆ ಕ್ರೈಸ್ತ ಧರ್ಮದ ಮೂಲ ಸಿದ್ಧಾಂತ ದೇವರ ಏಕತೆ ಎಂಬುದಾಗಿದೆ.

## ಹಿಂದೂ ಧರ್ಮಗ್ರಂಥಗಳಲ್ಲಿ

ಇನ್ನು ಹಿಂದೂ ಧರ್ಮಗ್ರಂಥಗಳ ಕಡೆಗೆ ಕಣ್ಣು ಹಾಯಿಸೋಣ.

ಮಹಾತ್ಮ ಶ್ರೀ ಕೃಷ್ಣ ಏಕದೇವ ವಿಶ್ವಾಸದ ಅಧ್ಯಾಪನೆಗಳನ್ನು ನೀಡಿದ್ದರೆಂಬುದನ್ನು ಅವರ ಗೀತೋಪದೇಶದಿಂದ ಮನಗಾಣಲು ಪ್ರಯಾಸವಿಲ್ಲ. ಭಗವದ್ಗೀತೆಯಲ್ಲಿ ಅರ್ಜುನನಿಗೆ ಅವರು ಹೀಗೆ

ಉಪದೇಶಿಸುತ್ತಾರೆ:

ಈಶ್ವರಃ ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ|
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ||

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ|
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್||

ಎಲೈ ಅರ್ಜುನ, ಸರ್ವಪ್ರಾಣಿಗಳನ್ನು ಯಂತ್ರಾರೂಢವಾದ ಬೊಂಬೆಗಳಂತೆ ಮಾಯೆಯಿಂದ ತಿರುಗಿಸುತ್ತಾ ಈಶ್ವರನು ಸರ್ವಜೀವರ ಹೃದಯಪ್ರದೇಶದಲ್ಲಿ ನೆಲೆಸಿರುತ್ತಾನೆ. ಎಲೈ ಅರ್ಜುನ, ಸರ್ವಾತ್ಮನಾ ಅವನನ್ನೇ ಶರಣುಹೊಂದು. ಅವನ ಅನುಗ್ರಹದಿಂದ ಪರಮಶಾಂತಿಯನ್ನೂ ಶಾಶ್ವತವಾದ ಸ್ಥಾನವನ್ನೂ ಹೊಂದುವೆ. (ಶ್ರೀಮದ್ಭಗವದ್ಗೀತಾ 18:61,62)

ಅಹುದು, ಏಕದೇವನಾದ ಸರ್ವೇಶ್ವರನ ಪಾದಗಳಲ್ಲಿ ಶರಣುಹೊಂದುವವನಿಗೆ ನಿತ್ಯಶಾಂತಿಯೂ ಮೋಕ್ಷವೂ ದೊರಕುವುದೆಂದು ಮಹಾತ್ಮ ಶ್ರೀ ಕೃಷ್ಣ ಹೇಳುತ್ತಾರೆ.

ಆ ಸತ್ಯೇಕ ದೇವನ ಗುಣಗಣಗಳನ್ನು ಅವರು ಹೀಗೆ ಪ್ರಕೀರ್ತನ ಮಾಡುತ್ತಾರೆ :

ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್|
ಪ್ರಭವ ಪ್ರಲಯಃ ಸ್ಥಾನಂ ನಿಧಾನಂ ಬೀಜಮ್ಮಯಮ್||

ಕರ್ಮ ಫಲವೂ ಪೋಷಕನೂ ಸ್ವಾಮಿಯೂ ಸರ್ವಪ್ರಾಣಿಗಳ ಸಾಕ್ಷಿಯೂ ವಾಸಸ್ಥಾನವೂ ರಕ್ಷಕನೂ ಹಿತೈಷಿಯೂ ಜಗತ್ತಿನ ಉತ್ಪತ್ತಿ ಪ್ರಳಯ ಸ್ಥಾನಗಳೂ ಆಶ್ರಯವೂ ಕಾಲಾಂತರದಲ್ಲಿ ಪ್ರಾಣಿಗಳು ಉಪಭೋಗಿಸಲು ಬರುವ ಕರ್ಮಫಲವೂ ಜಗತ್ತಿನ ಅಕ್ಷಯ ಬೀಜವೂ ಅವನು ಆಗಿರುವನು.

(ಶ್ರೀ ಮದ್ಭಗವದ್ಗೀತಾ 9:18)

ಯೋ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಮ್|
ಅಸಂಮೂಢಃ ಸಮರ್ತ್ಯೇಷು ಸರ್ವಪಾಪ್ಯೆ ಪ್ರಮುಚ್ಯತೇ||

ಯಾವನು ನನ್ನನ್ನು(ದೇವರನ್ನು) ಜನ್ಮರಹಿತನೆಂದೂ ಆದಿಯಿಲ್ಲದವನೆಂದೂ ಸರ್ವಲೋಕ ಮಹೇಶ್ವರನೆಂದೂ ತಿಳಿಯುತ್ತಾನೆಯೋ ಅವನು ಮನುಷ್ಯರಲ್ಲಿ ಮೋಹಶೂನ್ಯನಾಗಿ ಸರ್ವಪಾಪಗಳಿಂದಲೂ ಬಿಡಲ್ಪಡುತ್ತಾನೆ.

(ಶ್ರೀ ಮದ್ಭಗವದ್ಗೀತಾ 10:3)

ಈ ಪ್ರಕಾರ ಶ್ರೀ ಕೃಷ್ಣ ಹೇಳಿದ ಸರ್ವೇಶ್ವರನಾದ ದೇವರ ಮಹದ್ಗುಣಗಳನ್ನೆಲ್ಲ ಪವಿತ್ರ ಖುರ್‌ಆನಿನ ಅಧ್ಯಾಪನೆಗಳಲ್ಲಿ ಸಹ ನಮಗೆ ಕಾಣಲು ಸಾಧ್ಯ.

ಹಿಂದೂ ದೇವಸ್ಥಾನ ಮತ್ತು ಮಂದಿರಗಳಿಂದ ಸಾಮಾನ್ಯವಾಗಿ ಕೇಳಿ ಬರುವ ಒಂದು ಮಂತ್ರೋಚ್ಚಾರಣೆಯಿದೆ :

ಓಂ ಗುರುರ್ ಬ್ರಹ್ಮಾ ಗುರುರ್ ವಿಷ್ಣು; ಗುರುರ್ ದೇವೋ ಮಹೇಶ್ವರಃ

ಗುರುರ್ ಸಾಕ್ಷಾತ್ ಪರಂಬ್ರಹ್ಮ ತಸ್ಮೈಮ ಶ್ರೀ ಗುರುವೇ ನಮಃ

ಬ್ರಹ್ಮ, ವಿಷ್ಣು, ಮಹೇಶ್ವರ ಆಧ್ಯಾತ್ಮಿಕ ಗುರುಗಳಾಗಿದ್ದಾರೆ. ಆದರೆ ಯಥಾರ್ಥದಲ್ಲಿ ನಮ್ಮ ಸಾಕ್ಷಾತ್ ಯಜಮಾನ ಮತ್ತು ಗುರು ಪರಬ್ರಹ್ಮನಾದ ಪರಮೇಶ್ವರನಾಗಿದ್ದಾನೆ. ಆ ಏಕದೇವನ ಪವಿತ್ರ ಸನ್ನಿಧಾನದಲ್ಲಿ ನಾನಿದೋ ನಮ್ರತೆಯಿಂದ ಶಿರಬಾಗಿ ನಮಿಸುತ್ತೇನೆ.

ಆ ದೇವನ ನಾಮಗಳು ಅಸಂಖ್ಯಾತವಾದರೂ ಅವನು ಏಕನು.

ಏಕಂ ಸತ್ ವಿಪ್ರಾ ಬಹುಧಾ ವದಂತಿ

ಅವನ ಸತ್ತೆ ಒಂದೇ ಆದರೂ ವಿವಿಧ ನಾಮಗಳಿಂದ ಅವನು ಕರೆಯಲ್ಪಡುತ್ತಾನೆ.

ಶ್ರೀ ಆದಿ ಶಂಕರಾಚಾರ್ಯ ಸ್ವಾಮಿಯವರು ತಾನು ಗೈಯ್ದ ಮೂರು ಅಪರಾಧಗಳ (ತ್ರಿದೋಷಗಳ) ಕುರಿತು ದೇವಸನ್ನಿಧಿಯಲ್ಲಿ ವಿಲಾಪಿಸುವುದನ್ನು ನೋಡಿರಿ:

ರೂಪ ರೂಪ ವಿವರ್ಜಿತಸ್ಯ ಭವತೋ
ಧ್ಯಾನೇನ ಯತ್ ಕಲ್ಪಿತಂ
ಸ್ತುತ್ಯಾ ನಿರ್ವಚನೀಯತಾ ಖಿಲ ಗುರೋ
ದೂರೀಕೃತಾಯನ್ಮಯಾ
ವ್ಯಾಪಿತ್ಯಂಚ ನಿರಾಕೃತಂ ಭವತಾಯ
ತೀರ್ಥ ಯಾತ್ರಾ ದಿನಾ
ಕ್ಷಂತವ್ಯಂ ಜಗದೀಶ ತದ್ವಿಕಲತಾ
ದೋಷತ್ರಯಂ ಮಲ್‌ಕೃತಂ

ಅರೂಪಿಯಾದ ನಿನಗೆ ರೂಪವನ್ನು ಕಲ್ಪಿಸಿಯೂ ಅನಿರ್ವಚನೀಯನಾದ ನಿನ್ನನ್ನು ನಿಕ್ಷಿಪ್ತ ಮಾತು ಮತ್ತು ಸ್ತುತಿ ಕೀರ್ತನೆಗಳ ಮೂಲಕ ಆರಾಧಿಸಿಯೂ ಸರ್ವವ್ಯಾಪಿಯಾದ ನಿನ್ನನ್ನು ಅರಸುತ್ತಾ ತೀರ್ಥ ಕ್ಷೇತ್ರಗಳಲ್ಲಿ ಅಲೆದು ನಿಕ್ಷಿಪ್ತವಾದ ಕ್ಷೇತ್ರದಲ್ಲಿ ಪ್ರತಿಷ್ಠಿಸಿದೆನು. ಇವು ನಾನು ಮಾಡಿದ ದೋಷಗಳು. ಜಗದೀಶಾ, ಈ ಮೂರು ಅಪರಾಧಗಳನ್ನೂ ನೀನು ಕ್ಷಮಿಸಿಕೊಡು. (ಗೀತಾ ಗೋವಿಂದಂ)

ಅದ್ವೈತ ಸಿದ್ಧಾಂತದ ಆಚಾರ್ಯನಾದ ಆದಿ ಶಂಕರಾಚಾರ್ಯರು ಸಹ ಕೊನೆಗೆ ಏಕನಾದ, ಸರ್ವವ್ಯಾಪಿಯಾದ, ಅರೂಪನಾದ ದೇವನಲ್ಲಿ ಶರಣು ಹೊಂದಿದರು.

ಶ್ರೀ ಕೃಷ್ಣ ಮತ್ತು ಶ್ರೀ ರಾಮ ಇಬ್ಬರೂ ದೇವರ ವರಿಷ್ಠ ದಾಸರೂ ಆರ್ಷ ಭಾರತವನ್ನು ಧಾರ್ಮಿಕ ಅಧಃಪತನದಿಂದ ರಕ್ಷಿಸಲು ದೇವರಿಂದ ನಿಯುಕ್ತರಾದ ಸಂದೇಶವಾಹಕರೂ ಆಗಿದ್ದರು. ಅನಂತರದ ಕಾಲದಲ್ಲಿ ಇವರನ್ನು ಅನುಯಾಯಿಗಳು ದೇವರೆಂದು ಪೂಜಿಸಲು ತೊಡಗಿದರು. ಈ ಇಬ್ಬರು ಮಹಾತ್ಮರುಗಳು ತಾವು ದೇವರೆಂದಾಗಲಿ

ತಮ್ಮ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕೆಂದಾಗಲಿ ಬೋಧಿಸಿರಲಿಲ್ಲ. ಬದಲು, ತಾವು ಕೇವಲ ಮನುಷ್ಯರೆಂದು ಅವರು ಹೇಳಿದ್ದರು. ಮುಹಮ್ಮದ್ ಪೈಗಂಬರ್(ಸ) ಸಹ ತಾನು ಕೇವಲ ಒಬ್ಬ ಮನುಷ್ಯನಾಗಿದ್ದೇನೆಂದು ದೇವಾಜ್ಞೆಯಂತೆ ನುಡಿದಿದ್ದರು:

**"(ಮುಹಮ್ಮದ್) ನೀನು ಹೇಳು - ನಾನು ನಿಮ್ಮ ಹಾಗೆಯೇ ಇರುವ ಒಬ್ಬ ಮನುಷ್ಯನಾಗಿದ್ದೇನೆ."**

ಇದೇ ಪ್ರಕಾರ ಶ್ರೀ ಕೃಷ್ಣ, ಶ್ರೀ ರಾಮ, ಶ್ರೀ ಯೇಸು ಸಹಿತ ಎಲ್ಲ ಪ್ರವಾದಿಗಳು ದೇವರ ವರಿಷ್ಠದಾಸರಾದ ಮನುಷ್ಯರಾಗಿದ್ದರು.

ಶ್ರೀ ರಾಮ ಹೀಗೆ ಹೇಳುತ್ತಾರೆ :

**"ಆತ್ಮಾನಾಂ ಮಾನುಷಂ ಮನ್ಯೇರಾಮಂ ದಶರಥಾತ್ಮಜಂ"**

"ದಶರಥ ಪುತ್ರನಾದ ಒಬ್ಬ ಮನುಷ್ಯನೆಂದಲ್ಲದೆ ನಾನು ನನ್ನನ್ನು ಬೇರೇನೂ ಭಾವಿಸುವುದಿಲ್ಲ." (ಯುದ್ಧಕಾಂಡ 117:11)

ಶ್ರೀ ಕೃಷ್ಣ ಮತ್ತು ಶ್ರೀರಾಮ ದೇವನಿಯುಕ್ತರಾದ ಸಂದೇಶ ವಾಹಕರೂ ಏಕದೇವ ವಿಶ್ವಾಸದ ಬೋಧಕರೂ ಆಗಿದ್ದರು. ಅವರು ಎಂದೂ ತಾವು ದೇವರೆಂದಾಗಲಿ ಆರಾಧನೆಗರ್ಹರೆಂದಾಗಲಿ ವಾದಿಸಿರಲಿಲ್ಲ. ಅವರು ಏಕದೇವನ ಸನ್ನಿಧಿಯಲ್ಲಿ ಸರ್ವವನ್ನೂ ಸಮರ್ಪಿಸಿದ ಸನ್ಮಾರ್ಗಿಗಳಾದ ಸತ್ಯಸಂದೇಶವಾಹಕರಾಗಿದ್ದರು.

ಸಂಕ್ಷಿಪ್ತವಾಗಿ ಹೇಳುವುದಾದರೆ, ವಿವಿಧ ಮತಾಚಾರ್ಯರುಗಳೂ ಆಧ್ಯಾತ್ಮಿಕೋದ್ಧಾರಕರೂ ಬಹುದೇವಾರಾಧಕರಾಗಲಿ ವಿಗ್ರಹಾರಾಧಕರಾಗಲಿ ಆಗಿರಲಿಲ್ಲ. ಅವರ ಅಧ್ಯಾಪನೆಗಳೂ ಉಪದೇಶಗಳೂ ಅದನ್ನು ಸ್ಪಷ್ಟಪಡಿಸುತ್ತವೆ.

**ಇಸ್ಲಾಂ ಧರ್ಮದಲ್ಲಿ**

ಇಸ್ಲಾಮಿಕ ಅಧ್ಯಾಪನಗಳಲ್ಲಿ ದೇವನ ಪರಿಶುದ್ಧವೂ ಪರಿಪೂರ್ಣವೂ ಆದ ಏಕತೆಯ ಕುರಿತು ವಿಶದವಾಗಿ ಮತ್ತು ಸ್ಪಷ್ಟವಾಗಿ ಪ್ರತಿಪಾದಿಸಲಾಗಿದೆ. ಒಬ್ಬ ಇಸ್ಲಾಂ ಧರ್ಮ ವಿಶ್ವಾಸಿಯು ದೇವನೊಡನಿರುವ ಸಂಬಂಧದ ತಿರುಳು ಅಚಂಚಲವಾದ ಏಕದೇವ ವಿಶ್ವಾಸವಾಗಿದೆ. ಅಲ್ಲಾಹನ ಏಕತೆಯ ಬಗ್ಗೆ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ :

**ನೀನು ಘೋಷಿಸು : ದೇವನ ಮಹತ್ವಪೂರ್ಣವಾದ ಸತ್ತೆ ಏಕವು. ಅವನು ಯಾರ ಆಶ್ರಿತನೂ ಅಲ್ಲ. ಆದರೆ ಸರ್ವವೂ ಅವನಲ್ಲಿ ಆಶ್ರಿತವಾಗಿವೆ. ಅವನು ಜಾತನಲ್ಲ; ಜನಕನೂ ಅಲ್ಲ. ಅವನು ಅತುಲ್ಯನಾಗಿದ್ದಾನೆ.** (112:1-5)

ಇನ್ನೊಂದೆಡೆಯಲ್ಲಿ ಖುರ್‌ಆನ್ ಹೇಳುತ್ತದೆ:

**"ನೀವು ನಿಮ್ಮ ಪಿತರನ್ನು ಸ್ಮರಿಸುವಂತೆ ಅಥವಾ ಅದಕ್ಕಿಂತ ಹೆಚ್ಚಾಗಿ ಅಲ್ಲಾಹನನ್ನು ಸ್ಮರಿಸಿರಿ."**

ಇಲ್ಲಿ ಅಲ್ಲಾಹನು ತನ್ನ ಏಕತೆಯ ಬಗ್ಗೆ ಸಂಪೂರ್ಣವಾಗಿಯೂ ಸ್ವಾಭಾವಿಕವಾದ ಉದಾಹರಣೆಯನ್ನು ತೋರಿಸುತ್ತಾನೆ. ಅಂದರೆ, ಸ್ವಾಭಿಮಾನಿಯಾದ ಯಾರೂ ತನ್ನ ಪಿತ ಒಬ್ಬನಿಗಿಂತ ಹೆಚ್ಚೆಂದು ಹೇಳಲು ಇಷ್ಟಪಡುವುದಿಲ್ಲ. ಅದೇ ಪ್ರಕಾರ ಮನುಷ್ಯನ ಆತ್ಮಾಭಿಮಾನವನ್ನು ಎಚ್ಚರಿಸುತ್ತಾ, ನೀವು ಯಾವ ರೀತಿ ನಿಮ್ಮ ಪಿತ ಒಬ್ಬನೇ ಒಬ್ಬನೆಂದು ಅಭಿಮಾನಪಡುತ್ತೀರೋ ಅದೇ ಪ್ರಕಾರ ನಿಮ್ಮ ಸೃಷ್ಟಿಕರ್ತನೂ ಪರಿಪಾಲಕನೂ ಆದ ದೇವನು ಏಕನೆಂದು ಅಭಿಮಾನಪೂರ್ವಕವಾಗಿ ನಂಬಬೇಕೆಂದೂ ಅವನಿಗೆ ಸಹಭಾಗಿಗಳನ್ನು ಕಲ್ಪಿಸಬಾರದೆಂದೂ ಪವಿತ್ರ ಖುರ್‌ಆನ್ ಕಲಿಸುತ್ತದೆ.

ದೇವನ ಏಕತೆಯಲ್ಲಿ ವಿಶ್ವಾಸವಿಡುವುದರ ಮೂಲಕ ಲೋಕದಲ್ಲಿ ಸ್ಥಾಯಿಯಾದ ಶಾಂತಿ, ಸಮಾಧಾನ ಮತ್ತು ಸಾಹೋದರ್ಯ ನೆಲೆಗೊಳ್ಳುವುದು. ಏಕದೇವನಲ್ಲಿ ವಿಶ್ವಾಸಹೊಂದಿ ಒಬ್ಬನೇ ಪಿತನ ಮಕ್ಕಳಂತೆ ವರ್ತಿಸುವವರಿಗೆ ಪರಸ್ಪರ ಪ್ರೀತಿಸಲಿಕ್ಕೂ ಗೌರವಿಸಲಿಕ್ಕೂ ಆಪತ್ಕಾಲದಲ್ಲಿ ಸಹಾಯ ಮಾಡಲಿಕ್ಕೂ ಸಾಧ್ಯವಾಗುತ್ತದೆ. ಈ ಏಕದೇವ ನಂಬಿಕೆಯನ್ನು ಕೈಗೊಂಡರೆ ಉಚ್ಚನೀಚತೆಯೂ ಸ್ಪರ್ಧಾ ಪ್ರೋಟಿಯೂ ಅಸಹಿಷ್ಣುತೆಯೂ ಇಲ್ಲದಾಗುವುವು.

ಇದು ಪರಸ್ಪರ ಜಗಳಾಡುವ ಮಕ್ಕಳಿರುವ ಮನೆಗೆ ಕುಟುಂಬದ ಯಜಮಾನನಾದ ತಂದೆ ಪ್ರವೇಶಿಸುವಾಗ ಜಗಳ ಕೊನೆಗೊಳ್ಳುವಂತೆ ಆಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿರುವರು :

**"ಮನುಷ್ಯರೆಲ್ಲರೂ ಅಲ್ಲಾಹನ ಕುಟುಂಬ."**

ಅತ್ಯಂತ ಹೃದಯಸ್ಪರ್ಶಿಯಾದ ಈ ಉದಾಹರಣೆಯಿಂದ ತಿಳಿದು ಬರುವುದೇನೆಂದರೆ, ವಿವಿಧ ಜಾತಿ, ಮತ, ವೇಷ, ಭಾಷೆ, ಸಂಸ್ಕೃತಿಗಳಿಂದ ಕೂಡಿದ ಮಾನವ ಕುಲ ಏಕದೇವನಾದ ಆ ಕುಟುಂಬನಾಥನಿಗೆ ವಿಧೇಯವಾಗಿ ಬದುಕಬೇಕೆಂಬ ಅನುಭೂತಿ ಸಂಜಾತವಾಗುವಾಗ, ತಮ್ಮ ತಪ್ಪುಗಳಿಗೆ ಶಿಕ್ಷೆ ಕೊಡಲಿಕ್ಕೂ ಕ್ಷಮೆ ನೀಡಲಿಕ್ಕೂ ಶಕ್ತನಾದ ಒಬ್ಬ ಮೇಲ್ನೋಟಗಾರ ಇದ್ದಾನೆಂದೂ ಅವನು ಸದಾಕಾಲ ತಮ್ಮ ವರ್ತನೆಗಳನ್ನು ವೀಕ್ಷಿಸುತ್ತಿದ್ದಾನೆಂದೂ ಇರುವ ನಂಬಿಕೆ ಮತ್ತು ಪ್ರಜ್ಞೆ ಉಂಟಾಗುವಾಗ ಲೋಕದಲ್ಲಿ ಸಂತುಲಿತವಾದ ಒಂದು ಸಾಮೂಹಿಕ ಜೀವಿತ ಮತ್ತು ಶಾಶ್ವತವಾದ ಶಾಂತಿ ಸ್ಥಾಪಿತವಾಗುವುದು.

ಅನ್ಯೂನ ಹಾಗೂ ಅತ್ಯಂತ ಮಹತ್ವಪೂರ್ಣವಾದ ಈ ತತ್ವದ ಆಧಾರದಲ್ಲಿ ಇಸ್ಲಾಂ ಎಲ್ಲ ಮತಸ್ಥರನ್ನು ಅವರೆಲ್ಲರ ಮೂಲ ಸಿದ್ಧಾಂತವಾದ ಏಕದೇವ ತತ್ವದೆಡೆಗೆ ಆಮಂತ್ರಿಸುತ್ತಾ ಹೀಗೆ ಹೇಳುತ್ತದೆ:

"ನೀನು ಹೇಳು: ಎಲೈ ಗ್ರಂಥ ನೀಡಲ್ಪಟ್ಟವರೇ, ನಿಮ್ಮ ಮತ್ತು ನಮ್ಮ ಮಧ್ಯೆ ಒಮ್ಮತಾಭಿಪ್ರಾಯವಿರುವ ವಿಚಾರದೆಡೆಗೆ ಬನ್ನಿರಿ. ಅಂದರೆ ನಾವು ಏಕದೇವನ ಹೊರತು ಬೇರೆ ಯಾರನ್ನೂ ಆರಾಧಿಸಬಾರದು ಮತ್ತು ಅವನಿಗೆ ಯಾರನ್ನೂ ಸಹಭಾಗಿಯನ್ನಾಗಿ ಕಲ್ಪಿಸಬಾರದು." (ಖುರ್‌ಆನ್ 3:65)

ಮೇಲಿನ ದೇವವಚನವನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಿದರೆ ಇದು ಧರ್ಮಗಳ ಮೂಲ ತತ್ವವಾದ, ಕೇಂದ್ರಬಿಂದುವಾದ ಏಕದೇವ ನಂಬಿಕೆಯಲ್ಲಿ ಒಮ್ಮತದಿಂದ ಅಣಿನೆರೆದುಕೊಂಡು ಸಾರ್ವಲೌಕಿಕ

ಸಾಹೋದರ್ಯ ಮತ್ತು ವಿಶ್ವ ಮಾನವ ಮೈತ್ರಿಯನ್ನು ಸ್ಥಾಪಿಸಲು ಸ್ಪಷ್ಟವಾದ ಆಹ್ವಾನವೆಂದು ಮನಗಾಣಬಹುದು.

ಅಲ್ಲಾಹನು ಇನ್ನೊಂದೆಡೆಯಲ್ಲಿ ಹೀಗೆ ಹೇಳುತ್ತಾನೆ:

"ಏಕದೇವನನ್ನು ಮಾತ್ರ ಆರಾಧಿಸಿರಿ; ದುಷ್ಟತೆಯಿಂದ ದೂರವಿರಿ ಎಂದು ಉಪದೇಶಿಸಲಿಕ್ಕೋಸ್ಕರ ನಾವು ಎಲ್ಲ ಜನಾಂಗಗಳಲ್ಲೂ ಸಂದೇಶವಾಹಕರನ್ನು ಕಳುಹಿಸಿದ್ದೇವೆ." (16:37)

ಇಂದು ನಾವು ಅಭಿಮುಖೀಕರಿಸುತ್ತಿರುವ ಭಯಾನಕ ಜಾತಿ-ಮತ, ವರ್ಣ-ವರ್ಗ ಪೈಪೋಟಿಗಳನ್ನೂ ಅಕ್ರಮಗಳನ್ನೂ ದೂರೀಕರಿಸಲು ಅನುಕೂಲವಾದ ಸಾರೋಪದೇಶಗಳನ್ನು, ಆರ್ಷ ಸಂಸ್ಕೃತಿಯ ಹುಟ್ಟೂರಾದ ಈ ಪುಣ್ಯ ಭೂಮಿಯಲ್ಲಿ ದೇವನಿಯುಕ್ತರಾದ, ಯುಗಪುರುಷರಾದ ಹಝ್ರತ್ ಅಹ್ಮದ್(ಅ) ನೂರು ವರ್ಷಗಳ ಪೂರ್ವದಲ್ಲೇ ನಮಗೆ ನೀಡಿದ್ದಾರೆ. ಭಾರತೀಯರೊಡನೆ ಅವರು ಹೀಗೆ ಹೇಳಿದರು :

"ಪರಮಾತ್ಮನು ನನಗೆ ತಿಳಿಸಿರುವನು: ಮನುಷ್ಯರು ಅವರ ದುಷ್ಕೃತ್ಯಗಳನ್ನು ತ್ಯಜಿಸಿ ಅಕೃತ್ಯಗಳ ಕುರಿತು ಪಶ್ಚಾತ್ತಾಪಪಟ್ಟು ಪರಮಾತ್ಮನೊಡನೆ ಕ್ಷಮೆಯಾಚಿಸದೆ ಇದ್ದರೆ ಲೋಕದಲ್ಲೆಲ್ಲ ಭಯಂಕರವಾದ ವಿಪತ್ತುಗಳೂ ನಾಶನಷ್ಟಗಳೂ ಸಂಭವಿಸುವುವು. ಒಂದು ಆಪತ್ತು ಮುಕ್ತಾಯವಾಗುವ ಮೊದಲೇ ಇನ್ನೊಂದು ಭಯಂಕರವಾದ ನಾಶವು ಸನ್ನಿಹಿತವಾಗುವುದು. ಈ ವಿಪತ್ತುಗಳಿಂದಾಗಿ ಮನುಷ್ಯರು ದಿಗ್ಭ್ರಾಂತರಾಗಿ ಇನ್ನೇನು ಸಂಭವಿಸಲಿದೆಯೆಂದು ಪ್ರಶ್ನಿಸಲಾರಂಭಿಸುವರು. ಅನೇಕರು ವಿವಿಧ ಆಪತ್ತುಗಳಿಗೆ ಗುರಿಯಾಗಿ ಭ್ರಾಂತರಂತಾಗುವರು. ಆದುದರಿಂದ ಎಲೈ ನನ್ನ ದೇಶ ಬಾಂಧವರೇ, ಆ ದಿನಗಳು ಬರುವ ಮೊದಲೇ ನೀವು ಜಾಗರೂಕರಾಗಿರಿ. ಹಿಂದೂಗಳೂ ಮುಸ್ಲಿಮರೂ ಪರಸ್ಪರ ಸಂಧಾನವನ್ನುಂಟು ಮಾಡಲಿ. ಐಕ್ಯ ಭಂಗವಾಗುವ ರೀತಿಯಲ್ಲಿ ಅಕ್ರಮವಾಗಿ ವರ್ತಿಸಿದ ಸಮುದಾಯವು ಆ ಅನ್ಯಾಯಗಳನ್ನು ತ್ಯಜಿಸಲಿ. ಇಲ್ಲವಾದರೆ, ಅನ್ಯೋನ್ಯ ಶತ್ರುತ್ವದ ಎಲ್ಲ ಪಾಪವು ಆ ಅನ್ಯಾಯವಾಗಿ ವರ್ತಿಸಿದ ಸಮುದಾಯದ ಕೊರಳಿಗೆ ಉರುಳಾಗಿ ಪರಿಣಮಿಸುವುದು." (ಪೈಗಾಮೆ ಸುಲ್ಹ್)

ಕೋಮು ಸೌಹಾರ್ದದ ಸಮ್ಮೋಹನವಾದ ಈ ಸಂದೇಶದ ಬಗ್ಗೆ **Frontier Mail** ಎಂಬ ಪತ್ರಿಕೆ 1948 ಸಪ್ಟೆಂಬರ್ 12ರಂದು ಹೀಗೆ ಬರೆಯಿತು :

**"Ahmadiyyas are a progressive Community among the Muslims and one of their basic teachings has been the toleration of all the religions. Respecting and honouring the heads of all the religious faiths, they have incorporated their teachings in their scriptures.**

**Forty years ago, even before Mahatma Gandhi came in the political horizon of India, Mirza Ghulam Ahmad who proclaimed himself Messiah in 1889, put forward before the people proposals in the shape of a pamphlet - "Paigham-e-Sulh" which would bring about concured unity and understanding. He wanted to create among the people, a spirit of toleration, brotherhood and amity. And credit must be given to this man whose vision penetrated the veil of the distant future and pointed the way."** (The Frontier Mail-12-9-1948)

*"ಅಹ್ಮದಿಯರು ಮುಸ್ಲಿಮರ ಪೈಕಿ ಒಂದು ಪ್ರಗತಿಪರ ಪಂಗಡದವರಾಗಿದ್ದಾರೆ. ಪರಧರ್ಮ ಸಹಿಷ್ಣುತೆ ಅವರ ಮೂಲ ತತ್ವೋಪದೇಶಗಳಲ್ಲಿ ಒಂದು. ಎಲ್ಲ ಮತಾಚಾರ್ಯರುಗಳನ್ನು ಗೌರವಿಸಬೇಕು ಮತ್ತು ಆದರಿಸಬೇಕು ಎಂಬುದು ಅವರ ಮೂಲ ಅಧ್ಯಾಪನಗಳಲ್ಲಿ ಸೇರುತ್ತದೆ.*

*"ನಲ್ವತ್ತು ವರ್ಷಗಳಿಗೆ ಮುಂಚೆ, ಭಾರತದ ರಾಜಕೀಯ ಕ್ಷಿತಿಜದಲ್ಲಿ ಮಹಾತ್ಮ ಗಾಂಧಿ ಕೂಡ ಬರುವುದಕ್ಕೆ ಪೂರ್ವದಲ್ಲಿ 1889 ಇಸವಿಯಲ್ಲಿ ತಾನು ಮಸೀಹ್ ಎಂದು ಘೋಷಿಸಿದ ಮಿರ್ಝಾ ಗುಲಾಂ ಅಹ್ಮದ್ ಜನರ ಮುಂದೆ ತನ್ನ "ಪೈಗಾಮೆ ಸುಲ್ಹ್" ಎಂಬ ಕೃತಿ ಮೂಲಕ ಪರಸ್ಪರ ಮೈತ್ರಿಗೂ ಸಾಮರಸ್ಯಕ್ಕೂ ಆಹ್ವಾನ ನೀಡಿದರು. ಜನರೆಡೆಯಲ್ಲಿ ಸಹಿಷ್ಣುತೆ, ಸಾಹೋದರ್ಯ ಮತ್ತು ಸಾಮರಸ್ಯ ಸೃಷ್ಟಿಸಲು ಅವರು ಉದ್ದೇಶಿಸಿದರು. ವಿದೂರ ಭಾವಿಕಾಲದ ಪರದೆಯನ್ನು ಭೇದಿಸಿದ ಅವರ ದೃಷ್ಟಿ, ಮತ್ತು ಅವರು ತೋರಿಸಿದ ಪರಿಹಾರ ಮಾರ್ಗಕ್ಕೆ ನಾವು ಋಣಿಯಾಗಿದ್ದೇವೆ."*

ಸಂಕ್ಷಿಪ್ತವಾಗಿ, ದೀರ್ಘ ಯಾತ್ರೆಯ ಮಧ್ಯೆ ಧೂಳು ತುಂಬಿದ ಇಸ್ಲಾಮಿನ ವದನವನ್ನು ಒರಸಿ ಶುಭ್ರಗೊಳಿಸಿ, ಯಥಾರ್ಥ ಇಸ್ಲಾಮಿನ ಪ್ರಾತಿನಿಧ್ಯವನ್ನು ವಹಿಸಿಕೊಂಡು ಮನುಷ್ಯರೆಲ್ಲರಿಗೂ ಅನುಗ್ರಹಕರವಾದ ಇಸ್ಲಾಮಿನ ಅಧ್ಯಾಪನಗಳನ್ನು ಅದರ ಪರಿಪೂರ್ಣವಾದ ಪಾವಿತ್ರ್ಯದೊಂದಿಗೆ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು ಲೋಕದ ಮುಂದೆ ಸಾದರಪಡಿಸಿದರು.

ಆ ಪುಣ್ಯ ಪುರುಷ ಹೀಗೆ ಹೇಳಿದರು :

"ಇಡೀ ಮನುಷ್ಯ ಕುಲದೊಂದಿಗೆ ಅನುಕಂಪದಿಂದ ವರ್ತಿಸಬೇಕೆಂಬುದು ನಮ್ಮ ಸಿದ್ಧಾಂತವಾಗಿದೆ. ಒಬ್ಬನು ತನ್ನ ಹಿಂದೂ ನೆರೆಕರೆಯುವನ ಮನೆ ಬೆಂಕಿ ಹೊತ್ತಿ ಉರಿಯುವಾಗ ಆ ಬೆಂಕಿಯನ್ನು ನಂದಿಸಲು ಶ್ರಮಿಸುವುದಿಲ್ಲವಾದರೆ ನಾನು ಸತ್ಯವಾಗಿಯೂ ಹೇಳುತ್ತೇನೆ - ಅವನು ಎಂದಿಗೂ ನನ್ನ ಪೈಕಿಯುವನಲ್ಲ. ನನ್ನ ಶಿಷ್ಯತ್ವವನ್ನು ಸ್ವೀಕರಿಸಿದವನು, ಒಬ್ಬ ಕ್ರೈಸ್ತನನ್ನು ಇನ್ನೊಬ್ಬನು ಕೊಲೆಮಾಡುವುದನ್ನು ಕಂಡು ಆತನನ್ನು ರಕ್ಷಿಸಲು ಯತ್ನಿಸುವುದಿಲ್ಲವಾದರೆ ಅವನು ಎಂದಿಗೂ ನನ್ನ ಪೈಕಿಯುವನಲ್ಲ. ನಾನು ಸತ್ಯವಾಗಿ ಹೇಳುತ್ತೇನೆ - ನನಗೆ ಯಾವ ಸಮುದಾಯದೊಡನಾಗಲಿ ಯಾವ ರೀತಿಯ ವೈರವೂ ಇಲ್ಲ. ನಾನು ಪ್ರಾಕೃತ ಮತ್ತು ಮೂಢ ನಂಬಿಕೆಗಳನ್ನು ಹೋಗಲಾಡಿಸಲು ಬಯಸುತ್ತೇನೆ."

(ಸಿರಾಜೆ ಮುನೀರ್:ಪುಟ 18)

"ನೀವು ಜಾತಿ ಮತ ವರ್ಗ ವ್ಯತ್ಯಾಸ ವಿನಾ ಜನರೊಡನೆ ಅನುಕಂಪದಿಂದ ವರ್ತಿಸಿರಿ. ಹಸಿವೆಯಿಂದ ಕಂಗಾಲಾದವರಿಗೆ ಅನ್ನ ನೀಡಿರಿ. ಗುಲಾಮರನ್ನು ಬಿಡುಗಡೆ ಮಾಡಿರಿ. ಸಾಲದಿಂದ ಮುಳುಗಿರುವವರ ಸಾಲವನ್ನು ಸಂದಾಯ ಮಾಡಿರಿ. ಕಷ್ಟಕ್ಕೀಡಾದವರಿಗೆ ಆಶ್ವಾಸನೆ ನೀಡಿರಿ. ಮನುಷ್ಯಕುಲದೊಡನೆ ಹೃತ್ಪೂರ್ವಕವಾದ ಅನುಕಂಪವನ್ನು ತೋರಿಸಿರಿ ಎಂದು ಅಲ್ಲಾಹನು ಪದೇ ಪದೇ ಹೇಳುತ್ತಾನೆ.

"ನೀವು ನೀತಿ-ನ್ಯಾಯ ಪಾಲಿಸಿರಿ. ಅದಕ್ಕಿಂತ ಹೆಚ್ಚಾಗಿ ನೀವು ಎಲ್ಲರೊಡನೆ ಔದಾರ್ಯ ತೋರಿಸಿರಿ. ಸಣ್ಣ ಶಿಶುವಿನೊಂದಿಗೆ ಅದರ ತಾಯಿ ಅಥವಾ ಬಂಧುಗಳು ವರ್ತಿಸುವ ರೀತಿಯಲ್ಲಿ ಸ್ನೇಹಾನುಕಂಪ ತೋರಿಸಿರಿ."

(ನೂರುಲ್ ಖುರ್‌ಆನ್ :ಪುಟ 59)

"ಲೋಕದಲ್ಲಿ ಯಾರೂ ನನ್ನ ಶತ್ರುವಲ್ಲವೆಂದು ನಾನು ಎಲ್ಲ ಹಿಂದೂಗಳೊಡನೆಯೂ ಮುಸ್ಲಿಮರೊಡನೆಯೂ ಕ್ರೈಸ್ತರೊಡನೆಯೂ ಆರ್ಯ ಸಮಾಜದವರೊಡನೆಯೂ ವ್ಯಕ್ತಪಡಿಸಲು ಬಯಸುತ್ತೇನೆ. ಸ್ನೇಹಮಯಿಯಾದ ತಾಯಿ ತನ್ನ ಮಕ್ಕಳನ್ನು ಪ್ರೀತಿಸುವಂತೆ, ಅದಕ್ಕಿಂತ ಮಿಗಿಲಾಗಿ ನಾನು ಮಾನವಕುಲವನ್ನೆಲ್ಲ ಪ್ರೀತಿಸುತ್ತೇನೆ. ಸತ್ಯವನ್ನು ಕೊಲೆ ಮಾಡುವ ಅಂಥ ವಿಶ್ವಾಸಗಳನ್ನು ನಾನು ವಿರೋಧಿಸುತ್ತೇನೆ. ಮನುಷ್ಯರೊಡನೆ ಅನುಕಂಪದಿಂದ ವರ್ತಿಸುವುದು ನನ್ನ ಕರ್ತವ್ಯವಾಗಿದೆ. ಸುಳ್ಳು, ಶಿರ್ಕ್, ಅಸೂಯೆ ಮುಂತಾದ ಎಲ್ಲ ದುಷ್ಟಸ್ವಭಾವ ಮತ್ತು ದುಷ್ಕರ್ಮಗಳೊಡನೆ ವಿರಕ್ತಿ ನನ್ನ ಸಿದ್ಧಾಂತವಾಗಿದೆ." (ಅರ್ಬಯೀನ್:ಪುಟ 2)

ಏಕದೇವ ವಿಶ್ವಾಸದಲ್ಲಿ ಅಧಿಷ್ಠಿತವಾದ ಸತ್ಯ ಸಮತ್ವ ಸಾಹೋದರ್ಯ ಸದ್ಗುಣಗಳು ಕೂಡಿಕೊಂಡಿರುವ ಸಾಮೂಹಿಕ ವ್ಯವಸ್ಥೆಯನ್ನು ತುಲನೆ ಮಾಡಿಕೊಂಡು ಸಮಕಾಲೀನ ಲೋಕದೆಡೆಗೆ ಒಮ್ಮೆ ಕಣ್ಣು ಹಾಯಿಸೋಣ.

ಇಲ್ಲಿ ಅಕ್ರಮ ದಿನಚರ್ಯೆಯ ಅಂಶವೂ ಕಾಪಟ್ಯ, ವಂಚನೆ ಇತ್ಯಾದಿ ಜೀವನದ ಆಧಾರವಾಗಿಯೂ ಮಾರ್ಪಟ್ಟಿದೆ. ಸ್ನೇಹ, ಸಾಹೋದರ್ಯ ಮತ್ತು ಸಮತ್ವ ಇತಿಹಾಸದ ಪುಟಗಳ ಮಹತ್ ವಾಕ್ಯಗಳೂ ಕೇವಲ ಬಾಯಿಯುಪಚಾರಕ್ಕೆ ಉಚ್ಚರಿಸುವ ಮಂತ್ರಗಳೂ ಮಾತ್ರವಾಗಿ ಉಳಿದಿವೆ. ಮನಸ್ಸಿನ ಅಂತರಾಳದಿಂದ ಈ ನೈತಿಕ ಮೌಲ್ಯಗಳನ್ನು ಸಮಾಜ ನೀಗಿಸಿ ಬಿಟ್ಟಿದೆ. ಭೌತಿಕವಾದ ಸಕಲ ಸೌಕರ್ಯಗಳನ್ನು ಗಳಿಸಿದರೂ ಅಸ್ವಸ್ಥತೆ, ಅಶಾಂತಿ ಮತ್ತು ಅಪಸ್ವರಗಳು ಕಾಲದ ಕರ್ಣಪಟಲಗಳಲ್ಲಿ ಬಂದು ಅಪ್ಪಳಿಸುತ್ತವೆ. ನಾಗರಿಕತೆಯ ಸುವರ್ಣ ಯುಗವೆಂದು ಮನುಷ್ಯರು ಅಹಂಕಾರದಿಂದ ಘೋಷಿಸುವ ಈ ಯುಗದಲ್ಲೂ ಒಂದು ವರ್ಗ ನಿತ್ಯ ಪೀಡನೆಗಳಿಗೂ ದೌರ್ಜನ್ಯಗಳಿಗೂ ಈಡಾಗಿ ಮೃಗತುಲ್ಯರಾಗಿ ಬದುಕುತ್ತಿದ್ದಾರೆ. ಪ್ರತಿ ನಿಮಿಷ ಲೋಕವು ಇನ್ನೊಂದು ಮಾರಕ ಯುದ್ಧದ ಸ್ಫೋಟನವನ್ನು ಭೀತಿಯಿಂದ ಆಲಿಸುವಂತಾಗಿದೆ. ಇಂತಹ ವಿಷಲಿಪ್ತ ಮತ್ತು ಭೀಕರವಾದ ವಾತಾವರಣಕ್ಕೆ ಸಮೂಲವಾದ ಒಂದು ಮಾರ್ಪಾಟು ಅವಶ್ಯವಾಗಿದೆ. ಜೀವಿತ ಶುದ್ಧಿ, ಪ್ರಪಂಚದ ಸೃಷ್ಟಿಕರ್ತನೂ ಜಗನ್ನಿಯಾಮಕನೂ ಆದ ದೇವನೊಡನೆ ಭಕ್ತಿ ಮತ್ತು ಪ್ರೀತಿ, ಸಕಲ ಚರಾಚರಗಳೊಡನೆ ಮಮತೆ, ಎಲ್ಲ ಜನರೊಡನೆ ಸಾಹೋದರ್ಯ, ಸಾಮರಸ್ಯ, ಸೌಮ್ಯಭಾವನೆ ಇಂದು ಅತ್ಯಗತ್ಯವಾಗಿದೆ.

ಅದರ ಕಡೆಗೆ ಕೊಂಡೊಯ್ಯಲಿಕ್ಕಾಗಿ ಈ ಕಾಲದಲ್ಲಿ ಆಧ್ಯಾತ್ಮಿಕೋದ್ಧಾರಕನಾಗಿ ಜನ್ಮತಾಳಿದ ಹಝ್ರತ್ ಅಹ್ಮದ್‌ರವರು ನಮ್ಮನ್ನು ಆಹ್ವಾನಿಸಿದರು. ಇಂದಿನ ಕೊಳೆತುಹೋದ ಸಾಮಾಜಿಕ ವ್ಯವಸ್ಥೆಯಿಂದ ದಡಸೇರಿ ತುಂಡಾಗದಂತಹ ದೈವಿಕ ಪಾಶದೊಂದಿಗೆ ಸಂಬಂಧವುಳ್ಳ ಒಂದು ನವಲೋಕ ಕ್ರಮವನ್ನು ಉಂಟು ಮಾಡುವುದಕ್ಕಾಗಿ ಆ ಕರ್ಮಯೋಗಿ ತನ್ನ ಜೀವನ ಪರ್ಯಂತ ಅತ್ಯಂತ ಪರಿಶ್ರಮಿಸಿದರು.

ಆ ಜಗನ್ನಿಯಾಮಕನೊಂದಿಗೆ ಸಂಬಂಧವನ್ನಿರಿಸುವ ಆವಶ್ಯಕತೆಯ ಬಗ್ಗೆ ಅವರು ತನ್ನೆಲ್ಲ ಗ್ರಂಥಗಳಲ್ಲೂ ಒತ್ತಿ ಹೇಳಿದ್ದಾರೆ. ಆ ಪುಣ್ಯ ಪುರುಷ ಹೀಗೆ ಹೇಳಿದರು:

"ಸರ್ವಶಕ್ತನಾದ ಒಬ್ಬ ದೇವನು ತನಗಿದ್ದಾನೆಂಬ ಪ್ರಜ್ಞೆ ಕೂಡ ಇಲ್ಲದವನು ಎಷ್ಟು ಭಾಗ್ಯ ಹೀನನು! ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಪರಮಾನಂದ ನಮ್ಮ ದೇವನಲ್ಲಿ ನಿಕ್ಷಿಪ್ತವಾಗಿದೆ. ನಾವು ಅವನನ್ನು ಕಂಡಿದ್ದೇವೆ. ಎಲ್ಲ ವಿಧ ಸೌಂದರ್ಯಗಳನ್ನು ನಾವು ಅವನಲ್ಲಿ ದರ್ಶಿಸಿದ್ದೇವೆ. ಜೀವವನ್ನು ಅರ್ಪಿಸುವುದರಿಂದ ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು ಅರ್ಹವಾಗಿದೆ. ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಈ ಮಾಣಿಕ್ಯವನ್ನು ಪಡೆಯಬಹುದಾಗಿದ್ದರೆ ಹಾಗೆ ಗಳಿಸಲು ಅದು ಅರ್ಹವಾಗಿದೆ. ಈ ಭಾಗ್ಯವನ್ನು ಪಡೆಯದ ಓ ಜನರೇ, ನೀವು ಈ ಕಾರಂಜಿಯ ಸಮೀಪಕ್ಕೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವ ಜೀವಜಲವನ್ನೀಯುವ ಕಾರಂಜಿಯಾಗಿದೆ."

(ಕಿಶ್ತೀ ನೂಹ್)

ಆಧ್ಯಾತ್ಮಿಕತೆಯ ದಾಹಜಲಕ್ಕೋಸ್ಕರ ಬಾಯಾರಿಕೆಯಿಂದ ಕಳೆಯುವ ಇಂದಿನ ಲೋಕಕ್ಕೆ ಜೀವದಾಯಕವಾದ ಆ ಅಮೃತಧಾರೆ ಒಂದು ನೂರು ವರ್ಷಕಾಲದಿಂದ ಈ ಕಾರಂಜಿಯಿಂದ ಪುಟಿಯುತ್ತಲಿದೆ. ಇದರಿಂದ ದಾಹವನ್ನು ನೀಗಿಸಿ ಸಾಹೋದರ್ಯ, ಸಮತ್ವ ಮತ್ತು ಮಾನವ ಮೈತ್ರಿಯ ಸತ್ಫಲಗಳನ್ನು ಸವಿಯಲು ಲೋಕಜನತೆಗೆ ಸಾಧ್ಯವಾಗಲಿ. ಅದಕ್ಕೋಸ್ಕರ ಸರ್ವಶಕ್ತನಾದ ದೇವನು ಅವರಿಗೆ ದಾರಿತೋರಿಸಲಿ. ಆಮೀನ್.

*

# ಮುಹಮ್ಮದ್ ಪೈಗಂಬರ್ ಸರ್ವಶ್ರೇಷ್ಠ ಮಾದರಿ ಪುರುಷ

ಸಂ. : ಮುಹಮ್ಮದ್ ಯೂಸುಫ್

ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ "**ನಿಮಗೆ ಅಲ್ಲಾಹನ ಸಂದೇಶವಾಹಕನಲ್ಲಿ ಖಂಡಿತವಾಗಿಯೂ ಉತ್ತಮ ಮಾದರಿ ಇದೆ**" ಎಂದು ಹೇಳುತ್ತಾನೆ. (33:22)

ಅಲ್ಲಾಹನು ಮುಹಮ್ಮದ್ ಪೈಗಂಬರ್(ಸ.)ರವರನ್ನು ಸಂಬೋಧಿಸಿ ಪವಿತ್ರ ಖುರ್‌ಆನಿನಲ್ಲಿ "**ನೀನು ಅತ್ಯುತ್ಕೃಷ್ಟವಾದ ಗುಣಸ್ವಭಾವವನ್ನು ಹೊಂದಿರುವೆ**" ಎಂದು ಸಹ ಹೇಳಿದ್ದಾನೆ. (68:5)

ಹಝ್ರತ್ ಮುಹಮ್ಮದ್ ಪೈಗಂಬರ್(ಸ.) ಅವರ ಸ್ವಭಾವದ ಬಗ್ಗೆ ಅವರ ಧರ್ಮಪತ್ನಿಯಾದ ಹಝ್ರತ್ ಆಯಿಶ(ರಝಿಯಲ್ಲಾಹು ಅನ್‌ಹಾ)ರವರೊಡನೆ ಕೇಳಿದಾಗ ಅವರು ನೀಡಿದ ಉತ್ತರ : "**ಅವರ ಸ್ವಭಾವ ಖುರ್‌ಆನೇ ಆಗಿತ್ತು**" ಎಂದಾಗಿದೆ. ಅಂದರೆ ಒಬ್ಬ ಪರಿಪೂರ್ಣ ಮನುಷ್ಯನಿಗೆ ಇರಬೇಕಾದ, ಪವಿತ್ರ ಖುರ್‌ಆನಿನಲ್ಲಿ ವಿವರಿಸಲಾದ ಎಲ್ಲ ಸದ್ಗುಣಗಳು ಸಂಪೂರ್ಣವಾಗಿಯೂ ಮುಹಮ್ಮದ್ ಪೈಗಂಬರ್(ಸ.) ಅವರಲ್ಲಿ ಸಮ್ಮಿಳಿತವಾಗಿದ್ದವು ಎಂದಾಗಿದೆ.

ಒಬ್ಬ ಮನುಷ್ಯನು ಇತರ ಮನುಷ್ಯರಿಗೆ ಮಾದರಿ ಪುರುಷನಾಗಬೇಕಿದ್ದರೆ ಆ ಮಾದರಿ ಪುರುಷನಿಗೆ ಮನುಷ್ಯ ಜೀವಿತದ ವಿವಿಧ ಸಂದರ್ಭಗಳು ಒದಗಿ ಬರಬೇಕಾಗಿದೆ. ಇಲ್ಲವಾದರೆ ಆ ಮನುಷ್ಯನ ಸ್ವಭಾವವನ್ನು ತಿಳಿಯಲು ಅಸಾಧ್ಯ. ಉದಾಹರಣೆಗೆ, ಜೀವಮಾನವೆಲ್ಲ ಬಡತನದಲ್ಲಿ ಕಳೆದವನು ಶ್ರೀಮಂತನಿಗೆ ಮಾದರಿಯಾಗಲಾರ. ಹಾಗೆಯೇ ಜೀವಮಾನವಿಡೀ ಶ್ರೀಮಂತಿಕೆಯಲ್ಲಿ ಕಳೆದವನು ಬಡವರಿಗೆ ಮಾದರಿಯಾಗಲಾರ. ಆದರೆ ಮುಹಮ್ಮದ್ ಪೈಗಂಬರ್(ಸ.) ಅವರಿಗೆ ಮಾನವ ಜೀವನದ ಎಲ್ಲ ಸಂದರ್ಭಗಳು ಒದಗಿ ಬಂದು ಅವರು ಮಾನವರೆಲ್ಲರಿಗೂ ಮಾದರಿ ಪುರುಷರಾದರು. ಅವರು ತಬ್ಬಲಿಗಳಿಗೂ ಯುವಕರಿಗೂ ವೃದ್ಧರಿಗೂ ಅವಿವಾಹಿತರಿಗೂ ವಿವಾಹಿತರಿಗೂ ಹೆತ್ತವರಿಗೂ ಬಂಧುಬಳಗದವರಿಗೂ ಒಡನಾಡಿಗಳಿಗೂ ನೆರೆಹೊರೆಯವರಿಗೂ ಬಡವರಿಗೂ ಶ್ರೀಮಂತರಿಗೂ ಸೇವಕರಿಗೂ ಮಾಲಿಕರಿಗೂ ಪ್ರಜೆಗಳಿಗೂ ರಾಜರಿಗೂ ಜಯಾಪಜಯ ಹೊಂದುವ ಯೋಧರಿಗೂ ಸಂತರಿಗೂ ಧರ್ಮಸುಧಾರಕರಿಗೂ ಸಾಮಾನ್ಯ ಮನುಷ್ಯರಿಗೂ ಮಾದರಿ ಪುರುಷರಾಗಿದ್ದರು. ಎಲ್ಲ ವಿಧದಲ್ಲೂ ತಾನೊಬ್ಬ ಪರಿಪೂರ್ಣ ಮಾನವ ಎಂದು ಅವರು ಜಗತ್ತಿಗೆ ತೋರಿಸಿಕೊಟ್ಟರು.

## ಬಾಲ್ಯಕಾಲ

ಮುಹಮ್ಮದ್ ಪೈಗಂಬರ್(ಸ.) ಜನ್ಮತಾಳುವುದಕ್ಕೆ ಸುಮಾರು ಮೂರು ತಿಂಗಳಿಗೆ ಮುಂಚೆಯೇ ಅವರ ತಂದೆ ಮೃತಪಟ್ಟಿದ್ದರು. ಪೈಗಂಬರರಿಗೆ 6 ವರ್ಷ ಪ್ರಾಯವಾದಾಗ ಅವರ ತಾಯಿ ಇಹಲೋಕ ತ್ಯಜಿಸಿದರು. ಹಾಗೆ ತಬ್ಬಲಿಯಾಗಿದ್ದರೂ ಪೈಗಂಬರರು ತನ್ನ ಉತ್ತಮ ಸ್ವಭಾವದಿಂದ ಎಲ್ಲರ ಪ್ರೀತಿಗೆ ಪಾತ್ರನಾದ ಬಾಲಕರಾದರು. ಬಾಲ್ಯಕಾಲದಲ್ಲಿ ಅವರು ತನ್ನ ಚಿಕ್ಕಪ್ಪನ ಪಾಲನೆ ಪೋಷಣೆಯಲ್ಲಿ ಬೆಳೆದರು. ಚಿಕ್ಕಪ್ಪ ಅಬೂತಾಲಿಬ್ ಬಡವರಾಗಿದ್ದರು. ಊಟದ ಸಮಯದಲ್ಲಿ ಚಿಕ್ಕಪ್ಪನ ಮಕ್ಕಳೆಲ್ಲ ತಮ್ಮ ತಾಯಿಯ ಸುತ್ತುಮುತ್ತು ಸೇರಿಕೊಂಡು ಹೆಚ್ಚು ಆಹಾರವನ್ನು ಪಡೆಯಲು ಹುರುಡು ಮಾಡುತ್ತಿದ್ದರು. ಆದರೆ ಬಾಲಕ ಮುಹಮ್ಮದ್ ಒಮ್ಮೆಯಾದರೂ ಊಟಕ್ಕಾಗಿ ಹಾಗೆ ಪೈಪೋಟಿ ನಡೆಸಿದವರಲ್ಲ ಎಂದು ಅಬೂತಾಲಿಬರ ಪರಿಚಾರಿಕೆ ಹೇಳುತ್ತಿದ್ದಳು. ಕೆಲವು ಸಂದರ್ಭಗಳಲ್ಲಿ ಚಿಕ್ಕಮ್ಮ ತನ್ನ ಮಕ್ಕಳಿಗೆ ಊಟ ಬಡಿಸಿಕೊಟ್ಟ ಬಳಿಕ ಬಾಲಕ ಮುಹಮ್ಮದರಿಗೆ ಏನೂ ಉಳಿಯುತ್ತಿರಲಿಲ್ಲ. ಆದರೆ ಬಾಲಕ ಮುಹಮ್ಮದ್ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ತನ್ನ ಪಾಡಿಗೆ ನಿಶ್ಚಿಂತೆಯಿಂದ ಇರುತ್ತಿದ್ದರು.

## ಯವ್ವನ

ಪೈಗಂಬರರಿಗೆ ಸುಮಾರು 20 ವರ್ಷ ಪ್ರಾಯವಾದಾಗ ಅವರು ಮಕ್ಕದಲ್ಲಿರುವ ಒಂದು ಸಂಘದ ಸದಸ್ಯರಾಗಿ ಸೇರ್ಪಡೆಗೊಂಡರು. ಅನ್ಯಾಯಕ್ಕೊಳಗಾದ ಯಾರಿಗೇ ಆಗಲಿ, ನ್ಯಾಯ ದೊರಕುವ ತನಕ ಆತನಿಗೆ ನೆರವಾಗುವುದಾಗಿ ಆ ಸಂಘದ ಪ್ರತಿಯೊಬ್ಬ ಸದಸ್ಯ ಪ್ರತಿಜ್ಞೆ ಮಾಡಬೇಕಿತ್ತು. ಆ ಸಂಘದ ಸದಸ್ಯರಾಗಿದ್ದ ಪೈಗಂಬರರು ಯಾರಾದರೂ ಅನ್ಯಾಯ, ಅಕ್ರಮ, ದೌರ್ಜನ್ಯಗಳಿಗೆ ಈಡಾಗಿದ್ದಾರೆಂದು ತಿಳಿದ ಕೂಡಲೇ ಅವರ ಸಹಾಯಕ್ಕೆ ಸನ್ನದ್ಧರಾಗುತ್ತಿದ್ದರು.

ಅರೇಬಿಯಾದ ಹವಾಮಾನವನ್ನನುಸರಿಸಿ ಜನರು ಅಲ್ಲಿ ಬೇಗನೇ ಪ್ರೌಢಾವಸ್ಥೆಯನ್ನು ಪಡೆದು ಲೈಂಗಿಕಾಸಕ್ತಿಯನ್ನು ಹೊಂದುತ್ತಾರೆ. ಆದರೆ ಯುವಕನಾದ ಮುಹಮ್ಮದ್ ಪೈಗಂಬರ್(ಸ.) ತನ್ನ 25 ವರ್ಷ ಪ್ರಾಯದ ವರೆಗೆ ಲೈಂಗಿಕವಾದ ಯಾವುದೇ ಕಳಂಕಕ್ಕೆ ಗುರಿಯಾಗದೆ ಪರಿಶುದ್ಧವಾದ ಜೀವನವನ್ನು ನಡೆಸಿದರು.

## ವೈವಾಹಿಕ ಜೀವನ

ಅವರ ಸತ್ಯಸಂಧತೆಯೂ ಪ್ರಾಮಾಣಿಕತೆಯೂ ಬಹಳ ಪ್ರಸಿದ್ಧವಾಗಿತ್ತು. ಜನರು ಅವರನ್ನು ಸಿದ್ದೀಖ್ (ಸತ್ಯಸಂಧ) ಎಂದೂ ಅಮೀನ್ (ವಿಶ್ವಾಸಯೋಗ್ಯ, ಪ್ರಾಮಾಣಿಕ) ಎಂದೂ ಕರೆಯುತ್ತಿದ್ದರು. ಪೈಗಂಬರರ ಖ್ಯಾತಿಯನ್ನು ಕೇಳಿದ ಮಕ್ಕದ ಕುಲೀನ ಸ್ತ್ರೀಯಾದ ಹಝ್ರತ್ ಖದೀಜ(ರ) ಲಾಭದಲ್ಲಿ ಪಾಲು ನೀಡುವ ಶರ್ತದಲ್ಲಿ ಅವರನ್ನು ಸಿರಿಯಾ ದೇಶಕ್ಕೆ ವ್ಯಾಪಾರಕ್ಕೆ ಕಳುಹಿಸಿದರು. ಖದೀಜರವರ ಒಬ್ಬ ಸೇವಕ ಸಹ ಆ ಯಾತ್ರೆಯಲ್ಲಿ ಪೈಗಂಬರರ ಜೊತೆಗಿದ್ದನು. ಪೈಗಂಬರರ ಸತ್ಯಸಂಧತೆ, ಪರಿಶುದ್ಧ ಸ್ವಭಾವ, ಸಾತ್ವಿಕತೆ ಎಂಬೀ ಗುಣಗಳ ಕಾರಣದಿಂದ ವ್ಯಾಪಾರದಲ್ಲಿ ಖದೀಜರಿಗೆ ಮೊದಲೆಂದೂ ಸಿಗದಷ್ಟು ಅಧಿಕ ಲಾಭ ದೊರಕಿತು. ಪೈಗಂಬರರ ಸತ್‌ಸ್ವಭಾವ ಮತ್ತು ಸದ್ವರ್ತನೆ ಪೈಗಂಬರರ ಜೊತೆಗಿದ್ದ ಖದೀಜರವರ ಸೇವಕನಿಗೆ ತುಂಬಾ ಮೆಚ್ಚಿಕೆಯಾಯಿತು. ಯಾತ್ರೆಯ ವಿವರ ಮತ್ತು ವ್ಯಾಪಾರದಲ್ಲಿ ದೊರೆತ ಲಾಭದ ಬಗ್ಗೆ ತನ್ನ ಸೇವಕನ ಮೂಲಕ ಅರಿತ ಖದೀಜರಿಗೆ ಪೈಗಂಬರರ ಮೇಲೆ ಬಹಳ ಗೌರವ ಮೂಡಿಬಂತು. ಪೈಗಂಬರರು ತನ್ನನ್ನು ಧರ್ಮಪತ್ನಿಯಾಗಿ ಸ್ವೀಕರಿಸಬೇಕೆಂಬ ಕೋರಿಕೆಯನ್ನು ಮಕ್ಕದ ಆ ಕುಲೀನ ಸ್ತ್ರೀಯಾದ ಹಝ್ರತ್ ಖದೀಜ(ರ.) ಬಡವರಾಗಿದ್ದ ಹಝ್ರತ್ ಮುಹಮ್ಮದ್ ಪೈಗಂಬರ್(ಸ.)ರವರ ಮುಂದಿಟ್ಟರು. ಪೈಗಂಬರರು ಆ ಅಪೇಕ್ಷೆಯನ್ನು ಸ್ವೀಕರಿಸಿದರು. ಆಗ ಹಝ್ರತ್ ಖದೀಜರವರ ವಯಸ್ಸು 40 ವರ್ಷ ಹಾಗೂ ಹಝ್ರತ್ ಪೈಗಂಬರರ ಪ್ರಾಯ 25 ವರ್ಷವಾಗಿತ್ತು. 25 ವರ್ಷಗಳ ಕಾಲದ ಆ ದಾಂಪತ್ಯ ಜೀವನ ಬಹಳ ಆದರ್ಶಕರವಾಗಿತ್ತು.

ಹಝ್ರತ್ ಖದೀಜರವರ ಮರಣದ ಬಳಿಕ ಹಝ್ರತ್ ಪೈಗಂಬರರು ಬೇರೆಯೂ ವಿವಾಹವಾಗಿದ್ದರು. ಹಝ್ರತ್ ಆಯಿಶ ಹೊರತು ಅವರು ಮದುವೆಯಾದ ಮಹಿಳಾ ಮಣಿಗಳೆಲ್ಲರೂ ವಿಧವೆಯರು ಅಥವಾ ವಿವಾಹ ವಿಚ್ಛೇದ ಹೊಂದಿದವರಾಗಿದ್ದರು. ಮಹಿಳೆಯರನ್ನು ಚರಸೊತ್ತುಗಳಂತೆ ಪರಿಗಣಿಸುತ್ತಿದ್ದ ಅರಬಿ ಜನತೆಯ ಮಧ್ಯದಲ್ಲಿದ್ದ ಪೈಗಂಬರರು ತನ್ನ ಪತ್ನಿಯರೊಡನೆ ಬಹಳ ಪ್ರೀತಿ ಮತ್ತು ಗೌರವದಿಂದಲೂ ಸಮಾನವಾಗಿಯೂ ವರ್ತಿಸಿದರು.

"ನಿಮ್ಮ ಪೈಕಿ ತನ್ನ ಧರ್ಮಪತ್ನಿಯೊಡನೆ ಉತ್ತಮವಾದ ರೀತಿಯಲ್ಲಿ ವರ್ತಿಸುವವನೇ ಉತ್ತಮನು. ನಾನು ನನ್ನ ಧರ್ಮಪತ್ನಿಯೊಡನೆ ಉತ್ತಮವಾದ ರೀತಿಯಲ್ಲಿ ವರ್ತಿಸುತ್ತೇನೆ" ಎಂದು ಹಝ್ರತ್ ಪೈಗಂಬರರು ಬೋಧಿಸಿದರು.

## ಸ್ತ್ರೀಯರಿಗೆ ಸ್ಥಾನಮಾನ

ಸಮುದಾಯದಲ್ಲಿ ಸ್ತ್ರೀಯರಿಗೆ ಸ್ಥಾನಮಾನ ನೀಡುವ ವಿಚಾರದಲ್ಲಿ ಮತ್ತು ಪಕ್ಷಪಾತರಹಿತವಾದ ನ್ಯಾಯ ದೊರಕಿಸಿಕೊಡುವುದರಲ್ಲಿ ಪೈಗಂಬರರು ಬಹಳ ಶ್ರದ್ಧೆವಹಿಸಿದ್ದರು. ಸ್ತ್ರೀಯರಿಗೆ ವಾರೀಸು ಹಕ್ಕನ್ನು ದೊರಕಿಸಿಕೊಟ್ಟ ಮೊತ್ತ ಮೊದಲಿನ ಧರ್ಮ ಇಸ್ಲಾಂ ಆಗಿದೆ. ಇಸ್ಲಾಮಿಗೆ ಮೊದಲು ಯಾವುದೇ ಧರ್ಮ ಸ್ತ್ರೀಯರಿಗೆ ವಾರೀಸು ಹಕ್ಕನ್ನೂ ಆಕೆಯ ಸೊತ್ತಿನ ಮೇಲೆ ಆಕೆಗೆ ಪೂರ್ಣಾಧಿಕಾರವನ್ನೂ ನೀಡಿಲ್ಲ.

ಯಾತ್ರೆಯಲ್ಲಿ ಸ್ತ್ರೀಯರಿದ್ದರೆ, ಅವರಿಗೆ ದಣಿವು ಮತ್ತು ಕ್ಲೇಶ ಉಂಟಾಗದಂತೆ ಸವಾರಿ ಮೃಗಗಳನ್ನು ನಡೆಸಬೇಕೆಂದು ಪೈಗಂಬರ್ ನಿರ್ದೇಶಿಸುತ್ತಿದ್ದರು. ಪುರುಷರು ಶೀಘ್ರವಾಗಿ ಸವಾರಿ ಮೃಗಗಳನ್ನು ಓಡಿಸುವಾಗ, **"ಗಾಜುಗಳ ಬಗ್ಗೆ ಗಮನಿಸಿರಿ"** ಎಂದು ಪೈಗಂಬರರು ಹೇಳುತ್ತಿದ್ದರು. ಅಂದರೆ, ಸ್ತ್ರೀಯರು ಯಾತ್ರಾ ತಂಡದಲ್ಲಿದ್ದರೆ, ಸವಾರಿಯ ಒಂಟೆಗಳನ್ನೂ ಕುದುರೆಗಳನ್ನೂ ವೇಗವಾಗಿ ಓಡಿಸಿದರೆ ಅವುಗಳ ಕುಲುಕಾಟದಿಂದ ಸ್ತ್ರೀಯರಿಗೆ ತೊಂದರೆಯಾದೀತು ಎಂದು ತಾತ್ಪರ್ಯ.

ಒಮ್ಮೆ ಒಂದು ಯುದ್ಧದಲ್ಲಿ ಕುದುರೆ ಮತ್ತು ಒಂಟೆಗಳ ಮೇಲೆ ಕುಳಿತು ಯುದ್ಧಮಾಡುತ್ತಿದ್ದ ಭಟರಿಗೆ ಏನೋ ಗಲಿಬಿಲಿಯುಂಟಾಗಿ ಮೃಗಗಳು ನಿಯಂತ್ರಣಾತೀತವಾದುವು. ಪೈಗಂಬರರು ಕುದುರೆಯ ಮೇಲಿಂದ ಕೆಳಗೆ ಬಿದ್ದುಬಿಟ್ಟರು. ಅದೇ ಸಂದರ್ಭದಲ್ಲಿ ಕೆಲವು ಮಹಿಳೆಯರು ಸಹ ಅವರ ಸವಾರಿ ಮೃಗಗಳ ಮೇಲಿನಿಂದ ಕೆಳಗೆ ಬಿದ್ದಿದ್ದರು. ಪೈಗಂಬರರ ಹಿಂದೆ ಇದ್ದ ಒಬ್ಬ ಶಿಷ್ಯ, ಪ್ರವಾದಿಯ ಸಮೀಪಕ್ಕೆ ಬಂದು ಪೈಗಂಬರರಿಗೆ ಸಹಾಯ ಮಾಡಲಿಕ್ಕೆ ಯತ್ನಿಸಿದರು. ಆಗಲೂ ಪೈಗಂಬರರ ಪಾದ ಕುದುರೆಯ ಜೀನಿಗೆ ಅಳವಡಿಸಿದ್ದ ರಿಕಾಪಿಗೆ ಸಿಕ್ಕಿಕೊಂಡಿತ್ತು. ತನ್ನ ಪಾದವನ್ನು ರಿಕಾಪಿನಿಂದ ಬಿಡಿಸಿಕೊಂಡು ಪೈಗಂಬರರು ಶಿಷ್ಯನೊಡನೆ, "ನನ್ನ ಬಗ್ಗೆ ಚಿಂತೆ ಬೇಡ. ಬೇಗ ಹೋಗಿ ಆ ಮಹಿಳೆಯರಿಗೆ ಸಹಾಯ ಮಾಡು" ಎಂದು ನುಡಿದರು.

**"ನೀವು ಸ್ತ್ರೀಯರೊಡನೆ ಬಹಳ ದಯಾಪೂರ್ವಕವಾಗಿ ವರ್ತಿಸಬೇಕು"** ಎಂದಾಗಿತ್ತು ಪೈಗಂಬರರು ತನ್ನ ಮರಣಕ್ಕೆ ತುಸು ಸಮಯ ಮುಂಚೆ ನೀಡಿದ ಉಪದೇಶ. **"ಒಬ್ಬನಿಗೆ ಹೆಣ್ಣುಮಕ್ಕಳಿದ್ದು ಅವರಿಗೆ ವಿದ್ಯಾಭ್ಯಾಸ ನೀಡುವ ಏರ್ಪಾಡು ಮಾಡಿ ಅವರನ್ನು ಪರಿಪಾಲಿಸಲಿಕ್ಕೋಸ್ಕರ ಕಷ್ಟಪಟ್ಟರೆ ಅಲ್ಲಾಹನು ಆತನನ್ನು ನರಕಾಗ್ನಿಯ ಶಿಕ್ಷೆಯಿಂದ ಬಿಡುಗಡೆಗೊಳಿಸುವನು"** ಎಂದು ಪೈಗಂಬರರು ಪದೇ ಪದೇ ಬೋಧಿಸುತ್ತಿದ್ದರು.

## ಗುಲಾಮರ ವಿಮೋಚನೆ

ಹಝ್ರತ್ ಖದೀಜ(ರ.) ಪೈಗಂಬರರನ್ನು ವಿವಾಹವಾದ ಬಳಿಕ ತನ್ನ ಸಂಪತ್ತನ್ನೆಲ್ಲ ಪತಿಯ ಸನ್ನಿಧಿಯಲ್ಲಿ ಸಮರ್ಪಿಸಿದರು. ತನ್ನ ಅಧೀನದಲ್ಲಿದ್ದ ಗುಲಾಮರನ್ನೆಲ್ಲ ಪೈಗಂಬರರ ವಶಕ್ಕೆಕೊಟ್ಟರು. ಪೈಗಂಬರರು ತನ್ನ ವಶಕ್ಕೆ ಬಂದ ಎಲ್ಲ ಗುಲಾಮರನ್ನು ಸ್ವತಂತ್ರಗೊಳಿಸಿದರು. ಇತಿಹಾಸದಲ್ಲಿ ಅಷ್ಟರ ವರೆಗೆ ಯಾರೂ ಮಾಡದಿದ್ದ ಒಂದು ಮಹಾಕ್ರಾಂತಿಯನ್ನು ಅವರು ಮಾಡಿದರು.

ಗುಲಾಮರೊಂದಿಗೆ ಕರುಣೆಯಿಂದ ವರ್ತಿಸಬೇಕೆಂದು ಪೈಗಂಬರರು ಬೋಧಿಸಿದರು. ಯಾರಾದರೂ ತನ್ನ ಗುಲಾಮನಿಗೆ ಥಳಿಸಿದರೆ ಅಥವಾ ಬೈದರೆ, ಅದಕ್ಕೆ ಪ್ರಾಯಶ್ಚಿತ್ತವೇನೆಂದರೆ ಆ ಗುಲಾಮನನ್ನು ಸ್ವತಂತ್ರಗೊಳಿಸುವುದು ಎಂದು ಪೈಗಂಬರರು ಉಪದೇಶಿಸಿದರು. **"ಯಾರಾದರೂ ತನ್ನ ವಶದಲ್ಲಿರುವ ಗುಲಾಮನನ್ನು**

ಬಿಡುಗಡೆಗೊಳಿಸಿದರೆ, ಅದರ ಪ್ರತಿಫಲವಾಗಿ ಅಲ್ಲಾಹನು ಆತನ ದೇಹದ ಪ್ರತಿಯೊಂದು ಅಂಗವನ್ನು ಆ ಗುಲಾಮನ ಅಂಗಗಳಿಗೆ ಬದಲಿಗೆ ಎಂಬಂತೆ ನರಕಾಗ್ನಿಯಿಂದ ಪಾರುಮಾಡುವನು" ಎಂದು ಅವರು ಶುಭವಾರ್ತೆ ಅರುಹಿಸಿದರು. ಸುಲಭವಾಗಿ ಮಾಡಿ ಮುಗಿಸಲು ಸಾಧ್ಯವಾಗುವ ರೀತಿಯಲ್ಲಿರುವ ಕೆಲಸಗಳಿಗೆ ಮಾತ್ರ ಗುಲಾಮರನ್ನು ನಿಯೋಜಿಸಬೇಕೆಂದೂ ಹೆಚ್ಚು ಶ್ರಮಕರವಾದ ಕೆಲಸವಾದರೆ ಅವನ ಯಜಮಾನ ಸಹ ಆ ಕೆಲಸದಲ್ಲಿ ಅವನಿಗೆ ನೆರವಾಗಬೇಕೆಂದೂ, ಆಗ ಆ ಗುಲಾಮನಿಗೆ ತಾನು ಮಾಡುವ ಕೆಲಸ ಅಪಮಾನಕರವೆಂದಾಗಲಿ ಕಷ್ಟಕರವೆಂದಾಗಲಿ ತೋಚದೆಂದು ಪೈಗಂಬರರು ಕಲಿಸಿದರು. ಒಬ್ಬ ಯಜಮಾನ ತನ್ನ ಗುಲಾಮನೊಂದಿಗೆ ಪ್ರಯಾಣ ಮಾಡುವುದಾದರೆ ಆ ಪ್ರಯಾಣಕ್ಕೆ ಉಪಯೋಗಿಸುವ ಸವಾರಿ ಮೃಗದ ಮೇಲೆ ಒಟ್ಟಿಗೆ ಕುಳಿತು, ಅಥವಾ ಒಮ್ಮೆ ಯಜಮಾನ, ಒಮ್ಮೆ ಗುಲಾಮ ಎಂಬ ರೀತಿಯಲ್ಲಿ ಬದಲಿಸಿ ಬದಲಿಸಿ ಕುಳಿತುಕೊಂಡು ಪ್ರಯಾಣಿಸಬೇಕೆಂದು ಪೈಗಂಬರರು ಆದೇಶಿಸಿದರು.

ಮುಸ್ಲಿಂ ಆದ ಬಳಿಕ ತನ್ನ ಸಮಯವನ್ನೆಲ್ಲ ಪೈಗಂಬರರೊಂದಿಗೆ ಕಳೆದಿದ್ದ, ಗುಲಾಮರೊಡನೆ ಹೇಗೆ ವರ್ತಿಸಬೇಕು, ಅವರನ್ನು ಹೇಗೆ ಸಾಕಿ ಸಲಹಬೇಕು ಎಂಬ ನಿರ್ದೇಶಗಳನ್ನು ಕೇಳುತ್ತಲಿದ್ದ ಅಬೂ ಹುರೈರ ಎಂಬ ಪೈಗಂಬರರ ಶಿಷ್ಯ ಹೀಗೆ ಹೇಳಿದ್ದರು : "ನನ್ನ ಜೀವ ಯಾರ ವಶವಿದೆಯೋ ಆ ಅಲ್ಲಾಹನ ಆಣೆ ಹಾಕಿ ನಾನು ಹೇಳುತ್ತೇನೆ - ಪವಿತ್ರವಾದ ಧರ್ಮಯುದ್ಧಗಳಲ್ಲಿ ಭಾಗವಹಿಸಲಿಕ್ಕೆ, ಹಜ್ಜ್ ಕರ್ಮ ನಿರ್ವಹಿಸಲಿಕ್ಕೆ ಮತ್ತು ನನ್ನ ವೃದ್ಧೆಯಾದ ಮಾತೆಯ ಆರೈಕೆ ಮಾಡುವುದು ನನಗೆ ಇಲ್ಲದಿರುತ್ತಿದ್ದರೆ, ನಾನು ಒಬ್ಬ ಗುಲಾಮನಾಗಿ ಜೀವಿಸಿ ಮರಣ ಹೊಂದಲು ಬಯಸುತ್ತಿದ್ದೆ. ಕಾರಣವೇನೆಂದರೆ, ಮುಹಮ್ಮದ್ ಪೈಗಂಬರ್(ಸ.) ಅಷ್ಟು ಹೆಚ್ಚು ದಯೆಯಿಂದ ಗುಲಾಮರೊಡನೆ ವರ್ತಿಸಬೇಕೆಂದು ಒತ್ತಾಯಿಸುತ್ತಿದ್ದರು."

ಪೈಗಂಬರರ ಶಿಷ್ಯರಾದ ಹಝ್ರತ್ ಅಬೂದರ್ ಗಫಾರಿ(ರಝಿಯಲ್ಲಾಹು ಅನ್‌ಹು)ರವರು ತನ್ನ ಗುಲಾಮ ಧರಿಸುವ ಅದೇ ತರದ ಬಟ್ಟೆಗಳನ್ನು ಧರಿಸುತ್ತಿದ್ದರು. ಪೈಗಂಬರರ ಉಪದೇಶದ ಪ್ರಭಾವವೇ ಅದಕ್ಕೆ ಕಾರಣವಾಗಿತ್ತು.

ಪೈಗಂಬರರು ಹೀಗೆ ಉಪದೇಶಿಸಿದರು : " ಈ ಗುಲಾಮರು ಯಾರು? ಅವರು ನಿಮ್ಮ ಸಹೋದರರು ಹಾಗೂ ನಿಮ್ಮ ಶಕ್ತಿಯ ಮೂಲವಾಗಿದ್ದಾರೆ. ಅಲ್ಲಾಹನು ನಿಮಗೆ ಅವರ ಮೇಲೆ ಒಂದು ತಾತ್ಕಾಲಿಕ ಅಧಿಕಾರವನ್ನು ನೀಡಿದ್ದಾನಷ್ಟೆ. ನೀವು ಅವರನ್ನು ಸಮಾನವಾಗಿ ಕಾಣಬೇಕು. ನೀವು ಉಣ್ಣುವ ಅದೇ ಆಹಾರವನ್ನು ಅವರಿಗೆ ಕೊಡಬೇಕು. ನೀವು ಧರಿಸುವ ಅದೇ ಉಡುಪನ್ನು ಅವರಿಗೆ ನೀಡಬೇಕು. ನಿಮಗೆ ಮಾಡಲು ಅಸಾಧ್ಯವಾದ ಕೆಲಸವನ್ನು ಅವರಿಂದ ಮಾಡಿಸಬಾರದು. ಅವರು ಮಾಡುವ ಕೆಲಸದಲ್ಲಿ ನೀವು ಅವರಿಗೆ ಸಹಾಯ ಮಾಡಬೇಕು."

ಇನ್ನೊಂದು ಸಂದರ್ಭದಲ್ಲಿ ಪೈಗಂಬರರು ಹೀಗೆ ಹೇಳಿದರು: "ನಿಮ್ಮ ಸೇವಕನು ನಿಮಗೋಸ್ಕರ ಆಹಾರವನ್ನು ಪಾಕಮಾಡಿ ಬಡಿಸುವಾಗ, ನಿಮ್ಮೊಂದಿಗೆ ಕುಳಿತುಕೊಂಡು ಉಣ್ಣಲು ಅವನೊಡನೆ ಹೇಳಿರಿ. ಕಡಿಮೆ ಪಕ್ಷ, ಅದರಲ್ಲಿ ಒಂದು ಅಂಶವನ್ನಾದರೂ ನಿಮ್ಮೊಂದಿಗೆ ಕುಳಿತು ಉಣ್ಣಲು ಹೇಳಿರಿ. ನಿಮಗೆ ಆಹಾರವನ್ನು ಪಾಕಗೊಳಿಸುವ ಮೂಲಕ ಆ ಆಹಾರದಲ್ಲಿ ಹಕ್ಕನ್ನೂ ಅವನು ಪಡೆದುಬಿಟ್ಟಿದ್ದಾನೆ."

## ಬಡ ಜನರ ಸಂರಕ್ಷಣೆ

ಸಮುದಾಯದ ಬಡ ಜನರ ಪ್ರಗತಿ ಮತ್ತು ಸಮಾಜದಲ್ಲಿ ಅವರ ಸ್ಥಾನಮಾನಗಳನ್ನು ಉನ್ನತಿಗೇರಿಸುವುದರಲ್ಲಿ ಮುಹಮ್ಮದ್ ಪೈಗಂಬರ್ (ಸ.) ಯಾವಾಗಲೂ ಆಸಕ್ತರಾಗಿದ್ದರು.

ಬಡವಳಾದ ಓರ್ವ ಮುಸ್ಲಿಂ ಸ್ತ್ರೀ ಮದೀನದ ಮಸೀದಿ ಗುಡಿಸಿ ಶುಚಿಗೊಳಿಸುತ್ತಿದ್ದಳು. ಪೈಗಂಬರರು ಆ ಮಹಿಳೆಯನ್ನು ಕೆಲವು ದಿವಸಗಳಿಂದ ಮಸೀದಿಯಲ್ಲಿ ಕಾಣದಿದ್ದಾಗ ಆಕೆಯ ಬಗ್ಗೆ ವಿಚಾರಿಸಿದರು. ಆ ಸ್ತ್ರೀ ಮೃತಪಟ್ಟಿರುವಳೆಂಬ ಸಂಗತಿ ತಿಳಿದಾಗ ಪೈಗಂಬರರು ಹೇಳಿದರು : "ಆಕೆ ಮೃತಪಟ್ಟ ವಿಷಯ ನನಗೇಕೆ ತಿಳಿಸಲಿಲ್ಲ? ನಾನು ಆಕೆಯ ಜನಾಝ ನಮಾಝಿನಲ್ಲಿ ಭಾಗವಹಿಸುತ್ತಿದ್ದನಷ್ಟೆ. ಒಂದು ವೇಳೆ, ಆ ಸ್ತ್ರೀ ಬಡವಳಾಗಿದ್ದರಿಂದ, ಯಾವ ಪರಿಗಣನೆಗೂ ಅರ್ಹಳಾಗದವಳಾಗಿ ಗಣಿಸಲ್ಪಟ್ಟಿರಬಹುದು. ಇದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಆಕೆಯ ಗೋರಿಯ ಬಳಿಗೆ ನನ್ನನ್ನು ಕರಕೊಂಡು ಹೋಗಿರಿ." ಹಾಗೆ ಪೈಗಂಬರರು ಆ ಸ್ತ್ರೀಯ ಗೋರಿಯ ಬಳಿಗೆ ಹೋಗಿ ಆಕೆಗೋಸ್ಕರ ಪ್ರಾರ್ಥಿಸಿದರು.

ಬಡಜನರನ್ನು ಗೌರವಿಸಬೇಕೆಂದೂ ಅವರ ಮನಸ್ಸನ್ನು ನೋಯಿಸಬಾರದೆಂದೂ ಅವರ ಆವಶ್ಯಕತೆಗಳನ್ನು ಪೂರೈಸಿಕೊಡಲಿಕ್ಕೆ ಪ್ರಯತ್ನಿಸಬೇಕೆಂದೂ ಪೈಗಂಬರರು ಅನುಯಾಯಿಗಳಿಗೆ ಉಪದೇಶಿಸುತ್ತಿದ್ದರು. ಹಾಗೆಯೇ, ಬಡ ಜನರು ತಮ್ಮ ವ್ಯಕ್ತಿತ್ವವನ್ನು ಕಾಪಾಡಬೇಕೆಂದೂ ಸಹಾಯಕ್ಕಾಗಿ ಯಾಚಿಸಬಾರದೆಂದೂ ಬೋಧಿಸುತ್ತಿದ್ದರು.

ಪೈಗಂಬರರು ಧನಿಕರಿಗೆ ಹೇಳಿದರು : "ಧನ, ಪ್ರತಾಪ, ಅಧಿಕಾರ ಇವು ಸ್ವಂತ ಸಾಮರ್ಥ್ಯದಿಂದಾಗಲಿ ಪರಿಶ್ರಮದಿಂದಾಗಲಿ ಲಭ್ಯವಾದವು ಎಂದು ನೀವ್ಯಾರೂ ಭಾವಿಸಬೇಡಿರಿ. ನಿಮ್ಮ ಶಕ್ತಿ, ಸ್ಥಾನಮಾನ ಮತ್ತು ಧನ ಎಲ್ಲವೂ ಬಡವರ ಮೂಲಕ ನೀವು ಗಳಿಸುತ್ತೀರಿ."

ಅರೇಬಿಯಾದ ಹೆಚ್ಚಿನ ಕಡೆಗಳಲ್ಲಿ ಇಸ್ಲಾಂ ಧರ್ಮ ವಿಶ್ವಾಸ ಅಂಗೀಕರಿಸಲ್ಪಟ್ಟ ಕಾರಣದಿಂದ ಪೈಗಂಬರರಿಗೆ ಧಾರಾಳ ಪಾರಿತೋಷಕಗಳು ಲಭಿಸುತ್ತಿದ್ದವು. ಅವುಗಳನ್ನೆಲ್ಲ ಆಗಾಗಲೇ ಆ ಪುಣ್ಯಪುರುಷ ಅಗತ್ಯವಿದ್ದವರಿಗೆ ಹಂಚುತ್ತಿದ್ದರು.

ಮುಸ್ಲಿಮರು ಪರಸ್ಪರ ಪ್ರೀತಿ ವಿಶ್ವಾಸದಿಂದ ಜೀವಿಸಬೇಕೆಂದೂ ತಮ್ಮ ಮಧ್ಯೆ ಇರುವ ಬಡಬಗ್ಗರಿಗೆ ಬೇಕಾದ ಸಹಾಯ ಸಹಕಾರ ನೀಡಬೇಕೆಂದೂ ಹಾಗಿದ್ದರೆ ಮಾತ್ರ ಯಥಾರ್ಥ ದಾನಧರ್ಮ ಆಗುತ್ತದೆಂದೂ ಪೈಗಂಬರರು ನುಡಿಯುತ್ತಿದ್ದರು.

ಒಮ್ಮೆ ದಾನನೀಡಲಿಕ್ಕೋಸ್ಕರ ಯಾರೋ ಒಬ್ಬರು ಸ್ವಲ್ಪ ಖರ್ಜೂರವನ್ನು ಪೈಗಂಬರರಿಗೆ ಕಳುಹಿಸಿಕೊಟ್ಟರು. ಆ ಸಂದರ್ಭದಲ್ಲಿ ಕೇವಲ ಎರಡೂವರೆ ವರ್ಷ ಪ್ರಾಯದ ಮೊಮ್ಮಗ ಇಮಾಂ ಹಸನ್(ರ) ಪೈಗಂಬರರ ಸಮೀಪದಲ್ಲಿದ್ದರು. ಶಿಶು ಹಸನ್ ಒಂದು ಖರ್ಜೂರವನ್ನು ತೆಗೆದು ಬಾಯಿಗೆ ಹಾಕಿದರು. ಕೂಡಲೇ ಪೈಗಂಬರರು ಮಗುವಿನ ಬಾಯಿಯೊಳಗೆ ಬೆರಳು ಹಾಕಿ ಆ ಖರ್ಜೂರವನ್ನು ಹೊರ ತೆಗೆದು, "ಮಗೂ, ಇದರಲ್ಲಿ ನಮಗೇನೂ ಹಕ್ಕಿಲ್ಲ. ಇದು ಅಲ್ಲಾಹನ ಸೃಷ್ಟಿಗಳಲ್ಲಿ ಸೇರಿದ ಬಡ ಜನರಿಗೋಸ್ಕರ ಉಳ್ಳದ್ದಾಗಿದೆ" ಎಂದು ಹೇಳಿದರು.

## ಒಂದು ಹೃದಯಸ್ಪರ್ಶಿ ಘಟನೆ

ಅತ್ಯುಷ್ಣ ಕಾಲದಲ್ಲೊಮ್ಮೆ ಪೈಗಂಬರರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಅತಿ ಬಡವನಾದ ಒಬ್ಬ ಮುಸ್ಲಿಂ ಭಾರವಾದೊಂದು ಹೊರೆಯನ್ನು ಹೊತ್ತುಕೊಂಡು ಹೋಗುವುದನ್ನು ಕಂಡರು. ಆತನ ಮುಖ ಕಳೆಗುಂದಿತ್ತು. ಬೆವರು ಮತ್ತು ಧೂಳಿನಿಂದಾಗಿ ಆತನ ಮುಖ ಹೆಚ್ಚು ಅನಾಕರ್ಷಕವಾಗಿತ್ತು. ಆತನು ತುಂಬಾ ದುಃಖಿತನಾಗಿದ್ದನು. ಪೈಗಂಬರರು ಆತನ ಕಣ್ಣಿಗೆ ಕಾಣದಂತೆ ಆತನ ಹಿಂದಿನಿಂದ ಹೋಗಿ, ಸಣ್ಣ ಮಕ್ಕಳು ವಿನೋದಕ್ಕಾಗಿ ಮಾಡುವ ರೀತಿಯಲ್ಲಿ ತನ್ನ ಎರಡು ಅಂಗೈಗಳಿಂದ ಆತನ ಕಣ್ಣುಗಳನ್ನು ಮುಚ್ಚಿ ಹಿಡಿದುಕೊಂಡರು. ತನ್ನ ಕಣ್ಣುಗಳನ್ನು ಯಾರು ಮುಚ್ಚಿದ್ದೆಂದು ಆತನು ಊಹಿಸಲಿ ಎಂದು ಪೈಗಂಬರರು ಬಯಸಿದ್ದರು. ಆತನು ತನ್ನ ಎರಡು ಕೈಗಳನ್ನು ಹಿಂದಕ್ಕೆ ಸರಿಸಿ ತನ್ನ ಹಿಂದೆ ನಿಂತಿದ್ದ ವ್ಯಕ್ತಿಯನ್ನು ಸವರಿನೋಡಿ ಅದು ಮುಹಮ್ಮದ್ ಪೈಗಂಬರ್(ಸ.) ಎಂದು ಗುರುತಿಸಿದನು. ತನ್ನಂಥ ಒಬ್ಬ ದಾರಿದ್ರ್ಯ ಸ್ಥಿತಿಯಲ್ಲಿರುವ ಮನುಷ್ಯನೊಡನೆ ಪೈಗಂಬರರು ಹೊರತು ಬೇರೆ ಯಾರೂ ಇಂಥ ಪ್ರೀತಿಯನ್ನು ತೋರಿಸಲಿಕ್ಕಿಲ್ಲವೆಂದು ಆತನು ಊಹಿಸಿರಬೇಕು. ಆನಂದಾತಿರೇಕದಿಂದ ಆತನು ಪೈಗಂಬರರ ದೇಹಕ್ಕೆ ತನ್ನ ಬೆನ್ನನ್ನು ತಾಗಿಸಿ ತಬ್ಬಿಕೊಂಡನು. ಬೆವರು ಮತ್ತು ಧೂಳಿನಿಂದ ಕೂಡಿದ ಆತನ ಶರೀರ ಪೈಗಂಬರರ ಶರೀರಕ್ಕೆ ಬಿಗಿಯಾಗಿ ಒತ್ತಿಕೊಂಡಿತು. ಎಷ್ಟು ಹೊತ್ತು ಪೈಗಂಬರರು ತನ್ನನ್ನು ಹೀಗೆ ತೃಪ್ತಿ ಹೊಂದಲು ಬಿಡುವರು ಎಂದು ತಿಳಿಯಲು ಆತನು ಆಶಿಸಿರಬಹುದು. ಪೈಗಂಬರರು ನಗುತ್ತಾ ನಿಂತುಕೊಂಡು ಆ ಬಡ ವ್ಯಕ್ತಿಗೆ ತೃಪ್ತಿಯಾಗುವ ವರೆಗೆ ತನ್ನ ದೇಹವನ್ನು ಅಪ್ಪಿಕೊಳ್ಳಲು ಬಿಟ್ಟುಕೊಟ್ಟರು. ದುಃಖಿತನಾಗಿದ್ದ ಆತನಿಗೆ ಸಾಂತ್ವನದ ಮಾತುಗಳನ್ನು ಹೇಳಿದರು.

## ನೆರೆಹೊರೆಯವರೊಡನೆ

ಪೈಗಂಬರರು ತನ್ನ ನೆರೆಹೊರೆಯವರೊಡನೆ ಬಹಳ ಕರುಣೆ ಮತ್ತು ಪ್ರೀತಿಯಿಂದ ವರ್ತಿಸಿದರು. ನೆರೆಹೊರೆಯವನು ಹಸಿದಿರುವಾಗ ಹೊಟ್ಟೆ ತುಂಬ ತಿನ್ನುವವನು ಮುಸ್ಲಿಮನಲ್ಲವೆಂದು ಪೈಗಂಬರರು ಬೋಧಿಸಿದರು.

ನೆರೆಹೊರೆಯವನನ್ನು ಪೀಡಿಸುವವನು, ಅವರ ಸುರಕ್ಷೆಗೆ ಭಂಗವುಂಟುಮಾಡುವವನು ಸತ್ಯವಿಶ್ವಾಸಿಯಲ್ಲ ಎಂದು ಪೈಗಂಬರರು ಎಚ್ಚರಿಸಿದರು.

ವಿಶಿಷ್ಟ ಆಹಾರವನ್ನು ತಯಾರಿಸಿದರೆ ನೆರೆಹೊರೆಯವರಿಗೂ ಅದರ ಒಂದು ಪಾಲನ್ನು ನೀಡಬೇಕೆಂದು ಪೈಗಂಬರರು ಕಲಿಸಿದರು. "ಯಾರು ಅಲ್ಲಾಹನಲ್ಲೂ ವಿಧಿನಿರ್ಣಾಯಕ ದಿನದ ಬಗ್ಗೆಯೂ ನಂಬುತ್ತಾನೋ ಆತನು ಎಂದಿಗೂ ನೆರೆಹೊರೆಯವರಿಗೆ ತೊಂದರೆಯುಂಟಾಗುವ ಏನನ್ನೂ ಮಾಡಲಾರ" ಎಂದು ಪೈಗಂಬರರು ನುಡಿದರು.

## ಇತರರ ತಪ್ಪನ್ನು ಅವಗಣಿಸುವುದು

ಪೈಗಂಬರರು ಎಂದೂ ಇತರರ ತಪ್ಪನ್ನೂ ಕೊರತೆಗಳನ್ನೂ ಬಹಿರಂಗಪಡಿಸುತ್ತಿರಲಿಲ್ಲ. ಜನರು ತಮ್ಮ ಸ್ವಂತ ತಪ್ಪುಗಳನ್ನು ಇತರರಿಗೆ ತಿಳಿಯಪಡಿಸಬಾರದೆಂದು ಸಹ ಅವರು ಉಪದೇಶಿಸಿದರು.

"ಒಬ್ಬನು ಮತ್ತೊಬ್ಬನ ತಪ್ಪುಗಳನ್ನು ಮರೆಮಾಚಿ ಇಟ್ಟರೆ ಅಲ್ಲಾಹನು ವಿಧಿ ನಿರ್ಣಾಯಕ ದಿನದಂದು ಆತನ ತಪ್ಪುಗಳನ್ನು ಮರೆಮಾಚುವನು" ಎಂದು ಪೈಗಂಬರರು ಬೋಧಿಸಿದರು.

ಪಾಪಕೃತ್ಯಗಳಿಗೆ ವಿರುದ್ಧವಾಗಿ ಮಾತ್ರ ನಿಯಮವನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕೆಂದು ಪೈಗಂಬರರು ಕಲಿಸಿದರು. ಒಮ್ಮೆ ಯುದ್ಧ ಕಾಲದಲ್ಲಿ, ಅಡಗಿ ಕುಳಿತು, ಏಕಾಂಗಿಯಾಗಿ ಸಿಗುವ ಮುಸ್ಲಿಮರನ್ನು ಆಕ್ರಮಿಸಿ ನಿಷ್ಕರುಣೆಯಿಂದ ಹತ್ಯೆಮಾಡುತ್ತಿದ್ದ ಒಬ್ಬ ಅವಿಶ್ವಾಸಿಯನ್ನು ಕೆಲವು ಮುಸ್ಲಿಮರು ಕಂಡರು. ಆಗ ಹಝ್ರತ್ ಉಸಾಮ ಬಿನ್ ಝೈದ್(ರ) ಆತನನ್ನು ಹಿಡಿದು ಕೊಲ್ಲಲಿಕ್ಕಾಗಿ ತನ್ನ ಖಡ್ಗವನ್ನು ಮೇಲೆತ್ತಿದರು. ರಕ್ಷಾಮಾರ್ಗ ಕಾಣದಿದ್ದಾಗ ಆ ಅಮುಸ್ಲಿಂ ಘಾತಕನು ಮುಸ್ಲಿಮರ ಕಲಿಮದ ಮೊದಲ ಅಂಶವನ್ನು ಉಚ್ಚರಿಸಲು ತೊಡಗಿದನು. ಅಂದರೆ "ಅಲ್ಲಾಹನಲ್ಲದೆ ಆರಾಧನೆಗರ್ಹನು ಬೇರಾರೂ ಇಲ್ಲ" ಎಂದು ನುಡಿದು ತಾನು ಇಸ್ಲಾಂ ಧರ್ಮವನ್ನು ಸ್ವೀಕರಿಸಿರುವೆನೆಂದು ಸೂಚಿಸಿದನು. ಇದಕ್ಕೇನೂ ಬೆಲೆಕೊಡದೆ ಹಝ್ರತ್ ಉಸಾಮ ಆ ಘಾತಕನನ್ನು ವಧಿಸಿಬಿಟ್ಟರು. ಈ ಸಂಗತಿಯನ್ನು ತಿಳಿದಾಗ ಪೈಗಂಬರರು ಹಝ್ರತ್ ಉಸಾಮರನ್ನು ಕರೆದು "ಉಸಾಮಾ, ವಿಧಿ ನಿರ್ಣಾಯಕ ದಿನದಂದು ಆತನ ವಿಶ್ವಾಸ ಘೋಷಣೆ ಆತನ ಪರವಾಗಿ ಸಾಕ್ಷಿ ನೀಡುವುದಾದರೆ (ಅಂದರೆ, ಆ ಮನುಷ್ಯನು ಪ್ರಾಮಾಣಿಕವಾಗಿಯೂ ಪಶ್ಚಾತ್ತಾಪಪಟ್ಟು, ಇಸ್ಲಾಮಿನ ಕಲಿಮವನ್ನು ಉಚ್ಚರಿಸಿದ್ದರೆ) ನಿಮ್ಮ ಸ್ಥಿತಿಯೇನಾಗಿರಬಹುದು?" ಎಂದು ಕೇಳಿದರು. ಹಝ್ರತ್ ಉಸಾಮ ಉತ್ತರಿಸಿದರು : "ಪ್ರವಾದಿವರ್ಯರೆ, ಆತನು ಮುಸ್ಲಿಮರ ಘಾತಕನಾಗಿದ್ದನು. ಆತನ ಆ ಕಲಿಮ ತನ್ನ ಜೀವವನ್ನು ರಕ್ಷಿಸುವ ಒಂದು ತಂತ್ರ ಮಾತ್ರವಾಗಿತ್ತು." ಆದರೆ ಪೈಗಂಬರರು ಪುನಃ ಕೇಳಿದರು : "ಉಸಾಮಾ, ವಿಧಿ ನಿರ್ಣಾಯಕ ದಿನದಂದು ಆತನ ವಿಶ್ವಾಸ ಘೋಷಣೆ ಆತನ ಪರವಾಗಿ ಸಾಕ್ಷಿ ಹೇಳುವುದಾದರೆ ನಿಮ್ಮ ಸ್ಥಿತಿ ಏನಾಗಿರಬಹುದು? "

ಆ ವ್ಯಕ್ತಿಯ ಮರಣಕ್ಕೆ ಕಾರಣಕರ್ತನಾದ ಉಸಾಮರೊಡನೆ

ಅಲ್ಲಾಹನು ಉತ್ತರವನ್ನು ಕೇಳಬಹುದೆಂದಾಗಿತ್ತು ಪೈಗಂಬರರ ಮಾತಿನ ಒಳಾರ್ಥ. ಆತನು ಮುಸ್ಲಿಮರ ಘಾತಕನಾಗಿದ್ದರೂ ಆತನ ಕಲಿಮ ಉಚ್ಚಾರಣೆ ತನ್ನ ದುಷ್ಕೃತ್ಯಗಳ ಬಗ್ಗೆ ತಾನು ಪಶ್ಚಾತ್ತಾಪಪಡುತ್ತೇನೆ ಎಂಬ ಸೂಚನೆಯಾಗಿ ಗಣಿಸಲ್ಪಡಬಹುದು.

ಆ ಘಾತಕನು ಪಶ್ಚಾತ್ತಾಪದಿಂದಲ್ಲ, ಜೀವ ಉಳಿಸಲಿಕ್ಕಾಗಿ ಮಾತ್ರ ಕಲಿಮ ಉಚ್ಚರಿಸಿದ್ದೆಂದು ಉಸಾಮ ಪುನರಾವರ್ತಿಸಿ ಹೇಳಿದರು. ಆಗ ಪೈಗಂಬರರು ಉಸಾಮರೊಡನೆ, "ಆತನು ಹೇಳುವುದು ಪ್ರಾಮಾಣಿಕತೆಯಿಂದಲೋ ಅಲ್ಲವೋ ಎಂದು ತಿಳಿಯಲಿಕ್ಕೆ ನೀವು ಆತನ ಹೃದಯದೊಳಗೆ ಇಣುಕಿ ನೋಡಿದ್ದೀರಾ! ಆತನ ವಿಶ್ವಾಸ ಘೋಷಣೆ ನಿಮ್ಮ ವಿರುದ್ಧ ಸಾಕ್ಷ್ಯವೆಂದಾದರೆ ವಿಧಿನಿರ್ಣಾಯಕ ದಿನದಂದು ಅಲ್ಲಾಹನ ಪ್ರಶ್ನೆಗೆ ನೀವು ನೀಡುವ ಉತ್ತರವೇನು?" ಎಂದು ಕೇಳಿದರು.

ಜನರ ತಪ್ಪುಗಳನ್ನೂ ಅಕೃತ್ಯಗಳನ್ನೂ ಕ್ಷಮಿಸಿಕೊಡಲಿಕ್ಕೆ ಪೈಗಂಬರರು ಸದಾ ಸನ್ನದ್ಧರಾಗಿದ್ದರು. ಪೈಗಂಬರರ ಪತ್ನಿ ಹಝ್ರತ್ ಆಯಿಶ(ರ)ರ ವಿರುದ್ಧ ಅಪವಾದ ಪ್ರಚಾರದ ಹಿಂದೆ ವರ್ತಿಸಿದ ವ್ಯಕ್ತಿ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ (ಅಂದರೆ ಆಯಿಶರವರ ತಂದೆಯ) ಔದಾರ್ಯವನ್ನು ಆಶ್ರಯಿಸಿಕೊಂಡಿರುವ ವ್ಯಕ್ತಿಯಾಗಿದ್ದನು. ಹಝ್ರತ್ ಆಯಿಶ(ರ)ರವರಿಗೆ ವಿರುದ್ಧವಾದ ಆರೋಪ ಆಧಾರ ರಹಿತವೆಂದು ರುಜುವಾದಾಗ ಹಝ್ರತ್ ಅಬೂಬಕರ್(ರ) ಆ ವ್ಯಕ್ತಿಗೆ ನೀಡುತ್ತಿದ್ದ ನೆರವನ್ನು ನಿಲ್ಲಿಸಿದರು. ಈ ಸಂಗತಿಯನ್ನು ತಿಳಿದ ಪೈಗಂಬರರು ಹಝ್ರತ್ ಅಬೂಬಕರ್‌ರವರೊಡನೆ ಮಾತನಾಡಿ, ಆ ವ್ಯಕ್ತಿ ತಪ್ಪೆಸಗಿದ್ದರೂ ಅಬೂಬಕರ್‌ರಂತಹವರು ಆತನ ಜೀವನಾಂಶವನ್ನು ನಿಲ್ಲಿಸಿಬಿಟ್ಟು ಹೀಗೆ ಇನ್ನೊಂದು ತಪ್ಪು ಮಾಡಬಾರದಾಗಿತ್ತು ಎಂದು ಹೇಳಿದರು. ಇದನ್ನು ಕೇಳಿದ ಹಝ್ರತ್ ಅಬೂಬಕರ್(ರ) ತನ್ನ ಸ್ವಂತ ಮಗಳಿಗೆ ವಿರುದ್ಧವಾಗಿ ಅಪವಾದಗಳನ್ನು ಪ್ರಚಾರಮಾಡಿದ ಆ ವ್ಯಕ್ತಿಗೆ ತನ್ನ ನೆರವನ್ನು ಪುನರಾರಂಭಿಸಿದರು.

**ಸರಳ ಜೀವನ**

ಆಹಾರ ಪಾನೀಯಾದಿ ವಿಚಾರಗಳಲ್ಲಿ ಪೈಗಂಬರರು ಅತ್ಯಂತ ಮಿತತ್ವವನ್ನು ಪಾಲಿಸಿದ್ದರು. ರುಚಿಕರವಲ್ಲದ ಭಕ್ಷ್ಯವಸ್ತುಗಳ ಬಗ್ಗೆ ಅವರು ಎಂದೂ ಅತೃಪ್ತಿ ತೋರಿಸಿರಲಿಲ್ಲ. ಅಂತಹ ಭಕ್ಷ್ಯವಸ್ತುಗಳನ್ನು ಸಿದ್ಧಪಡಿಸಿದ ವ್ಯಕ್ತಿಯನ್ನು ನಿರಾಶೆಗೊಳಿಸಬಾರದೆಂದು ಭಾವಿಸಿ ಅವು ಭಕ್ಷ್ಯಯೋಗ್ಯವೆಂದಾದರೆ ಭಕ್ಷಿಸುತ್ತಿದ್ದರು. ಆಹಾರವನ್ನು ತಿನ್ನಲು ಕುಳಿತರೆ ತನ್ನ ಮುಂದೆ ಇರುವ ಆಹಾರ ವಸ್ತುಗಳನ್ನು ಮಾತ್ರ ಗಮನಿಸುತ್ತಿದ್ದರು. ಯಾರಾದರೂ ಭಕ್ಷ್ಯವಸ್ತುಗಳನ್ನು ಪೈಗಂಬರರಿಗೆ ಕಳುಹಿಸಿಕೊಟ್ಟರೆ ಅಲ್ಲಿ ಸನ್ನಿಹಿತರಾಗಿದ್ದ ಎಲ್ಲರಿಗೂ ಅದನ್ನು ಹಂಚಿಕೊಡುತ್ತಿದ್ದರು. ಪೈಗಂಬರರು ಹೊಟ್ಟೆತುಂಬ ತಿನ್ನುತ್ತಿರಲಿಲ್ಲ.

ಒಮ್ಮೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಕೆಲವರು ಪೈಗಂಬರರನ್ನು, ಹುರಿದ ಆಡಿನ ಮಾಂಸವನ್ನು ತಿನ್ನಲು ಆಮಂತ್ರಿಸಿದರು. ಆಡಿನ ಮಾಂಸ ಪೈಗಂಬರರಿಗೆ ಇಷ್ಟಕರವೇ ಆಗಿತ್ತು. ಆದರೆ ಪೈಗಂಬರರು ಆ ಆಹ್ವಾನವನ್ನು ತಿರಸ್ಕರಿಸಿದರು. ರಸ್ತೆಯ ಬದಿಯಲ್ಲಿ, ಆಮಂತ್ರಿಸಲ್ಪಡದ ಜನರ ಮಧ್ಯೆ ಆಹಾರ ಸೇವಿಸುವುದನ್ನು ಅವರು ಇಷ್ಟಪಡಲಿಲ್ಲ.

ಯಾವ ಸಂದರ್ಭದಲ್ಲೂ ಪೈಗಂಬರರು ಆಹಾರ ಸೇವನೆಗೆ ಕುಳಿತರೆ, ಆಹಾರ ಸೇವಿಸುವುದಕ್ಕೆ ಮುಂಚೆ ಅಲ್ಲಾಹನ ನಾಮವನ್ನೂ ಅವನ ಅನುಗ್ರಹಗಳನ್ನೂ ಸ್ಮರಿಸುತ್ತಿದ್ದರು. ಆಹಾರ ತಿಂದು ಮುಗಿಸಿದ ಬಳಿಕ ಆಹಾರ ಒದಗಿಸಿದ ಅಲ್ಲಾಹನಿಗೆ ವಂದನೆ ಸಲ್ಲಿಸುತ್ತಿದ್ದರು. ಯಾವುದೇ ಸತ್ಕಾರ್ಯವನ್ನು ಮಾಡಿ ಮುಗಿಸಿದಾಗಲೂ ಅವರು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರು.

ಹೊಟ್ಟೆ ತುಂಬುವುದಕ್ಕೆ ಮುಂಚೆ ಉಣ್ಣುವುದನ್ನು ನಿಲ್ಲಿಸಬೇಕೆಂದೂ ಒಬ್ಬನ ಊಟ ಇಬ್ಬರಿಗೆ ಉಣ್ಣಲು ಸಾಧ್ಯವಾಗಬೇಕೆಂದೂ ಪೈಗಂಬರರು ಅನುಯಾಯಿಗಳಿಗೆ ಉಪದೇಶಿಸುತ್ತಿದ್ದರು. ಪೈಗಂಬರರ ಮನೆಯಲ್ಲಿ ವಿಶಿಷ್ಟವಾದ ಆಹಾರವನ್ನೇನಾದರೂ ತಯಾರಿಸಿದರೆ ಅದರಲ್ಲಿ ಒಂದು ಪಾಲನ್ನು ನೆರೆಹೊರೆಯವರಿಗೆ ನೀಡಬೇಕೆಂದು ಅವರು ನಿರ್ದೇಶಿಸುತ್ತಿದ್ದರು.

ಪೈಗಂಬರರು ತನ್ನ ಸಂಗಡ ಇದ್ದವರಲ್ಲಿ ಯಾರಾದರೂ ಹಸಿವೆಗೆ ಈಡಾಗಿದ್ದಾರೆಯೇ ಎಂದು ಅವರ ಮುಖವನ್ನು ನೋಡಿ ತಿಳಿದುಕೊಳ್ಳುತ್ತಿದ್ದರು. ಹಾಗೆ ಅವರಿಗೆ ಆಹಾರವನ್ನು ಒದಗಿಸುವ ಏರ್ಪಾಡು ಮಾಡುತ್ತಿದ್ದರು.

ಪೈಗಂಬರರು ಬಹಳ ಸರಳವಾದ ವಸ್ತ್ರಧಾರಣೆಯನ್ನು ಇಷ್ಟಪಡುತ್ತಿದ್ದರು. ಖಮೀಸ್ (ಉದ್ದ ಅಂಗಿ) ಮತ್ತು ಪೈಜಾಮ ಅವರ ಸಾಮಾನ್ಯ ಉಡುಪಾಗಿತ್ತು.

ಪೈಗಂಬರರಿಗೆ ಹಲವು ರಾಜ್ಯಗಳ ರಾಯಭಾರಿಗಳನ್ನು ಭೇಟಿಯಾಗಲಿಕ್ಕಿರುವ ಕಾರಣ ಅಂಥ ಸಂದರ್ಭಗಳಲ್ಲಿ ಧರಿಸಲಿಕ್ಕೆ ಪೈಗಂಬರರಿಗೆ ವಿಶೇಷತರದ ಉಡುಪನ್ನು ಸಿದ್ಧಪಡಿಸಬೇಕೆಂದು ಒಮ್ಮೆ ಹಝ್ರತ್ ಉಮರ್(ರ) ಸಲಹೆಯಿತ್ತರು. ಆ ಸಲಹೆಯನ್ನು ನಿರಾಕರಿಸಿಕೊಂಡು ಪೈಗಂಬರರು : "ಈ ಕ್ರಮವನ್ನು ಅಲ್ಲಾಹನು ಇಷ್ಟಪಡಲಾರ. ನಾನು ಸಾಮಾನ್ಯವಾಗಿ ಧರಿಸುವ ಉಡುಪಿನಲ್ಲೇ ಅವರನ್ನು ಬರಮಾಡಿಕೊಳ್ಳುವೆನು" ಎಂದು ನುಡಿದರು.

ಪೈಗಂಬರರ ಶಯ್ಯೋಪಕರಣಗಳು ಬಹಳ ಸರಳವಾಗಿದ್ದವು. ಅವರು ಹಾಸಿಗೆಯನ್ನಾಗಲಿ ಮಂಚವನ್ನಾಗಲಿ ಉಪಯೋಗಿಸಲಿಲ್ಲ. ಒಂದು ತುಂಡು ಚರ್ಮ ಅಥವಾ ಒಂಟೆಯ ರೋಮದಿಂದ ತಯಾರಿಸಿದ ಒಂದು ತುಂಡು ಹಾಸು. ಅದರ ಮೇಲೆ ಅವರು ನಿದ್ರಿಸುತ್ತಿದ್ದರು.

ಪೈಗಂಬರರ ಮನೆ ಸಹ ಬಹಳ ಸರಳವಾಗಿತ್ತು. ಒಂದು ಕೋಣೆ ಮತ್ತು ವರಾಂಡ. ಯಾರಾದರೂ ಅತಿಥಿಗಳು ಬಂದರೆ ಕೋಣೆಯನ್ನು ಎರಡು ಪಾಲುಮಾಡಲಿಕ್ಕೆ ಮಧ್ಯದಲ್ಲೊಂದು ಪರದೆ ಇತ್ತು.

ಪೈಗಂಬರರ ಜೀವಿತಕಾಲದಲ್ಲಿ ತಾವು ಹಲವು ಸಲ ಖರ್ಜೂರ ಮತ್ತು ನೀರನ್ನು ಮಾತ್ರ ಸೇವಿಸಿ ದಿನ ಕಳೆಯಬೇಕಾಗಿ ಬಂದಿತ್ತೆಂದೂ ಪೈಗಂಬರರ ನಿಧನ ಸಮಯದಲ್ಲಿ ಆಹಾರ ವಸ್ತುವಾಗಿ ಮನೆಯಲ್ಲಿ

ಸ್ವಲ್ಪ ಖರ್ಜೂರ ಹೊರತು ಬೇರೇನೂ ಇರಲಿಲ್ಲವೆಂದೂ ಹಝ್ರತ್ ಆಯಿಶ (ರ) ಹೇಳಿದ್ದರು.

**ದೇವಭಕ್ತಿ**

ಅಲ್ಲಾಹನ ಮೇಲೆ ಅಮಿತವಾದ ಪ್ರೀತಿ ಮತ್ತು ಭಕ್ತಿ ಮುಹಮ್ಮದ್ ಪೈಗಂಬರರ ಜೀವಿತವನ್ನು ನಿಯಂತ್ರಿಸುವ ಪ್ರಧಾನ ಅಂಶವಾಗಿತ್ತು. ಭಾರವಾದ ಜವಾಬ್ದಾರಿಕೆಗಳೂ ಹೊಣೆಗಾರಿಕೆಗಳೂ ಅವರ ಮೇಲಿದ್ದರೂ ಹಗಲು ರಾತ್ರಿ ಎಷ್ಟೋ ತಾಸುಗಳನ್ನು ಅವರು ಅಲ್ಲಾಹನನ್ನು ಆರಾಧಿಸಲಿಕ್ಕೂ ಅವನ ಸ್ತುತಿಕೀರ್ತನೆ ಮಾಡಲಿಕ್ಕೂ ವ್ಯಯಿಸುತ್ತಿದ್ದರು. ಮಧ್ಯ ರಾತ್ರಿಯ ಬಳಿಕ ಪೈಗಂಬರರು ನಿದ್ರೆಯಿಂದ ಎದ್ದು ಮುಂಜಾನೆಯ ಸಾಮೂಹಿಕ ಪ್ರಾರ್ಥನೆಗೆ ಮಸೀದಿಗೆ ಹೋಗುವ ವರೆಗೆ ದೇವಾರಾಧನೆಯಲ್ಲಿ ಮಗ್ನರಾಗಿರುತ್ತಿದ್ದರು.

ದೀರ್ಘ ಸಮಯ ನಿಂತು ಪ್ರಾರ್ಥಿಸುವ ಕಾರಣ ಕೆಲವು ಸಲ ಪೈಗಂಬರರ ಕಾಲುಗಳು ಬಾತುಕೊಳ್ಳುತ್ತಿದ್ದವು. ಈ ಸ್ಥಿತಿಯನ್ನು ಕಂಡು ಪತ್ನಿ ಆಯಿಶ(ರ) ಪೈಗಂಬರರೊಡನೆ ಕೇಳಿದರು : "ಅಲ್ಲಾಹನು ತನ್ನ ಅಪಾರವಾದ ಪ್ರೀತಿ-ಸಾಮೀಪ್ಯಗಳಿಂದ ತಮ್ಮನ್ನು ಗೌರವಿಸಿದ್ದಾನೆ. ಹಾಗಿದ್ದರೂ ತಾವೇಕೆ ಸ್ವಯಂ ಪೀಡನೆಗಳನ್ನು ಸಹಿಸಿಕೊಂಡು ಇಷ್ಟು ಕಠಿಣವಾಗಿ ಪ್ರಾರ್ಥಿಸುತ್ತಿದ್ದೀರಿ?" ಪೈಗಂಬರರು ಪ್ರತ್ಯುತ್ತರವಾಗಿ ಹೀಗೆ ನುಡಿದರು : "ಅಲ್ಲಾಹನು ತನ್ನ ಪ್ರೀತಿ ಮತ್ತು ಸಾಮೀಪ್ಯದಿಂದ ನನ್ನನ್ನು ಅನುಗ್ರಹಿಸಿದ್ದರೆ, ನಾನು ಅವನಿಗೆ ಹೆಚ್ಚು ಕೃತಜ್ಞತೆಯನ್ನು ಸಲ್ಲಿಸಬೇಡವೇ? ನಮಗೆ ಲಭಿಸುವ ಅನುಗ್ರಹಗಳ ಪ್ರಮಾಣವನ್ನನುಸರಿಸಿ ಕೃತಜ್ಞತೆಯನ್ನು ಸಹ ಹೆಚ್ಚಿಸಬೇಕಲ್ಲವೇ?"

ಅಲ್ಲಾಹನ ಆಜ್ಞೆಯಾಗಲಿ ಅನುಮತಿಯಾಗಲಿ ಇಲ್ಲದೆ ಪೈಗಂಬರರು ಯಾವುದೇ ಕೆಲಸಕ್ಕೂ ಮುಂದಾಗುತ್ತಿರಲಿಲ್ಲ. ಮಕ್ಕ ನಿವಾಸಿಗಳಿಂದ ಅತಿ ಕಠಿಣವಾದ ದೌರ್ಜನ್ಯಗಳನ್ನು ಸಹಿಸಬೇಕಾಗಿ ಬಂದಾಗಲೂ ಅಲ್ಲಾಹನ ಆಜ್ಞೆ ಪಡೆಯುವ ವರೆಗೆ ಅವರು ಆ ಪಟ್ಟಣವನ್ನು ಬಿಟ್ಟು ಹೋಗಿರಲಿಲ್ಲ. ದೌರ್ಜನ್ಯ ಸಹಿಸಲು ಅಸಾಧ್ಯವಾದಾಗ ಅವರು ತನ್ನ ಅನುಯಾಯಿಗಳಿಗೆ ಮಕ್ಕವನ್ನು ತೊರೆದು ಅಬಿಸೀನಿಯಾದಲ್ಲಿ ಆಶ್ರಯವನ್ನು ಪಡೆಯುವರೆ ಅನುಮತಿ ನೀಡಿದರು. ಆಗ ಅವರಲ್ಲಿ ಕೆಲವರು ಪೈಗಂಬರರು ಸಹ ತಮ್ಮೊಂದಿಗೆ ಬರಬೇಕೆಂದು ಅಪೇಕ್ಷಿಪಟ್ಟರು. ಹಾಗೆ ಮಾಡಲು ದೇವಾನುಮತಿ ಸಿಕ್ಕಿಲ್ಲವೆಂಬ ಕಾರಣದಿಂದ ಆ ಕೋರಿಕೆಯನ್ನು ಪೈಗಂಬರರು ನಿರಾಕರಿಸಿದರು. ಸಾಮಾನ್ಯವಾಗಿ ಅತ್ಯಂತ ವಿಷಮಕರವಾದ ಸಂದರ್ಭಗಳಲ್ಲಿ ಬಹಳ ಪೀಡನೆಗಳಿಗೆ ಗುರಿಯಾಗುವಾಗ ತಮ್ಮ ನಿಕಟ ಬಂಧುಗಳನ್ನೂ ಸ್ನೇಹಿತರನ್ನೂ ತಮ್ಮ ಸಂರಕ್ಷಣೆಗೋಸ್ಕರ ತಮ್ಮೊಂದಿಗೆ ಜನಸಾಮಾನ್ಯರು ನಿಲ್ಲಿಸುತ್ತಾರೆ. ಆದರೆ ಪೈಗಂಬರರು ಮಕ್ಕ ಬಿಟ್ಟು ಹೋಗಲು ಅಲ್ಲಾಹನು ತನಗೆ ಆದೇಶ ನೀಡಿಲ್ಲ ಎಂಬ ಕಾರಣದಿಂದ ಮಕ್ಕದಲ್ಲೇ ನಿಲ್ಲಲು ನಿರ್ಧರಿಸಿ ತನ್ನ ಜನರಿಗೆ ಸುರಕ್ಷಿತವಾಗಿದ್ದ ಅಬಿಸೀನಿಯಾದಲ್ಲಿ ಆಶ್ರಯ ಪಡೆಯಲು ನಿರ್ದೇಶಿಸಿದರು.

ಸಾಮೂಹಿಕ ಪ್ರಾರ್ಥನೆಗೋಸ್ಕರ ಮಸೀದಿಗೆ ತಲಪಬೇಕೆಂಬ ವಿಚಾರದಲ್ಲಿ ಪೈಗಂಬರರು ಬಹಳ ಶ್ರದ್ಧಾವಂತರಾಗಿದ್ದರು. ಕಠಿಣವಾದ ಕಾಯಿಲೆಗೆ ಗುರಿಯಾಗಿ ಮಲಗಿದ್ದಾಗ - ಆಗ ಮನೆಯಲ್ಲಿ ಮಲಗಿ ನಮಾಝ್ ಮಾಡಲಿಕ್ಕೆ ಅನುಮತಿ ಇದೆ - ಅಂತಹ ಪರಿಸ್ಥಿತಿಯಲ್ಲಿ ಸಹ ನಮಾಝ್‌ಗೆ ನೇತೃತ್ವ ವಹಿಸಲಿಕ್ಕಾಗಿ ಪೈಗಂಬರರು ಮಸೀದಿಗೆ ಹೋಗುತ್ತಿದ್ದರು.

ಪೈಗಂಬರರ ಜೀವಿತವೆಂಬ ತಕ್ಕಡಿಯಲ್ಲಿ ಒಂದು ಕಡೆಯಲ್ಲಿ ದೈವಿಕ ಪ್ರಚೋದನೆಗಳಿದ್ದರೆ ಇನ್ನೊಂದು ಕಡೆಯಲ್ಲಿ ಸರಳತೆಯೂ ವಿನಯವೂ ಇತ್ತು. ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ : "ಪೈಗಂಬರರು ಒಮ್ಮೆ ಹೀಗೆ ಹೇಳುವುದಾಗಿ ನಾನು ಕೇಳಿದೆ - 'ಸ್ವಂತ ಸತ್ಕರ್ಮಗಳಿಂದ ಮಾತ್ರ ಒಬ್ಬ ಮನುಷ್ಯನಿಗೆ ಮೋಕ್ಷ ಲಭಿಸಲಾರದು'. ಆಗ ನಾನು ಹೇಳಿದೆ : 'ಪ್ರವಾದಿ ವರ್ಯರೆ, ತಮ್ಮ ಸ್ವಂತ ಸತ್ಕರ್ಮಗಳ ಮೂಲಕ ಖಂಡಿತವಾಗಿಯೂ ತಾವು ಸ್ವರ್ಗದಲ್ಲಿ ಪ್ರವೇಶಿಸುವಿರಿ'. ಇದಕ್ಕೆ ಉತ್ತರವಾಗಿ ಪೈಗಂಬರರು ನುಡಿದರು : "ಇಲ್ಲ, ನನಗೆ ಕೂಡ ನನ್ನ ಸತ್ಕರ್ಮಗಳ ಮೂಲಕ ಮಾತ್ರದಿಂದ ಸ್ವರ್ಗದಲ್ಲಿ ಪ್ರವೇಶಿಸಲಿಕ್ಕೆ ಸಾಧ್ಯವಿಲ್ಲ - ಅಲ್ಲಾಹನ ಅನುಗ್ರಹ ಮತ್ತು ದಯೆಯಿಂದ ನಾನು ಆಚ್ಛಾದಿಸಲ್ಪಟ್ಟರೆ ಹೊರತು."

ಒಂದು ಸಂದರ್ಭದಲ್ಲಿ ಮುಹಮ್ಮದ್ ಪೈಗಂಬರ್(ಸ.) ಹೇಳಿದರು: "ಮನುಷ್ಯ ಕುಲದ ಪ್ರಭು ಅಲ್ಲಾಹನಾಗಿದ್ದಾನೆ. ಆ ಅಲ್ಲಾಹನ ಆಜ್ಞೆಗಳಿಗೆ ಮಾತ್ರ ನಾನು ವಿಧೇಯನಾಗಿದ್ದೇನೆ. ಬೇರೆ ಯಾರದೇ ನಿರ್ದೇಶನಗಳಾಗಲಿ ಅಪೇಕ್ಷೆಗಳಾಗಲಿ ಆಜ್ಞೆಗಳಾಗಲಿ ಅಲ್ಲಾಹನ ಮುಂದೆ ನನಗೆ ಕ್ಷುಲ್ಲಕವಾಗಿವೆ."

ಏಕದೇವ ಬೋಧನೆಯನ್ನು ಪೈಗಂಬರರು ನಿಲ್ಲಿಸಬೇಕೆಂದು ಮಕ್ಕದ ಮುಖಂಡರು ಬಯಸಿದರು. ಮುಹಮ್ಮದ್ ತನ್ನ ಏಕದೇವ ಸಿದ್ಧಾಂತವನ್ನು ಪ್ರಚಾರ ಮಾಡುವುದನ್ನು ಬಿಟ್ಟರೆ ಮುಹಮ್ಮದ್ ಕೇಳುವ ಏನನ್ನು ಬೇಕಾದರೂ ಕೊಡಲು ಅವರು ಸಿದ್ಧರಾದರು. ರಾಜ್ಯದಲ್ಲಿ ಅತ್ಯಂತ ಗೌರವಾನ್ವಿತ ವ್ಯಕ್ತಿಯೆಂದು ಮುಹಮ್ಮದ್‌ರನ್ನು ಘೋಷಿಸಲಾಗುವುದು. ಮುಹಮ್ಮದ್ ಧನವನ್ನು ಆಶಿಸುವುದಾದರೆ ಎಷ್ಟು ಬೇಕಾದರೂ ನೀಡಲಾಗುವುದು. ಮಕ್ಕದ ಅತಿ ದೊಡ್ಡ ಧನಿಕನೆಂದು ಮನ್ನಣೆ ನೀಡಲಾಗುವುದು. ಮಕ್ಕದ ರಾಜನಾಗಲು ಮುಹಮ್ಮದ್ ಬಯಸುವುದಾದರೆ ತಾವು ಅದಕ್ಕೆ ಸಹ ಸಿದ್ಧರು. ಮುಹಮ್ಮದ್‌ರಿಗೆ ಸುಂದರಿಯಾದ ಓರ್ವ ತರುಣಿ ಬೇಕೆಂದಾದರೆ ಮಕ್ಕದ ಎಲ್ಲಾ ತರುಣೀಮಣಿಗಳನ್ನು ಮುಹಮ್ಮದರ ಮುಂದೆ ನಿಲ್ಲಿಸಲಾಗುವುದು. ಬದಲಿಗೆ ಮುಹಮ್ಮದ್ ಮಾಡಬೇಕಾದುದು ಇಷ್ಟೆ. ಅದೇನೆಂದರೆ ಏಕದೇವ ವಿಶ್ವಾಸವನ್ನು ತ್ಯಜಿಸುವುದು.

ಮುಹಮ್ಮದ್ ಪೈಗಂಬರರು ತಾಳ್ಮೆಯಿಂದ ಈ ಪ್ರಲೋಭನೆಗಳನ್ನೆಲ್ಲ ಆಲಿಸಿದರು. ಅನಂತರ ಶಾಂತವಾಗಿ, ಆದರೆ ದೃಢಸ್ವರದಲ್ಲಿ ಹೇಳಿದರು : "ನೀವು ನನ್ನ ಬಲ ಕೈಯಲ್ಲಿ ಸೂರ್ಯನನ್ನೂ ಎಡ ಕೈಯಲ್ಲಿ ಚಂದ್ರನನ್ನೂ ತಂದು ಕೊಟ್ಟರೆ ಕೂಡ ಈ ವಿಶ್ವಾಸದಿಂದ ಅಣುಮಾತ್ರದಷ್ಟಾದರೂ ವಿಚಲಿತನಾಗಲು ನಾನು ಸಿದ್ಧನಿಲ್ಲ."

**ಯುದ್ಧ ನೀತಿ**

ಮುಸ್ಲಿಮರು ಯಾವ ಕಾರಣದಿಂದಾಗಲಿ ಮೊದಲಿಗೆ ಆಕ್ರಮಿಸಬಾರದೆಂದೂ ಪ್ರತಿರೋಧವೆಂಬ ರೀತಿಯಲ್ಲಿ ಹೊರತು ಯುದ್ಧ ಮಾಡಬಾರದೆಂದೂ ಪೈಗಂಬರರು ನಿರ್ದೇಶಿಸಿದ್ದರು. ಯುದ್ಧದಲ್ಲಿ ಸ್ತ್ರೀಯರನ್ನಾಗಲಿ, ಮಕ್ಕಳನ್ನಾಗಲಿ, ವೃದ್ಧರನ್ನಾಗಲಿ, ಅಶಕ್ತರನ್ನಾಗಲಿ ಕೊಲ್ಲಬಾರದೆಂದೂ ಅನುಯಾಯಿಗಳಿಗೆ ಅವರು ಆದೇಶಿಸಿದ್ದರು. ಆಯುಧವನ್ನಿಟ್ಟು ಶರಣಾಗತಿಯಾದವರನ್ನು ಸಹ ಕೊಲ್ಲಬಾರದೆಂದು ಪೈಗಂಬರರು ಕಲಿಸಿದರು. ಯುದ್ಧಕಾಲದಲ್ಲಿ ಮರಗಳನ್ನು ಕಡಿದು ನಾಶಮಾಡಬಾರದೆಂದೂ ಪಟ್ಟಣಗಳನ್ನು ಕೊಳ್ಳೆಹೊಡೆದು ನಿರ್ನಾಮಮಾಡಬಾರದೆಂದೂ ಕಲಿಸಿದರು.

ಉಹದ್ ಯುದ್ಧದಲ್ಲಿ ಶತ್ರುಸೈನ್ಯದವರು ಮೃತರಾದ ಮುಸ್ಲಿಂ ಯೋಧರ ಅಂಗಾಂಗಗಳನ್ನು ಕಡಿದು ವಿರೂಪಗೊಳಿಸಿದ್ದರು. ಪೈಗಂಬರರ ಆದರಣೀಯ ಚಿಕ್ಕಪ್ಪ ಹಂಝರವರ ಮೃತಶರೀರವನ್ನು ಸಹ ಅವರು ವಿರೂಪಗೊಳಿಸಿದ್ದರು. ಆದರೆ ಮುಸ್ಲಿಮರು ಪ್ರತಿಕಾರವಾಗಿ ವೈರಿಗಳ ದೇಹವನ್ನು ಹಾಗೆ ವಿರೂಪಗೊಳಿಸಬಾರದೆಂದು ಪೈಗಂಬರರು ತಾಕೀತು ಮಾಡಿದರು.

ಬದ್ರ್ ಯುದ್ಧದಲ್ಲಿ 70 ಮಂದಿ ಅವಿಶ್ವಾಸಿಗಳನ್ನು ಸೆರೆಹಿಡಿಯಲಾಗಿತ್ತು. ಪೈಗಂಬರರ ನಿರ್ದೇಶಾನುಸಾರ ಆ ಕೈದಿಗಳನ್ನು ಬಹಳ ಚೆನ್ನಾಗಿ ನೋಡಿಕೊಳ್ಳಲಾಯಿತು. ಮುಸ್ಲಿಮರು ಕಾಲ್ನಡೆಯಾಗಿ ಹೋಗುವಾಗ ಅವರಿಗೆ ಸವಾರಿ ಮೃಗಗಳನ್ನು ಒದಗಿಸಲಾಯಿತು. ಮುಸ್ಲಿಮರು ಹಸಿವೆ ಮತ್ತು ಬಾಯಾರಿಕೆಯಿಂದ ಬಳಲುತ್ತಿದ್ದರೂ ಕೈದಿಗಳಿಗೆ ಅನ್ನ ಮತ್ತು ನೀರನ್ನು ಒದಗಿಸಲಾಯಿತು.

**ಪೈಗಂಬರರು ಶತ್ರುಗಳೊಡನೆ ಸೇಡು ತೀರಿಸಲಿಲ್ಲ**

ತನ್ನ ಅಧ್ಯಾಪನಗಳಿಗೆ ಮಕ್ಕ ನಿವಾಸಿಗಳಿಂದ ಕಠಿಣವಾದ ವಿರೋಧವನ್ನು ಅನುಭವಿಸಿದ ಪೈಗಂಬರರು ಮಕ್ಕದಿಂದ 60ಮೈಲುಗಳಷ್ಟು ದೂರವಿರುವ ತಾಯಿಫ್ ಎಂಬ ಪಟ್ಟಣವನ್ನು ಧರ್ಮ ಪ್ರಚಾರಕ್ಕಾಗಿ ಆಯ್ಕೆ ಮಾಡಿದರು. ಈ ಪಟ್ಟಣದ ಜನರ ಮುಂದೆ ಪೈಗಂಬರರು ತನ್ನ ಆಗಮನೋದ್ದೇಶವನ್ನು ವಿವರಿಸಿದಾಗ ಮಕ್ಕ ನಿವಾಸಿಗಳಿಗಿಂತ ಕ್ರೂರವಾಗಿ ತಾಯಿಫ್ ನಿವಾಸಿಗಳು ವರ್ತಿಸಿದರು. ಅವರು ಪೈಗಂಬರರನ್ನು ಅವಹೇಳಿಸಿ ತಾಯಿಫ್‌ನಿಂದ ಓಡಿಸಿಬಿಟ್ಟರು. ಅಷ್ಟೇ ಅಲ್ಲ, ಅವರು ಪೈಗಂಬರರ ಮೇಲೆ ನಾಯಿಗಳನ್ನು ಛೂಬಿಟ್ಟರು. ಪುಂಡ ಹುಡುಗರು ಆ ಪ್ರವಾದಿವರ್ಯರಿಗೆ ಕಲ್ಲುಗಳನ್ನು ಎಸೆಯುತ್ತಾ ಅಸಭ್ಯವಾಗಿ ಬಯ್ಯುತ್ತಾ ಬೆನ್ನಟ್ಟಿದರು. ಪೈಗಂಬರರ ದೇಹವೆಲ್ಲ ರಕ್ತಸಿಕ್ತವಾಯಿತು. ಆ ಸಂದರ್ಭದಲ್ಲಿ ದಿವ್ಯದೂತರು ಪ್ರವಾದಿಯ ಮುಂದೆ ಪ್ರತ್ಯಕ್ಷರಾಗಿ, "ತಾವು ಬಯಸುವುದಾದರೆ ಎರಡೂ ಬದಿಗಳಲ್ಲಿರುವ ಪರ್ವತಗಳ ಮಧ್ಯೆ ತಾಯಿಫ್ ಪಟ್ಟಣವನ್ನು ಸಿಲುಕಿಸಿ ಜನರನ್ನು ನಾಶಮಾಡಲಿಕ್ಕೋಸ್ಕರ ಅಲ್ಲಾಹನು ನಮ್ಮನ್ನು ನಿಯುಕ್ತಗೊಳಿಸಿದ್ದಾನೆ" ಎಂದು ಹೇಳಿದರು. ಆದರೆ ಪೈಗಂಬರರ ಮನಸ್ಸು ತಾಯಿಫ್ ಜನತೆಗಾಗಿ ದುಃಖದಿಂದ ತುಡಿಯುತ್ತಿತ್ತು. ನೋವು ತುಂಬಿದ ಹೃದಯದಿಂದ ಪೈಗಂಬರರು ಅಲ್ಲಾಹನೊಡನೆ ಪ್ರಾರ್ಥಿಸಿದರು : "ನನ್ನ ಪ್ರಭೂ, ನಾನು ಹೇಳುವುದು ಸತ್ಯವೆಂದು ಈ ಜನರು ತಿಳಿಯುವುದಿಲ್ಲ. ತಾವು ಮಾಡುವುದು ಸರಿಯೆಂದು ಅವರು ಭಾವಿಸುತ್ತಾರೆ. ಆದ್ದರಿಂದ ನೀನು ಅವರ ಮೇಲೆ ಕ್ರೋಧಿಸಬೇಡ. ಅವರ ಮೇಲೆ ನೀನು ಶಿಕ್ಷೆ ಇಳಿಸಬೇಡ. ಸತ್ಯವನ್ನು ಕಾಣುವಂತಾಗಲು ಅವರ ಕಣ್ಣುಗಳನ್ನು ನೀನು ತೆರೆ. ಸತ್ಯವನ್ನು ಸ್ವೀಕರಿಸಲು ಅವರಿಗೆ ನೀನು ಭಾಗ್ಯವನ್ನು ನೀಡು."

13 ವರ್ಷಗಳ ಕಾಲ ಮಕ್ಕದಲ್ಲಿ ಮುಹಮ್ಮದ್ ಪೈಗಂಬರ್ (ಸ.)ರನ್ನೂ ಅವರ ಅನುಯಾಯಿಗಳನ್ನೂ ಶತ್ರುಗಳು ಹಲವಿಧ ದೌರ್ಜನ್ಯಗಳಿಗೆ ಗುರಿಪಡಿಸಿದ್ದರು. ಕೆಲವರ ಕಾಲಿಗೆ ಹಗ್ಗವನ್ನು ಕಟ್ಟಿ ಎಳೆದೊಯ್ದರು. ಕೆಲವರನ್ನು ಉರಿಬಿಸಿಲಿನಲ್ಲಿ ಮರಳಿನ ಮೇಲೆ ಮಲಗಿಸಿ ಎದೆಯ ಮೇಲೆ ಭಾರವಾದ ಕಲ್ಲುಗಳನ್ನಿಟ್ಟು ಅವರು ಅನುಭವಿಸುವ ಬಾಧೆಯನ್ನು ಕಂಡು ಹರ್ಷಗೊಳ್ಳುತ್ತಿದ್ದರು. ಕೆಲವರನ್ನು ಹೊಗೆ ಹಾಕಿ ಉಸಿರುಕಟ್ಟುವಂತೆ ಮಾಡಿದರು. ಮುಸ್ಲಿಮರಿಗೆದುರಾಗಿ ಅವರು ನಡೆಸಿದ ದುಷ್ಕೃತ್ಯಗಳು ಎಲ್ಲ ಸೀಮೆಗಳನ್ನೂ ಮೀರಿದ್ದವು. ಅದರ ಕಠೋರತೆಯನ್ನು ನೆನಸುವಾಗಲೇ ಮೈನವಿರೇಳುತ್ತದೆ. ಅವರು ಒಡಸ್ತ್ರೀಯರನ್ನೂ ಮಕ್ಕಳನ್ನೂ ನಿಷ್ಕರುಣೆಯಿಂದ ಹತ್ಯೆಮಾಡಿದರು. ಕೆಲ ಸ್ತ್ರೀಯರ ಗುಹ್ಯಾಂಗದೊಳಗೆ ಈಟಿಯಿಂದ ತಿವಿದು ಅವರನ್ನು ಕೊಂದು ಹಾಕಿದರು. ಕೆಲ ಸ್ತ್ರೀಯರ ಎರಡು ಕಾಲುಗಳನ್ನು ಎರಡು ಒಂಟೆಗಳ ಕಾಲುಗಳಿಗೆ ಬಿಗಿಯಾಗಿ ಕಟ್ಟಿ ಅವುಗಳನ್ನು ಎದಿರು ಬದಿರು ದಿಕ್ಕುಗಳಿಗೆ ಓಡಿಸಿ ಅವರ ದೇಹವನ್ನು ಸಿಗಿದು ಹಾಕಿದರು. ಮೂರು ವರ್ಷಗಳ ಕಾಲ ಅವರು ಪೈಗಂಬರರನ್ನೂ ಅನುಯಾಯಿಗಳನ್ನೂ ಬಹಿಷ್ಕರಿಸಿ ಅನ್ನಾಹಾರ ಸಿಗದಂತೆ ಮಾಡಿದರು. ಆ ಬಹಿಷ್ಕಾರದ ಕಾರಣದಿಂದ ಪೈಗಂಬರರ ಚಿಕ್ಕಪ್ಪ ಅಬೂತಾಲಿಬ್ ಮತ್ತು ಪ್ರಿಯ ಪತ್ನಿ ಖದೀಜ ಮೃತರಾದರು. ಹೀಗೆ 13 ವರ್ಷ ಕಾಲ ಪೈಗಂಬರರಿಗೂ ಅನುಚರರಿಗೂ ಹಲವಿಧ ಕಷ್ಟಾನುಭವಗಳನ್ನು ಸಹಿಸಬೇಕಾಯಿತು.

ಅಲ್ಲಾಹನ ಅನುಗ್ರಹದಿಂದ, ಕೊನೆಗೆ ಪೈಗಂಬರರು ಶತ್ರುಗಳನ್ನು ಸೋಲಿಸಿ ಮಕ್ಕ ನಗರವನ್ನು ವಶಪಡಿಸಿದಾಗ,ಮಕ್ಕ ನಿವಾಸಿಗಳು ತಾವು ಪೈಗಂಬರರಿಗೂ ಅನುಯಾಯಿಗಳಿಗೂ ಮುಂಚೆ ಎಸಗಿದ್ದ ಕ್ರೂರ ಕೃತ್ಯಗಳನ್ನು ನೆನೆಸಿ ಭಯವಿಹ್ವಲರಾಗಿದ್ದರು. ಮಕ್ಕದ ಮುಸ್ಲಿಮರು ಅನುಭವಿಸಿದ ದೌರ್ಜನ್ಯಗಳನ್ನು ಪ್ರತ್ಯಕ್ಷದಲ್ಲಿ ಕಂಡಿಲ್ಲವಾದರೂ ಎಲ್ಲವನ್ನೂ ಕೇಳಿ ತಿಳಿದುಕೊಂಡಿದ್ದ ಮದೀನ ನಿವಾಸಿಗಳು ಕ್ಷುಭಿತರಾಗಿದ್ದರು. ಎಲ್ಲರೂ ಮುಹಮ್ಮದ್ ಪೈಗಂಬರ್(ಸ.)ರವರ ತೀರ್ಮಾನವನ್ನು ನಿರೀಕ್ಷಿಸುತ್ತಿದ್ದರು. ಆದರೆ ವಿಶಾಲ ಹೃದಯಿಯಾದ ಪೈಗಂಬರರು ಶತ್ರುಗಳ ದೌರ್ಜನ್ಯಗಳನ್ನೆಲ್ಲ ಮರೆತು ಮಕ್ಕ ನಿವಾಸಿಗಳೆಲ್ಲರಿಗೂ ಕ್ಷಮೆ ನೀಡಿದರು!

ಪೈಗಂಬರರು ಮಕ್ಕದವರೊಡನೆ ಹೀಗೆ ಹೇಳಿದರು : "ಎಲೈ ಮಕ್ಕ ನಿವಾಸಿಗಳೆ, ನೀವು ನನ್ನ ವಿರುದ್ಧವಾಗಿ ಮಾಡಿದ ಎಲ್ಲ ದುಷ್ಕೃತ್ಯಗಳಿಗೆ ನಾನು ಈ ದಿನ ನಿಮಗೆ ಕ್ಷಮೆ ನೀಡುತ್ತೇನೆ. ಆ ಕಾರಣದಿಂದ ನೀವು ಶಿಕ್ಷಿಸಲ್ಪಡಲಾರಿರಿ."

ಮಹತ್ತರವಾದ ಮಾನವ ಸ್ವಭಾವಗಳನ್ನು ತೋರಿಸಿ ಲೋಕ ಜನರಿಗೆಲ್ಲ ಉತ್ಕೃಷ್ಟ ಮಾದರಿ ಪುರುಷರಾದ ಆ ಪ್ರವಾದಿ ಶ್ರೇಷ್ಠರ ಮೇಲೆ ಅಲ್ಲಾಹನು ಕೋಟಿ ಕೋಟಿ ಆಶೀರ್ವಾದಗಳನ್ನು ವರ್ಷಿಸಲಿ.

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್**
**ವ ಅಲಾ ಆಲಿ ಮುಹಮ್ಮದ್.**

(ವಿವಿಧ ಮೂಲಗಳಿಂದ)

★

# ನೇರ ಮಾತು

ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್
(ಖಲೀಫತುಲ್ ಮಸೀಹ್ IV)

يَا أَيُّهَا الَّذِينَ آمَنُوا اتَّقُوا اللَّهَ وَقُولُوا قَوْلًا سَدِيدًا ○
يُصْلِحْ لَكُمْ أَعْمَالَكُمْ وَيَغْفِرْ لَكُمْ ذُنُوبَكُمْ وَمَنْ
يُطِعِ اللَّهَ وَرَسُولَهُ فَقَدْ فَازَ فَوْزًا عَظِيمًا ○

أَتَأْمُرُونَ النَّاسَ بِالْبِرِّ وَتَنْسَوْنَ أَنْفُسَكُمْ وَأَنْتُمْ
تَتْلُونَ الْكِتَابَ أَفَلَا تَعْقِلُونَ ○
وَاسْتَعِينُوا بِالصَّبْرِ وَالصَّلَاةِ وَإِنَّهَا لَكَبِيرَةٌ إِلَّا عَلَى
الْخَاشِعِينَ ○

-ಪವಿತ್ರ ಖುರ್‌ಆನ್
(33:71,72; 2:45, 46

ನಾನು ಓದಿದ ಸೂರತುಲ್ ಅಹ್‌ಝಾಬ್‌ನ ವಚನಗಳ ಅರ್ಥ ಹೀಗೆ : "ಓ ಸತ್ಯ ವಿಶ್ವಾಸಿಗಳೇ, ನೀವು ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ. ನೀವು ನೇರವಾದ ಮಾತನ್ನು ಹೇಳಿರಿ." ನೇರವಾದ ಮಾತಿನ ಕುರಿತು ನಾನು ಇದರ ಮೊದಲು ಹಲವು ಬಾರಿ ಪ್ರಸ್ತಾಪಿಸಿದ್ದೇನೆ. ನೇರವಾದ ಮಾತು ಸತ್ಯವಾದ ಮಾತಿಗಿಂತ ಹೆಚ್ಚು ಉನ್ನತ ಅಂತಸ್ತನ್ನು ಪಡೆದುದಾಗಿದೆ. ಸತ್ಯವಾದ ಮಾತು ಆಡುವಾಗ ಸಹ ಕೆಲವು ಸಾರಿ ತಪ್ಪು ಗ್ರಹಿಕೆಗಳು ಉಂಟಾಗುತ್ತವೆ. ಆದರೆ ನೇರವಾದ ಮಾತು ಆಡುವವನು ತಾನು ಹೇಳುವ ಮಾತು ಸತ್ಯವೂ ಆಗಿರಬೇಕು ಮತ್ತು ಅದರಿಂದ ತಪ್ಪು ಗ್ರಹಿಕೆಗಳು ಉಂಟಾಗಬಾರದು ಎಂಬುದರ ಬಗ್ಗೆ ಸಂಪೂರ್ಣವಾಗಿ ಪ್ರಯತ್ನ ಮಾಡುತ್ತಾ ಇರುತ್ತಾನೆ. ತಾನು ಹೃದಯದಲ್ಲಿ ಉದ್ದೇಶಿಸಿದ ಸಂಗತಿ ಸಂಪೂರ್ಣವಾಗಿ ಬಹಿರಂಗಗೊಳ್ಳಲಿ ಎಂದು ಅವನು ಬಯಸುತ್ತಾನೆ.

"ನೀವು ನೇರವಾದ ಮಾತು ಹೇಳಿದರೆ ಅಲ್ಲಾಹನು ನಿಮ್ಮ ನಡವಳಿಕೆಗಳನ್ನು ಸುಧಾರಣೆ ಮಾಡುವನು" ಎಂದು ಈ ವಚನದಲ್ಲಿ ಪ್ರಸ್ತಾಪಿಸಲಾಗಿದೆ. ನಿಮ್ಮ ನಡವಳಿಕೆಯ ಸುಧಾರಣೆ ನೇರವಾದ ಮಾತಿನೊಂದಿಗೆ ಗಾಢವಾದ ಸಂಬಂಧ ಹೊಂದಿದೆ. ನೀವು ನೇರವಾದ ಮಾತು ಆಡಿದರೆ ಅಲ್ಲಾಹನು ಅದಕ್ಕೆ ಪ್ರತಿಯಾಗಿ ನಿಮ್ಮ ನಡವಳಿಕೆಗಳನ್ನು ಸುಧಾರಣೆ ಮಾಡುವನು. ಅಲ್ಲದೆ ಅವನು ನಿಮ್ಮ ಪಾಪದೋಷಗಳನ್ನು ಎಂದರೆ ನೀವು ಈ ಮೊದಲು ಮಾಡಿದ ಪಾಪಗಳನ್ನು ಕ್ಷಮಿಸುವನು.

ಅಲ್ಲಾಹನು ಈ ವಚನದಲ್ಲಿ ಹೀಗೆಯೂ ಹೇಳಿರುವನು : "ಯಾರು ಅಲ್ಲಾಹನನ್ನು ಮತ್ತು ಅವನ ಪ್ರವಾದಿಯನ್ನು ಅನುಸರಿಸಿ ನಡೆಯುತ್ತಾನೋ ಅವನು ಬಹಳ ದೊಡ್ಡ ವಿಜಯವನ್ನು ಗಳಿಸಿರುವನು". ಅಂದರೆ ಅಂತಹ ವ್ಯಕ್ತಿ ತನ್ನ ಸತ್ಕಾರ್ಯಗಳಲ್ಲಿ ಅಭಿವೃದ್ಧಿ ಹೊಂದುತ್ತಾ ಮುಂದೆ ಸಾಗುವನು. ನೀವು ಹಾಗೆ ಮಾಡಿದರೆ ನೀವು ಬಹಳ ದೊಡ್ಡ ವಿಜಯವನ್ನು ಗಳಿಸಿದ ಸ್ಥಿತಿಯಲ್ಲಿ ಮೃತರಾಗುವಿರಿ.

ಈ ಬಗ್ಗೆ ಇರುವ ಒಂದು ಹದೀಸ್ ಹೀಗಿದೆ : ಹಝ್‌ರತ್ ಅಬ್ದುಲ್ಲಾಹ್ ಬಿನ್ ಆಮಿರ್ ರಝಿಯಲ್ಲಾಹು ಅನ್‌ಹು ಹೀಗೆ ವರದಿ ಮಾಡುತ್ತಾರೆ - ನಾನು ಚಿಕ್ಕ ಹುಡುಗನಾಗಿದ್ದಾಗ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಒಮ್ಮೆ ನಮ್ಮ ಮನೆಗೆ ಬಂದಿದ್ದರು. ನಾನು ಆಟವಾಡಲಿಕ್ಕಾಗಿ ಮನೆಯಿಂದ ಹೊರಡುವಾಗ ನನ್ನ ತಾಯಿ ನನ್ನೊಂದಿಗೆ ಹೀಗೆಂದರು - 'ನೀನು ಮನೆಗೆ ಬೇಗ ಬರಬೇಕು. ನಿನಗೆ ಒಂದು ವಸ್ತುವನ್ನು ಕೊಡುವೆನು.' ನಾನು ಆಟದಲ್ಲಿ ಹೆಚ್ಚು ಸಮಯ ಕಳೆಯದೆ ಬೇಗನೆ ಮನೆಗೆ ಬರಬೇಕೆಂದು ನನ್ನ ತಾಯಿ ಉದ್ದೇಶಿಸಿದ್ದರು. ಆಗ ಹಝ್‌ರತ್ ಪೈಗಂಬರರು ನನ್ನ ತಾಯಿಯೊಂದಿಗೆ ಕೇಳಿದರು - 'ನೀವು ಹುಡುಗನಿಗೆ ಏನನ್ನು ಕೊಡಲು ಬಯಸುತ್ತಿರುವಿರಿ?' ತಾಯಿ ಹೇಳಿದರು : 'ನಾನು ಖರ್ಜೂರ ಕೊಡಲು ಉದ್ದೇಶಿಸುತ್ತೇನೆ' ಆಗ ಹಝ್‌ರತ್ ಪೈಗಂಬರ್ ಹೇಳಿದರು : 'ನೀವು ಹಾಗೆ ಮಾಡದಿದ್ದರೆ ನಿಮ್ಮ ಮಾತು ಸುಳ್ಳು ಎಂದು ಎಣಿಸಲ್ಪಡುವುದು.' ಮುಸ್‌ನದ್ ಇಬ್ನು ಹಂಬಲ್ ಎಂಬ ಹದೀಸ್ ಗ್ರಂಥದಲ್ಲಿ ಈ ಹದೀಸ್ ಇದೆ.

ನೇರವಾದ ಮಾತು ಮೊತ್ತಮೊದಲು ಮನೆಗಳಿಂದ ಆರಂಭವಾಗಬೇಕು. ಕ್ರಮೇಣ ಮೆಲ್ಲಮೆಲ್ಲಗೆ ಬಿಗಡಾಯಿಸಿ ನಮ್ಮಿಂದ ದೂರ ಸರಿಯುವ ನಮ್ಮ ಮಕ್ಕಳು ಹಾಗೆ ಆಗಲು ಕಾರಣ ಬಾಲ್ಯದಲ್ಲಿ ಅವರೊಂದಿಗೆ ಅವರ ತಂದೆ ತಾಯಂದಿರು ನೇರವಾದ ಮಾತು ಆಡದೆ ಇದ್ದುದಾಗಿದೆ. ನಾನು ತಾಯಂದಿರಿಗೆ ಈ ಬಗ್ಗೆ ಅನೇಕ ಸಾರಿ ಉಪದೇಶಿಸಿದ್ದೇನೆ. ತಂದೆಯಂದಿರನ್ನು ಸಹ ನಾನು ಸಂಬೋಧಿಸುತ್ತೇನೆ. ಆದರೆ ತಾಯಂದಿರು ಈ ಬಗ್ಗೆ ಹೆಚ್ಚಿನ ಲಕ್ಷ್ಯ ನೀಡಬೇಕಾಗಿದೆ. ಮಕ್ಕಳೊಂದಿಗೆ ತಾಯಂದಿರ ಸಂಬಂಧ ಹೆಚ್ಚು ನಿಕಟವಾಗಿರುತ್ತದೆ. ಅವರು ತಮ್ಮ ಮಕ್ಕಳನ್ನು ಸಮಾಧಾನ ಪಡಿಸಲು ಯಾವುದಾದರೂ ವಾಗ್ದಾನ ಮಾಡುತ್ತಾರೆ. ಆದರೆ ಆ ವಾಗ್ದಾನಗಳನ್ನು ಅವರು ಈಡೇರಿಸದೆ ಇದ್ದರೆ ಅದು ಖೌಲೆ ಸದೀದ್ ಅಥವಾ ನೇರವಾದ ಮಾತು ಆಡಬೇಕೆಂಬ ಉಪದೇಶಕ್ಕೆ ವಿರುದ್ಧವಾಗುತ್ತದೆ. ನೀವು ನೇರವಾದ ಮಾತನ್ನು ಅವಲಂಬಿಸುವ ತನಕ ನಿಮ್ಮ ಸುಧಾರಣೆ ಆಗಲಾರದು. ಅಲ್ಲಾಹನು ಸುಧಾರಣೆಯ ವಾಗ್ದಾನವನ್ನು ಖೌಲೇ ಸದೀದ್ ಅಥವಾ

ನೇರವಾದ ಮಾತಿನ ಶರ್ತಿನೊಂದಿಗೆ ಜೋಡಿಸಿರುವನು. ಆದುದರಿಂದ ಎಲ್ಲಿ ನೇರವಾದ ಮಾತು ಇಲ್ಲವೋ ಅಲ್ಲಿ ನಡವಳಿಕೆಯ ಸುಧಾರಣೆ ಆಗಲಾರದು. ಇವುಗಳು ಪರಸ್ಪರ ಪೂರಕಗಳಾಗಿವೆ. ಒಂದಿಲ್ಲದಿದ್ದರೆ ಇನ್ನೊಂದು ಸಹ ಇರುವುದಿಲ್ಲ. ಈ ಸತ್ಯಾಂಶವನ್ನು ಬಹುತೇಕ ತಂದೆ ತಾಯಂದಿರು ತಮ್ಮ ಮಕ್ಕಳ ತರಬೇತಿಯ ಕಾಲದಲ್ಲಿ ಮರೆತು ಬಿಡುತ್ತಾರೆ. ನೀವು ಮಕ್ಕಳೊಂದಿಗೆ ಸ್ಪಷ್ಟವಾಗಿ ನೇರವಾಗಿ ಮಾತನಾಡಿರಿ. ಅದರ ಪರಿಣಾಮವಾಗಿ ಅವರು ನಿಮ್ಮನ್ನು ಹೆಚ್ಚು ಗೌರವದಿಂದ ಕಾಣುವರು. ಯಾರು ತನ್ನ ವಾಗ್ದಾನವನ್ನು ಪಾಲಿಸುತ್ತಾನೋ ಮತ್ತು ಸ್ಪಷ್ಟವಾಗಿ ಮಾತನಾಡುತ್ತಾನೋ ಅಂತಹ ವ್ಯಕ್ತಿಯ ಬಗ್ಗೆ ಜನರ ಹೃದಯಗಳಲ್ಲಿ ಗೌರವ ಉಂಟಾಗುತ್ತದೆ. ಇದೊಂದು ಸಹಜ ಪರಿಣಾಮವಾಗಿದೆ. ಇದನ್ನು ಕಡೆಗಣಿಸಲು ಸಾಧ್ಯವೇ ಇಲ್ಲ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಎಲ್ಲರಿಗಿಂತಲೂ ಹೆಚ್ಚು ಸ್ಪಷ್ಟವಾಗಿ ಮಾತನಾಡುವವರಾಗಿದ್ದರು. ಸ್ಪಷ್ಟವಾಗಿ ಮಾತನಾಡುವ ಕಾರಣದಿಂದ ಜನರು ದೂರ ಸರಿದು ಹೋಗುವುದಾದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರ ಸುತ್ತುಮುತ್ತು ಜನರು ಸೇರುತ್ತಿರಲಿಲ್ಲ. ಅವರಿಗೆ ಜನರ ಬಗ್ಗೆ ಕಾರುಣ್ಯ ಮತ್ತು ವಾತ್ಸಲ್ಯ ಇದ್ದುದು ಸಹ ಒಂದು ಬೇರೆ ಅಂಶವಾಗಿದೆ. ಅದು ಸಹ ಜನರನ್ನು ಅವರ ಬಳಿಗೆ ಸೆಳೆಯಿತು. ಆದರೆ ನೀವು ಸ್ಪಷ್ಟವಾದ ಮಾತನ್ನು ನಿರ್ಲಕ್ಷಿಸಬೇಡಿರಿ. ಸ್ಪಷ್ಟವಾದ ಮಾತು ಹೇಳುವುದರಿಂದ ಗೌರವ ಹೆಚ್ಚಾಗುತ್ತದೆ. ಯಾರು ಸ್ಪಷ್ಟವಾದ ಮಾತು ಹೇಳುತ್ತಾನೋ ಅವನ ಬಗ್ಗೆ ದ್ವೇಷ ಉಂಟಾಗಲಾರದು. ಅವನ ಬಗ್ಗೆ ಗೌರವ ಹೆಚ್ಚಾಗುವುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಸ್ಪಷ್ಟವಾದ ಮಾತುಗಳನ್ನು ಹೇಳುವುದರಲ್ಲಿ ಎಲ್ಲರಿಗಿಂತಲೂ ಮುಂದಾಗಿದ್ದರು. ಅವರನ್ನು ಎಲ್ಲರಿಗಿಂತಲೂ ಹೆಚ್ಚು ಹೆಚ್ಚಾಗಿ ಗೌರವಿಸಲಾಗುತ್ತಿದೆ. ಶತ್ರುಗಳು ಸಹ ಅವರ ಸ್ಪಷ್ಟವಾದ ಮಾತುಗಳಿಗೆ ಗಮನ ಕೊಡುತ್ತಿದ್ದರು. ಅಬೂಜಹಲನಿಗೆ ಸಂಬಂಧಿಸಿದ ಒಂದು ಘಟನೆಯ ಬಗ್ಗೆ ನಿಮಗೆ ತಿಳಿದಿದೆ. ಅಬೂಜಹಲನು ಒಬ್ಬ ಮನುಷ್ಯನಿಗೆ ಕೊಡಬೇಕಾದ ಹಣವನ್ನು ಕೊಡಬೇಕೆಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿದಾಗ ಅಬೂಜಹಲನಿಗೆ ಭಯವಾಯಿತು. ಅವನು ಶತ್ರುವಾಗಿದ್ದರೂ ಅವರ ಮಾತಿಗೆ ಬೆಲೆ ಕೊಟ್ಟನು. ಹಝ್ರತ್ ಪೈಗಂಬರರು ಹೇಳುವ ಮಾತು ಸತ್ಯದ ಮಾತೆಂದು ತಿಳಿದವನು ಅವರನ್ನು ದ್ವೇಷಿಸುವುದಕ್ಕೆ ಪ್ರತಿಯಾಗಿ ಅವರಿಗೆ ಗೌರವ ಕೊಡುತ್ತಿದ್ದನು.

ನೀವು ನಿಮ್ಮ ಮನೆಗಳಲ್ಲಿ ಈ ಪ್ರಯೋಗ ಮಾಡಿ ನೋಡಿರಿ. ನಿಮ್ಮ ಮಕ್ಕಳೊಂದಿಗೆ ಸತ್ಯವೂ ನೇರವೂ ಆಗಿರುವ ಮಾತುಗಳನ್ನು ಹೇಳಿರಿ. ನಿಮ್ಮ ಮಕ್ಕಳು ಅದರ ಫಲಸ್ವರೂಪವಾಗಿ ನಿಮ್ಮನ್ನು ಗೌರವಿಸುತ್ತಾ ಮುಂದೆ ಸಾಗುವರು. ನೀವು ಹೀಗೆ ಮಾಡದಿದ್ದರೆ ನಿಮ್ಮ ಮಕ್ಕಳು ನಿಮ್ಮನ್ನು ಕೈಬಿಟ್ಟು ಹೋಗುವರು. ಒಬ್ಬ ತಂದೆ ತನ್ನ ಮಕ್ಕಳೊಂದಿಗೆ ಮೋಸದ ಮಾತನ್ನು ಹೇಳುತ್ತಾ ಇದ್ದರೆ ಅಂತಹ ತಂದೆಯನ್ನು ಮಕ್ಕಳು ಗೌರವಿಸಿದುದಾಗಿ ನಾನು ಎಂದೂ ಕಂಡಿಲ್ಲ. ಅಂತಹ ಜನರ ಮಕ್ಕಳು ತಮ್ಮ ತಂದೆ ತಾಯಂದಿರ ಪ್ರಭಾವದ ವಲಯದಿಂದ ಹೊರಗೆ ಹೋಗುತ್ತಾರೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಮುನಾಫಿಖ್ ಅಥವಾ ಕಪಟ ವಿಶ್ವಾಸಿಯ ಮೂರು ಸ್ವಭಾವ ಗುಣಗಳನ್ನು ವಿವರಿಸಿದ್ದಾರೆ. ಮುನಾಫಿಖ್ ಅಥವಾ ಕಪಟ ವಿಶ್ವಾಸಿಯ ಒಂದು ಗುಣ ಏನೆಂದರೆ ಅವನು ವಾಗ್ದಾನ ಮಾಡಿದರೆ ಈಡೇರಿಸುವುದಿಲ್ಲ (ಬುಖಾರಿ). ಆದುದರಿಂದ ನೀವು ಮಕ್ಕಳೊಂದಿಗೆ ಯಾವುದಾದರೂ ವಾಗ್ದಾನ ಮಾಡಿದರೆ ನೀವು ಅದಕ್ಕೆ ವಿರುದ್ಧವಾಗಿ ವರ್ತಿಸಬೇಡಿರಿ. ಯಾರು ಮಕ್ಕಳಿಗೆ ಮಾಡಿದ ವಾಗ್ದಾನವನ್ನು ಈಡೇರಿಸುವುದಿಲ್ಲವೋ ಅವನು ಹೊರಗೆ ಸಹ ತನ್ನ ವಾಗ್ದಾನಗಳನ್ನು ಈಡೇರಿಸಲಾರನು. ತನಗೆ ಅತ್ಯಂತ ಪ್ರಿಯರಾದ ತನ್ನ ಮಕ್ಕಳಿಗೆ ಮಾಡಿದ ವಾಗ್ದಾನವನ್ನು ಈಡೇರಿಸದವನು ಹೊರಗಿನ ಜನರಿಗೆ ಮಾಡಿದ ವಾಗ್ದಾನಗಳನ್ನು ಈಡೇರಿಸುವನು ಎಂಬುದು ಅಸಾಧ್ಯವಾದ ಸಂಗತಿಯಾಗಿದೆ. ಅದು ಮನುಷ್ಯ ಪ್ರಕೃತಿಗೆ ವಿರುದ್ಧವಾದ ಸಂಗತಿಯಾಗಿದೆ. ಆದುದರಿಂದ ಯಾರೂ ಮುನಾಫಿಖಿನ (ಕಪಟ ವಿಶ್ವಾಸಿಯ) ಮಾರ್ಗವನ್ನು ಅವಲಂಬಿಸಲು ಮುಂದಾಗಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು (ಅಹ್ಮದಿಯಾ ಜಮಾಅತಿನ ಸ್ಥಾಪಕರು) ತನ್ನ ಮಕ್ಕಳೊಂದಿಗೆ ಹೇಗೆ ವರ್ತಿಸುತ್ತಿದ್ದರು ಎಂಬ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ. ಒಮ್ಮೆ ಮನೆಯೊಳಗೆ ಕಲ್ಲಿನ ತುಂಡುಗಳೊಂದಿಗೆ ಆಡುತ್ತಾ, ಬೊಬ್ಬೆ ಹೊಡೆಯುತ್ತಾ ಇದ್ದ ಒಂದು ಮಗುವನ್ನು ಕರೆದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು "ನೀನು ಹೊರಗೆ ಹೋಗಿ ಆಡು. ನಿನ್ನ ಆಟದ ಕಲ್ಲಿನ ತುಂಡುಗಳನ್ನು ನಾನು ಜೋಪಾನವಾಗಿ ಇಡುತ್ತೇನೆ" ಎಂದು ಹೇಳಿ ಆ ಕಲ್ಲಿನ ತುಂಡುಗಳನ್ನು ತನ್ನ ಕೋಟಿನ ಜೇಬಿನಲ್ಲಿ ತುಂಬಿದರು. ನೀನು ಮರಳಿ ಬರುವಾಗ ಅವುಗಳನ್ನು ಕೊಡುವೆನು ಎಂದು ಅವರು ಮಗುವಿನೊಂದಿಗೆ ಹೇಳಿದರು. ಆ ಮಗು ಮರಳಿ ಬಂದಾಗ ಒಂದು ತುಂಡು ಸಹ ನಷ್ಟವಾಗದ ರೀತಿಯಲ್ಲಿ ಆ ಕಲ್ಲಿನ ತುಂಡುಗಳನ್ನು ಮಗುವಿಗೆ ಕೊಟ್ಟರು. ಇದು ಬಾಹ್ಯವಾಗಿ ನೋಡಿದರೆ ಒಂದು ಚಿಕ್ಕ ಸಂಗತಿಯಾಗಿದೆ. ಆದರೆ ಚಿಕ್ಕಚಿಕ್ಕ ಸಂಗತಿಗಳಿಂದ ದೊಡ್ಡ ದೊಡ್ಡ ಕಾರ್ಯಗಳು ಜನ್ಮತಾಳುತ್ತವೆ. ತನ್ನ ಮಗುವಿಗೆ ಮಾಡಿದ ವಾಗ್ದಾನವನ್ನು ಈಡೇರಿಸಲು ಕಲ್ಲಿನ ತುಂಡುಗಳನ್ನು ಜೋಪಾನವಾಗಿ ತನ್ನ ಜೇಬಿನಲ್ಲಿ ಇಟ್ಟು ತಿರುಗುವ ವ್ಯಕ್ತಿ ಅನ್ಯ ಜನರ ಜೊತೆ ಎಷ್ಟು ನಿಷ್ಕಳಂಕವಾಗಿ ವರ್ತಿಸುವರೆಂಬುದನ್ನು ನೀವೇ ಅಂದಾಜು ಮಾಡಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಯ ಬಗ್ಗೆ ಅನೇಕ ಸಾಕ್ಷ್ಯಾಧಾರಗಳು ಇವೆ. ಆದರೆ ಬರೇ ಈ ಒಂದು ಸಾಕ್ಷ್ಯಾಧಾರ ಪ್ರಜ್ಞೆ ಇರುವವನಿಗೆ ಸಾಕಾಗಬಹುದು. ಯಾರು ತನ್ನ ವಾಗ್ದಾನಗಳ ಬಗ್ಗೆ ಇಷ್ಟು ನಿಷ್ಠೆ ಹೊಂದಿರುವರೋ ಅಂತಹ ಮಹಾನುಭಾವರು ಅಲ್ಲಾಹನಿಂದ ತನಗೆ ಲಭಿಸಿದ ಭವಿಷ್ಯವಾಣಿಗಳನ್ನು ವಿವರಿಸುವುದರಲ್ಲಿ ಮತ್ತು ಲೋಕದೊಂದಿಗೆ ವಾಗ್ದಾನ ಮಾಡುವುದರಲ್ಲಿ ಎಷ್ಟು ಸತ್ಯವಂತನಾಗಿರಬಹುದು ಎಂಬುದನ್ನು ನೀವು ಯೋಚಿಸಿರಿ. ನೀವು ಇಂತಹ ಸ್ವಭಾವ ಗುಣಗಳನ್ನು ಹೊಂದಿರಿ. ನೀವು ನಿಮ್ಮ ಮಕ್ಕಳನ್ನು ಸಮಾಧಾನಪಡಿಸಲು ಸುಳ್ಳು ವಾಗ್ದಾನ ಮಾಡಬೇಡಿರಿ.

ನನ್ನ ಮನೆಯಲ್ಲಿ ನಾನು ಈ ಬಗ್ಗೆ ಬಹಳ ನಿಗಾ ವಹಿಸಿದ್ದೆ. ಕೆಲವು ತಾಯಂದಿರು ಆಲೋಚಿಸದೆ ತಮ್ಮ ಮಕ್ಕಳಿಗೆ ವಾಗ್ದಾನ ಮಾಡುತ್ತಾರೆ. ನನ್ನ ದಿವಂಗತ ಪತ್ನಿ ಈ ರೀತಿ ಯಾವುದಾದರೂ ವಾಗ್ದಾನ

ತನ್ನ ಮಕ್ಕಳಿಗೆ ಮಾಡಿದಾಗಲೆಲ್ಲಾ ನಾನು ಆ ಬಗ್ಗೆ ತಿಳಿದರೆ ಆ ವಾಗ್ದಾನಗಳನ್ನು ಈಡೇರಿಸಲು ನಿಶ್ಚಯವಾಗಿಯೂ ಪ್ರಯತ್ನಿಸುತ್ತಾ ಇದ್ದೆನು.

ಯಾವುದಾದರೂ ಸತ್ಯದ ಮಾತು ಹೇಳಿದರೆ ಯಾರಿಗಾದರೂ ಅದು ಕಹಿ ಆಗಬಹುದಾಗಿದ್ದರೂ ಅದನ್ನು ಹೇಳಬೇಕು. ನಾನು ನನ್ನ ಜೀವಿತದಲ್ಲಿ ನನಗೆ ಈಡೇರಿಸಲು ಅಸಾಧ್ಯವಾದ ಯಾವ ವಾಗ್ದಾನವನ್ನೂ ನನ್ನ ಮಕ್ಕಳಿಗೆ ಮಾಡಿಲ್ಲ. ಆದುದರಿಂದ ನಾನು ಸಂತೋಷಪಡುತ್ತೇನೆ. ನನ್ನ ಮಕ್ಕಳನ್ನು ಸಹ ಇಂತಹ ಗುಣಸ್ವಭಾವ ಹೊಂದಿದವರನ್ನಾಗಿ ಅಲ್ಲಾಹನು ಮಾಡಲಿ ಎಂದು ನಾನು ಪ್ರಾರ್ಥಿಸುತ್ತೇನೆ. ನೀವು ಸಹ ನಿಮ್ಮ ಮಕ್ಕಳಿಗಾಗಿ ಹೀಗೆಯೇ ಪ್ರಾರ್ಥಿಸಿರಿ. ನಿಮ್ಮ ಮಕ್ಕಳ ಬಗ್ಗೆ ನಿಮಗೆ ಯಾವಾಗಲೂ ಸಹಾನುಭೂತಿ ಇರಬೇಕು. ಅದರ ಪರಿಣಾಮವಾಗಿ ನಿಮ್ಮ ಸಹಾನುಭೂತಿಯನ್ನು ಅಲ್ಲಾಹನು ನಿಷ್ಫಲಗೊಳಿಸಲಾರನು. ನಿಮ್ಮ ಪ್ರತೀಕ್ಷೆಗಿಂತಲೂ ಹೆಚ್ಚಿನ ಫಲವನ್ನು ಅಲ್ಲಾಹನು ನಿಮಗೆ ಕೊಡುವನು. ಆದುದರಿಂದ ನೀವು ನಿಮ್ಮ ಮನೆಗಳಲ್ಲಿ ಈ ಪ್ರಯೋಗ ಮಾಡಿ ನೋಡಿರಿ. ನಿಮಗೆ ನಿಮ್ಮ ಮಕ್ಕಳ ಬಗ್ಗೆ ಸ್ವಾಭಾವಿಕವಾಗಿಯೂ ಪ್ರೀತಿ ಇರುತ್ತದೆ. ಆದುದರಿಂದ ಅವರ ಬಗ್ಗೆ ಕಾಳಜಿ ವಹಿಸುವುದು ಸುಲಭವಾಗುತ್ತದೆ. ನೀವು ಮಕ್ಕಳನ್ನು 'ದೂರ ಸರಿಸಿದರೆ ಅವರು ನಿಮ್ಮಿಂದ ಎಂದೆಂದಿಗೂ ದೂರ ಸರಿದು ಹೋಗುವರು. ಅವರು ಸತ್ಕಾರ್ಯಗಳನ್ನು ಮಾಡುವುದನ್ನು ಕಾಣುವ ಭಾಗ್ಯ ನಿಮಗೆ ದೊರಕಲಾರದು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸ್ವಭಾವ ಗುಣಗಳ ಬಗ್ಗೆ ಅನೇಕರು ಬರೆದಿದ್ದಾರೆ. ಹಝ್‌ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬ್ ರಝಿಯಲ್ಲಾಹು ಅನ್‌ಹು ಬರೆದ ಒಂದು ಅನುಭವ ಹೀಗಿದೆ : ಒಮ್ಮೆ ಹಝ್‌ರತ್ ಮೌಲವಿ ಸಾಹೇಬರು ನಿದ್ರೆಯಿಂದ ಎದ್ದಾಗ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಮಲಗಿದ್ದ ಮಂಚದ ಕೆಳಗೆ ಕುಳಿತಿರುವುದನ್ನು ಕಂಡು ಗಾಬರಿಗೊಂಡರು. ಆಗ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆಂದರು : "ನೀವು ಗಾಬರಿಗೊಳ್ಳಬೇಡಿರಿ. ನಿಮ್ಮ ಸಮೀಪ ಬೊಬ್ಬೆ ಹೊಡೆಯುತ್ತಾ ಆಡುತ್ತಿದ್ದ ಮಕ್ಕಳನ್ನು ನಾನು ಹೊರಗೆ ಕಳುಹಿಸಿ, 'ನೀವು ಬೊಬ್ಬೆ ಹೊಡೆದು ನಿದ್ರೆಯನ್ನು ಹಾಳುಮಾಡಬೇಡಿರಿ. ನಾನು ಇಲ್ಲಿದ್ದೇನೆ' ಎಂದು ಹೇಳಿದ್ದೇನೆ. ನಾನು ಇಲ್ಲಿಂದ ಹೊರಟು ಹೋದರೆ ಹುಡುಗರಲ್ಲಿ ಯಾರಾದರೂ ಒಳಗೆ ಇಣುಕಿ ನೋಡಿದಾಗ ನಾನು ಇಲ್ಲಿ ಇಲ್ಲದುದನ್ನು ಕಂಡು ನಾನು ಅವರೊಂದಿಗೆ ಹೇಳಿದ ಹಾಗೆ ಮಾಡಿಲ್ಲ ಎಂಬ ಯೋಚನೆ ಅವರಲ್ಲಿ ಉದಿಸುವುದು. ಆದುದರಿಂದ ನಾನು ಹೇಳಿದ ಹಾಗೆಯೇ ನಡೆಯುವವನು ಎಂದು ಅವರಿಗೆ ತಿಳಿಯಲಿಕ್ಕಾಗಿ ನಾನು ಇಲ್ಲಿ ಕುಳಿತಿದ್ದೇನೆ".

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಾನು ಮಾಡಿದ ಎಲ್ಲ ವಾಗ್ದಾನಗಳನ್ನು ಬಹಳ ನಿಷ್ಠೆಯಿಂದ ಈಡೇರಿಸುವವರಾಗಿದ್ದರು. ಇಂತಹ ಮಹಾನುಭಾವರನ್ನು ಸುಳ್ಳುವಾದಿ ಎಂದು ಹೇಳುವುದು ಹೇಳುವವರ ದೌರ್ಭಾಗ್ಯವಾಗಿದೆ. ಪ್ರಜ್ಞೆಯುಳ್ಳ ಮನುಷ್ಯನು ಇನ್ನೊಬ್ಬ ಮನುಷ್ಯನ ಸತ್ಯಸಂಧತೆ ಬಗ್ಗೆ ಗಾಢವಾಗಿ ಅಧ್ಯಯನ ಮಾಡಲು ಇಚ್ಛಿಸುವುದಾದರೆ ಆ ವ್ಯಕ್ತಿಗೆ ಸಂಬಂಧಿಸಿದ ದೊಡ್ಡ ದೊಡ್ಡ ವಿಷಯಗಳಿಗೆ ಬದಲಾಗಿ ದೈನಂದಿನ ಚಿಕ್ಕಚಿಕ್ಕ ವ್ಯವಹಾರಗಳಲ್ಲಿ ಆ ವ್ಯಕ್ತಿಯ ನಡವಳಿಕೆ ಹೇಗಿತ್ತು ಎಂಬುದನ್ನು ಪರಿಶೀಲಿಸುವುದು ಆವಶ್ಯಕವಾಗಿದೆ. ದೊಡ್ಡ ವಿಷಯಗಳಿಗೆ ಸಂಬಂಧಿಸಿ ದೊಡ್ಡ ವಾದಗಳಿಗೆ ಸಂಬಂಧಿಸಿ ದೊಡ್ಡ ದೊಡ್ಡ ಸುಳ್ಳು ಹೇಳಲಾಗುತ್ತದೆ. ಈ ಸುಳ್ಳುಗಳ ಮೂಲಕ ಲೋಕದಲ್ಲಿ ತಾನು ಗೌರವ ಗಳಿಸುವೆನು ಎಂದು ಮನುಷ್ಯನು ಭಾವಿಸುತ್ತಾನೆ. ಆದರೆ ಚಿಕ್ಕಚಿಕ್ಕ ವ್ಯವಹಾರಗಳಲ್ಲಿ ಮನೆಯಲ್ಲಿ ದೈನಂದಿನ ಜೀವಿತದಲ್ಲಿ ಚಿಕ್ಕ ಚಿಕ್ಕ ವಿಷಯಗಳಲ್ಲಿ ಸುಳ್ಳು ಹೇಳದೆ ಇರುವುದು ಬಹಳ ದೊಡ್ಡ ಪರೀಕ್ಷೆಯಾಗಿದೆ.

ನೀವು ನಿಮ್ಮ ಮನೆಗಳಲ್ಲಿ ಎದುರಿಸಬೇಕಾದ ಪರೀಕ್ಷೆಗಳಲ್ಲಿ ವಿಜಯಿಗಳಾದರೆ ಅಲ್ಲಾಹನು ನಿಮ್ಮನ್ನು ಪರಿಶುದ್ಧ ವ್ಯಕ್ತಿಯನ್ನಾಗಿ ಲೋಕದ ಮುಂದೆ ಪ್ರಕಟಿಸುವನು. ನಿಮ್ಮ ದೊಡ್ಡ ದೊಡ್ಡ ಪ್ರತೀಕ್ಷೆಗಳೂ ಅಲ್ಲಾಹನಿಂದ ಈಡೇರಿಸಲ್ಪಡುವುವು. ಆದರೆ ನಿಮ್ಮ ಪ್ರಕೃತಿಯಲ್ಲಿ ಎರಡು ಬಣ್ಣಗಳು ಇರಬಾರದು. ಇಬ್ಬಗೆಯ ಪ್ರಕೃತಿ ಮನುಷ್ಯನನ್ನು ನಾಶ ಮಾಡುತ್ತದೆ.

ನಾನು ಓದಿದ ಸೂರತುಲ್ ಬಖರದ ವಚನದಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ : **"ನೀವು ಜನರಿಗೆ ಒಳಿತಿನ ಬಗ್ಗೆ ಉಪದೇಶ ನೀಡುತ್ತಿರುವಿರೇನು ಮತ್ತು ನಿಮ್ಮನ್ನು ನೀವು ಸ್ವತಃ ಮರೆತುಬಿಡುತ್ತೀರೇನು?"**

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಬಗ್ಗೆ ಹೀಗೆ ಹೇಳುತ್ತಾರೆ : "ಮನುಷ್ಯನ ಮಾತು ಮತ್ತು ಕೃತ್ಯಗಳಲ್ಲಿ ಪರಸ್ಪರ ಸಾಮರಸ್ಯ ಇರಬೇಕಾದುದು ಅತ್ಯಾವಶ್ಯಕವಾಗಿದೆ. ಅವುಗಳಲ್ಲಿ ಸಾಮರಸ್ಯ ಇಲ್ಲವಾದರೆ ಏನೂ ಪ್ರಯೋಜನವಿಲ್ಲ. ಪವಿತ್ರ ಖುರ್‌ಆನಿನ ವಚನ ಹೀಗೆ ಹೇಳಿದೆ : ಏನು ನೀವು ಜನರಿಗೆ ಒಳಿತಿನ ಬಗ್ಗೆ ಆಜ್ಞಾಪಿಸುತ್ತೀರೇನು ಮತ್ತು ನಿಮ್ಮನ್ನು ನೀವು ಮರೆತು ಬಿಡುತ್ತೀರೇನು?"

ಈ ವಚನ ಯಹೂದಿಗಳ ಬಗ್ಗೆ ಪ್ರಸ್ತಾಪಿಸಿರುವುದಾಗಿ ಹಝ್‌ರತ್ ಖಲೀಫ ತುಲ್‌ಮಸೀಹ್ ಸಾನೀ ರಝಿಯಲ್ಲಾಹು ಅನ್‌ಹು ಬರೆದಿದ್ದಾರೆ. ಆದರೆ ಈ ವಚನ ನಮಗೂ ಅನ್ವಯಿಸುತ್ತದೆ. ಈ ವಚನದ ಅರ್ಥ ಹೀಗೆ : ನಿಮ್ಮನ್ನು ಜನರ ಸುಧಾರಣೆಗಾಗಿ ಅವರನ್ನು ಕೆಟ್ಟ ಕೆಲಸಗಳಿಂದ ತಡೆಯುವುದಕ್ಕಾಗಿ ನೇಮಿಸಲಾಗಿದೆ. ಹೀಗಿರುವಾಗ ನೀವು ಹೇಗೆ ತಾನೆ ನಿಮ್ಮನ್ನು ಮರೆತುಬಿಡುವಿರಿ. ನೀವು ಖಂಡಿತವಾಗಿಯೂ ಮರೆತು ಬಿಡಲಾರಿರಿ ಎಂದು ಇಲ್ಲಿ ಸೂಚಿಸಲಾಗಿದೆ. ನೀವು ಪವಿತ್ರ ಖುರ್‌ಆನ್ ಪಾರಾಯಣ ಮಾಡುವವರಾಗಿರುವಿರಿ. ನೀವು ನಿಮ್ಮ ಕರ್ತವ್ಯದ ಬಗ್ಗೆ ಮರೆತುಬಿಡುವಿರೆಂದು ನಾವು ಪ್ರತೀಕ್ಷಿಸುವುದೇ ಇಲ್ಲ. ನೀವು ಬುದ್ಧಿಯನ್ನು ಉಪಯೋಗಿಸಿರಿ. ನೀವು ನಿಮ್ಮನ್ನು ಮರೆತು ಬಿಡಲು ಸಾಧ್ಯವೇ ಇಲ್ಲ ಎಂದು ಇಲ್ಲಿ ಸೂಚಿಸಲಾಗಿದೆ.

ನಿಮಗೆ ಅಲ್ಲಾಹನು ವಹಿಸಿಕೊಟ್ಟ ಕೆಲಸ - ಮನುಷ್ಯರ ಸುಧಾರಣೆ ಮತ್ತು ಅವರಿಗೆ ಒಳ್ಳೆಯ ಕೆಲಸಗಳ ಬಗ್ಗೆ ಆಜ್ಞೆ ನೀಡುವುದು. ನಿಮ್ಮನ್ನು ಒಳ್ಳೆಯ ಕೆಲಸಗಳಲ್ಲಿ ನೆಲೆ ನಿಲ್ಲಿಸುವುದು ಅಲ್ಲಾಹುವಿನ ಅನುಗ್ರಹದ ಹೊರತು ಸಾಧ್ಯವಾಗಲಾರದು. ಆದುದರಿಂದ ಅಲ್ಲಾಹನು ಹೀಗೆ ಹೇಳಿದ್ದಾನೆ:

"ವಸ್ತಈನೂ ಬಿಸ್ಸಬ್ರಿ ವಸ್ಸಲಾತ್" ನೀವು ಅಲ್ಲಾಹನಿಂದ ಸಹಾಯವನ್ನು ಸಹನೆ ಮತ್ತು ಸಲಾತ್ ಮೂಲಕ ಯಾಚಿಸಿರಿ. ಇಲ್ಲಿ ಸಲಾತ್ ಎಂದು ಹೇಳಿದುದು ಬರೇ ನಮಾಝ್ ಬಗ್ಗೆ ಅಲ್ಲ. ಇಲ್ಲಿ ಸಲಾತ್ ಎಂದು ಹೇಳಿದುದರಲ್ಲಿ ನಾವು ದಿನಂಪ್ರತಿ ಮಾಡುವ ನಮಾಝ್ ಮತ್ತು ಇತರ ಸಮಯಗಳಲ್ಲಿ ಮಾಡುವ ದುಆ ಪ್ರಾರ್ಥನೆಗಳು ಸೇರಿವೆ.

ನೀವು ನಮಾಝ್‌ಗಳಲ್ಲಿ ಸಹ ದುಆ ಮಾಡಬೇಕು. ನೀವು ನಡೆದಾಡುತ್ತಿರುವಾಗಲೂ ಇತರ ವ್ಯವಹಾರಗಳ ಮಧ್ಯೆ ಸಹ ದುಆ ಮಾಡುತ್ತಾ ಇರಬೇಕು. ಅಲ್ಲಾಹನ ಸಹಾಯ ಯಾಚಿಸುತ್ತಾ ಇರಬೇಕು.

ಅಲ್ಲಾಹನು ಹೀಗೆ ಹೇಳುತ್ತಾನೆ : "ವ ಇನ್ನಹಾ ಲಕಬೀರತುನ್ ಇಲ್ಲಾ ಅಲಲ್ ಖಾಶಿಈನ್" (ವಿನಯಶೀಲರಲ್ಲದವರಿಗೆ ಅದು ಖಂಡಿತವಾಗಿಯೂ ಭಾರವಾಗುವುದು) ಆದರೆ ಅಲ್ಲಾಹನನ್ನು ಭಯಪಡುವವರಿಗೆ ಹಾಗೆ ಆಗಲಾರದು. ಅತ್ಯಂತ ವಿನಮ್ರರಾಗಿ ಇರುವವರಿಗೆ ಇದು ಭಾರದ ಕೆಲಸವಾಗಲಾರದು. ಅವರಿಗೆ ಈ ಕೆಲಸ ಹಗುರವಾಗಿ ಇರುವುದು.

"ನೀವು ಜನರಿಗೆ ಉಪದೇಶಿಸುತ್ತಿರುವಿರಿ. ಆದರೆ ನಿಮ್ಮನ್ನು ಮರೆತುಬಿಡುತ್ತೀರೇನು?" ಎಂಬ ವಚನದ ಇನ್ನೊಂದು ಅರ್ಥ ನೀವು ನಿಮ್ಮ ಕುಟುಂಬದವರನ್ನು ಮರೆತು ಬಿಡುತ್ತೀರೇನು ಎಂದು ಸಹ ಇದೆ. ನೀವು ನಿಮ್ಮ ಮನೆಯವರನ್ನೂ ನಿಮ್ಮ ಅಧೀನಕ್ಕೆ ಸೇರಿದ ನಿಮ್ಮ ಮಕ್ಕಳನ್ನೂ ಸುಧಾರಣೆ ಮಾಡದಿದ್ದರೆ ನೀವು ಯಾವ ಮುಖದಿಂದ ಹೊರಗಿನ ಜನರನ್ನು ಸುಧಾರಣೆ ಮಾಡಲು ಹೋಗುವಿರಿ ಎಂದು ಇಲ್ಲಿ ಸೂಚಿಸಲಾಗಿದೆ. ನೀವು ಈ ಬಗ್ಗೆ ಬಹಳ ಲಕ್ಷ್ಯ ಕೊಡುವುದು ಅವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೀಡಿದ ಇನ್ನೊಂದು ಅರ್ಥ ಹೀಗೆ : "ನೀವು ನಿಮ್ಮ ಬಗ್ಗೆ ಮರೆತುಬಿಟ್ಟು ಬೇರೆಯವರ ಕುಂದುಕೊರತೆಗಳನ್ನು ನೋಡುತ್ತಾ ಇರುವುದು ಸರಿಯಲ್ಲ."

ಈ ಅರ್ಥ ಬಹಳ ಚಲೋದಾಗಿದೆ. ಬೇರೆಯವರಿಗೆ ಒಳ್ಳೆಯ ಕೆಲಸಗಳ ಬಗ್ಗೆ ಉಪದೇಶ ಕೊಡಬೇಕೆಂಬುದು ಸ್ಪಷ್ಟವಾದ ಸಂಗತಿ ಆಗಿದೆ. ಆದರೆ ಅದರ ಪರಿಣಾಮವಾಗಿ ಬೇರೆಯವರ ನ್ಯೂನತೆಗಳನ್ನೂ ಐಬುಗಳನ್ನೂ ಹುಡುಕುತ್ತಾ ಇರುವುದು ಸರಿಯಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ : "ನೀವು ಬೇರೆಯವರ ದೋಷಗಳನ್ನು ಹುಡುಕುತ್ತಾ ಇರಬಾರದು. ನೀವು ನಿಮ್ಮ ತಪ್ಪುಗಳನ್ನು ನೋಡಿರಿ. ನೀವು ಹೇಳುವ ಹಾಗೆ ಮಾಡಿರಿ."

ನಾವು ನಮ್ಮ ತಪ್ಪುಗಳನ್ನು ಕಂಡುಕೊಳ್ಳದಿದ್ದರೆ ಒಳಿತಿನ ಬಗ್ಗೆ ನಾವು ನಮಗೆಯೇ ಹೇಗೆ ತಾನೇ ಆಜ್ಞಾಪಿಸಲು ಸಾಧ್ಯ? ನಾವು ನಮ್ಮ ತಪ್ಪುಗಳನ್ನು ಹುಡುಕುವುದು ಪವಿತ್ರ ಖುರ್‌ಆನಿನ ಉಪದೇಶದ ಒಂದು ಕಡ್ಡಾಯ ಭಾಗವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿರುವರು : "ಯಾರು ತಮ್ಮ ಸ್ವಂತ ಕೆಡುಕುಗಳ ಬಗ್ಗೆ ಹುಡುಕಲು ಪ್ರಾರಂಭಿಸುತ್ತಾನೋ ಅವನು ಬೇರೆಯವರ ಕೆಡುಕುಗಳ ಹುಡುಕಾಟದಿಂದ ಹಿಂದೆ ಸರಿಯುತ್ತಾನೆ." ಈ ಬಗ್ಗೆ ಕೊನೆಯ ಮೊಗಲ್ ಚಕ್ರವರ್ತಿ ಬಹಾದುರ್ ಶಾ ಝಫರ್ ಹೇಳಿದ ಒಂದು ಪದ್ಯ ಮನುಷ್ಯ ಪ್ರಕೃತಿಯನ್ನು ಚಲೋದಾಗಿ ಚಿತ್ರಿಸುತ್ತದೆ.

ನ ಥಿ ಹಾಲ್ ಕಿ ಜಬ್ ಹಮೇಂ ಅಪ್ನೇ ಖಬರ್
ರಹೇ ದೇಖ್ತೇ ಅವ್‌ರೋಂ ಕೆ ಐಬೋ ಹುನರ್
ಪಡೀ ಅಪ್ನೀ ಬುರಾಯಿಯೋಂ ಪರ್ ಜೋ ನಝರ್
ತೋ ನಿಗಾಹ್ ಮೇಂ ಕೋಯೀ ಬುರಾ ನಥಾ

"ನಮಗೆ ನಮ್ಮ ಬಗ್ಗೆಯೇ ತಿಳಿಯದೆ ಇದ್ದಾಗ ನಾವು ಬೇರೆಯವರ ಕುಂದುಕೊರತೆಗಳನ್ನು ನೋಡುತ್ತಾ ಇದ್ದೆವು. ಆದರೆ ನಮ್ಮ ಕೆಡುಕುಗಳ ಕಡೆಗೆ ನಮ್ಮ ದೃಷ್ಟಿಯನ್ನು ಹಾಯಿಸಿದಾಗ ನಮ್ಮ ದೃಷ್ಟಿಯಲ್ಲಿ ಯಾರೂ ಕೆಟ್ಟವರಾಗಿ ಕಾಣಲಿಲ್ಲ."

ಬಹಾದುರ್ ಶಾ ಝಫರ್ ಹೇಳಿದ ಮಾತು ಮನುಷ್ಯನ ಪ್ರಕೃತಿಯ ಬಗ್ಗೆ ನುಡಿದ ಸತ್ಯವಾಗಿದೆ. ತನ್ನ ಕೆಡುಕುಗಳ ಕಡೆಗೆ ದೃಷ್ಟಿ ಹಾಯಿಸಿದಾಗ ಅಲ್ಲಿ ಕಂಡ ತನ್ನ ಕೊಳಕು ಎಷ್ಟು ಇತ್ತೆಂದರೆ ಬೇರೆಯವರ ತಪ್ಪುಗಳನ್ನು ಹುಡುಕಲು ಧೈರ್ಯವೇ ಇರಲಿಲ್ಲ ಎಂದು ಅವರು ಹೇಳುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ : "ನಿಷ್ಕಳಂಕತೆ ಮತ್ತು ಪ್ರೀತಿದೋರುತ್ತಾ ಉಪದೇಶಿಸುವುದು ಬಹಳ ಕಷ್ಟಕರವಾದ ಕೆಲಸವಾಗಿದೆ. ಕೆಲವು ಸಾರಿ ಉಪದೇಶ ಕೊಡುವುದರಲ್ಲಿಯೂ ಗುಪ್ತ ದ್ವೇಷ ಮತ್ತು ಅಹಂಕಾರ ಇರುತ್ತದೆ." ನೀವು ಉಪದೇಶಿಸುವಾಗ ನಿಮ್ಮಲ್ಲಿ ಅಹಂಕಾರ ಭಾವನೆ ಇಲ್ಲವಾದರೆ ನಿಮ್ಮ ಉಪದೇಶದಲ್ಲಿ ಯಾವುದೇ ದ್ವೇಷಭಾವನೆ ಇರಲಾರದು. ದ್ವೇಷವು ಇಲ್ಲವಾದರೆ ನೀವು ಸಹಾನುಭೂತಿಯ ಭಾವನೆಯನ್ನು ಹೊಂದಿಯೇ ಉಪದೇಶ ಮಾಡುವಿರಿ. ಅಲ್ಲಾಹನು ನಿಮ್ಮಿಂದ ಇದನ್ನೇ ಬಯಸುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಗುಪ್ತವಾಗಿರುವ ದ್ವೇಷ ಮತ್ತು ಅಹಂಕಾರದ ಬಗ್ಗೆ ಪ್ರಸ್ತಾಪಿಸಿದುದು ನಮ್ಮ ದೈನಂದಿನ ಅನುಭವದಿಂದ ತಿಳಿಯಬಹುದಾಗಿದೆ. ಮಕ್ಕಳೊಂದಿಗೆ ಕಠಿಣವಾಗಿ ಮಾತನಾಡುವವರು ಕಠಿಣ ಶಬ್ದಗಳನ್ನು ಪ್ರಯೋಗಿಸಿ ಮಕ್ಕಳನ್ನು ಗದರಿಸುತ್ತಾರೆ. ಅಂತಹ ಜನರು ತಮ್ಮ ಹೃದಯಗಳನ್ನು ಪರಿಶೋಧಿಸಿದರೆ ಅದರಲ್ಲಿ ಸಹ ಒಂದು ರೀತಿಯ ಅಹಂಕಾರ ಇರುವುದಾಗಿ ಕಾಣಬಹುದು. ತಮ್ಮ ಮಕ್ಕಳನ್ನು ನಿಶ್ಶಕ್ತವಾಗಿ ಕಾಣುವ ಅವರು ತಮಗೆ ತಮ್ಮ ಮಕ್ಕಳ ಮೇಲೆ ಜಯ ಲಭಿಸಿದೆ ಎಂದು ಭಾವಿಸುತ್ತಾರೆ. ಅವರ ಅಹಂಕಾರದ ಕಾರಣದಿಂದ ಅವರ ಉಪದೇಶದಲ್ಲಿ ಎಷ್ಟು ಕಹಿ ಬೆರೆತಿರುತ್ತಿದೆಯೆಂದರೆ ಅವರ ಉಪದೇಶ ನಿಷ್ಪ್ರಯೋಜಕ ವಾಗುತ್ತದೆ. ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶವನ್ನು ಸೂಕ್ಷ್ಮವಾಗಿ ಓದಿರಿ ಮತ್ತು ಸೂಕ್ಷ್ಮ ರೀತಿಯಲ್ಲಿ ಕೃತಿಗಿಳಿಸಲು ಕಲಿಯಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ : "ಯಾರು ಪ್ರೀತಿಯನ್ನು ಮಾತ್ರ ಹೊಂದಿ ಉಪದೇಶ

ನೀಡುತ್ತಾರೋ ಅವರನ್ನು ಅಲ್ಲಾಹನು, ನುಡಿದಂತೆ ನಡೆಯುವವರೆಂದು ಹೇಳುವುದಿಲ್ಲ. ಅತ್ಯಂತ ಸಜ್ಜನನು ಯಾರೆಂದರೆ ಅವನು ತನ್ನ ತಪ್ಪುಗಳನ್ನು ಮೊದಲು ನೋಡುತ್ತಾನೆ. ಅವನು ತನ್ನನ್ನು ಯಾವಾಗಲೂ ಪರೀಕ್ಷಿಸುತ್ತಾ ಇರುತ್ತಾನೆ ಮತ್ತು ಅವನಿಗೆ ಅವನ ತಪ್ಪುಗಳು ತಿಳಿಯುತ್ತವೆ."

ಯಾವಾಗಲೂ ಪರೀಕ್ಷಿಸುತ್ತಾ ಇರುವುದು ಬಹಳ ಕಷ್ಟದ ಕೆಲಸವಾಗಿದೆ. ಬೆಳಗ್ಗೆ ಮತ್ತು ಸಾಯಂಕಾಲ ಮನುಷ್ಯನು ತಾನು ಹೇಳುವುದನ್ನು ಮತ್ತು ಯೋಚಿಸುವುದನ್ನು ಪರೀಕ್ಷಿಸುತ್ತಾ ಇರುವುದು ಬಹಳ ತ್ರಾಸದಾಯಕವಾಗಿದೆ. ಈ ಬಗ್ಗೆಯೇ ಅಲ್ಲಾಹನು "ವಸ್ತಈನೂ ಬಿಸ್ಸಬ್‌ರಿ ವಸ್ಸಲಾತ್" ಎಂದು ಹೇಳಿರುವುದು. ನೀವು ಸಹನೆ ಮತ್ತು ನಮಾಝ್ ಮೂಲಕ ಹಾಗೂ ಇತರ ಪ್ರಾರ್ಥನೆಗಳ ಮೂಲಕ ಅಲ್ಲಾಹನ ಸಹಾಯವನ್ನು ಯಾಚಿಸದಿದ್ದರೆ ಈ ಕೆಲಸ ಬಹಳ ಕಷ್ಟದ್ದಾಗಿದೆ. ಇದರ ಕಡೆಗೆಯೇ ಅಲ್ಲಾಹನು ಕರೆಯುತ್ತಿದ್ದಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ : "ಸುಧಾರಣೆಗೆ ಸಹನೆಯು ಆವಶ್ಯಕವಾಗಿದೆ. ಸ್ವಭಾವದ ಪರಿಶುದ್ಧತೆಗೆ ಮತ್ತು ಆತ್ಮಶುದ್ಧಿಗೆ ಪರಿಶುದ್ಧನಾದ ಒಬ್ಬ ತರಬೇತಿದಾರನ ಜೊತೆಗೆ ಸಹವಾಸ ಆವಶ್ಯಕವಾಗಿದೆ"

ಪವಿತ್ರ ಖುರ್‌ಆನ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಪರಿಶುದ್ಧನಾದ ಮತ್ತು ಇತರರನ್ನು ಪರಿಶುದ್ಧಗೊಳಿಸುವವನಾದ ತರಬೇತಿಗಾರ ಎಂದು ಹೇಳಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಈಗ ಜೀವಿಸಿಲ್ಲ. ಹೀಗಿರುವಾಗ ಅವರು ನಮ್ಮನ್ನು ಪರಿಶುದ್ಧರನ್ನಾಗಿ ಮಾಡುವುದು ಹೇಗೆ? ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಸಹವಾಸ ಪಡೆಯುವುದು ಹೇಗೆ? ಇದನ್ನು ಪಡೆಯುವ ಒಂದು ಮಾರ್ಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಉಪದೇಶಗಳನ್ನು ತಮ್ಮ ಜೀವಿತದಲ್ಲಿ ಅಳವಡಿಸಿ ಪರಿಶುದ್ಧರಾದ ಜನರು ನಿಮ್ಮನ್ನು ಪರಿಶುದ್ಧರನ್ನಾಗಿ ಮಾಡಬಲ್ಲರು ಎಂದು ಹೇಳಿದ್ದಾರೆ.

ನನ್ನ ಅಭಿಪ್ರಾಯ ಹೀಗಿದೆ : ನೀವು ಮಲಗಿರುವಾಗಲೂ ಎಚ್ಚರದಿಂದಿರುವಾಗಲೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಜೀವಿತ ಮಾದರಿಯನ್ನು ನೆನಪಿಸುವ ಮೂಲಕ ನೀವು ಹಝ್ರತ್ ಪೈಗಂಬರರ ಸಹವಾಸ ಗಳಿಸಬಲ್ಲಿರಿ. ನೀವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಗೆ ಸಲಾತ್ ಮತ್ತು ಸಲಾಮ್ ಹೇಳುವಾಗ ಮತ್ತು ಅವರು ಮಾಡಿದ ಉಪಕಾರಗಳನ್ನು ಸ್ಮರಿಸುವಾಗ ನೀವು ಅವರೊಂದಿಗೆ ಒಂದು ರೀತಿಯ ಸಹವಾಸ ಮಾಡುತ್ತೀರಿ. ನೀವು ಮಲಗಿರುವಾಗ ಕೆಟ್ಟ ಯೋಚನೆಗಳು ತಾನಾಗಿಯೇ ದೂರ ಹೋಗುವುವು. "ಇನ್ನಲ್ ಬಾತಿಲ ಕಾನ ಝಹೂಖಾ" ಎಂದು ಹೇಳಿದ ಹಾಗೆ ಕೆಟ್ಟ ಯೋಚನೆಗಳು ತಾನಾಗಿಯೇ ಓಡಿ ಹೋಗುವುವು. ನೀವು ಪ್ರಯತ್ನ ಪಡಬೇಕಾಗಿಲ್ಲ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ನಮಗೆ ಮಾಡಿದ ಉಪಕಾರಗಳನ್ನು ಎಣಿಸಲು ಸಾಧ್ಯವಿಲ್ಲ. ನಮ್ಮ ದೈನಂದಿನ ಜೀವಿತಕ್ಕೆ ಆವಶ್ಯಕವಾದ ಚಿಕ್ಕಚಿಕ್ಕ ಉಪದೇಶಗಳನ್ನು ಅವರು ನೀಡಿರುವರು. ಅವುಗಳನ್ನು ಅನುಸರಿಸಿ ನಡೆದರೆ ಮನುಷ್ಯನ ಜೀವಿತದಲ್ಲಿ ಆಮೂಲಾಗ್ರ ಪರಿವರ್ತನೆ ಉಂಟಾಗುವುದು. ಒಂದು ಉದಾಹರಣೆ ನಾನು ನೀಡಲು ಬಯಸುತ್ತೇನೆ. ಇಂದಿನ ಕಾಲದಲ್ಲಿ ಹಲವಾರು ಜನರು ಹಲ್ಲಿನ ರೋಗಗಳನ್ನು ಹೊಂದಿರುತ್ತಾರೆ. ಬಹಳ ನುರಿತ ಡಾಕ್ಟರ್‌ಗಳು ಸಹ ಈ ರೋಗಗಳ ಬಗ್ಗೆ ಪರಿಣಾಮಕಾರಿ ಚಿಕಿತ್ಸೆ ನಡೆಸಲಾರರು. ಹುಳುಕಾದ ಹಲ್ಲುಗಳು ಹುಳುಕಾಗಿಯೇ ಇರುವುವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ತಮ್ಮ ನಡವಳಿಕೆ ಪ್ರಕಾರ ಐದು ಹೊತ್ತಿನ ನಮಾಝ್‌ಗೆ ಮೊದಲು ಹಲ್ಲು ಉಜ್ಜಲು ಹೇಳಿರುತ್ತಾರೆ. ಯಾರಾದರೂ ದಿನಂಪ್ರತಿ ಐದು ಹೊತ್ತು ಹಲ್ಲುಜ್ಜಿದರೆ ಆಯುಷ್ಯದಾದ್ಯಂತ ಅಂತಹ ವ್ಯಕ್ತಿಯ ಹಲ್ಲು ಕೆಟ್ಟು ಹೋಗುವುದು ಸಾಧ್ಯವಿಲ್ಲ. ಆದರೆ ಹಲ್ಲಿನ ಕೆಲವು ರೋಗಗಳು ಆಂತರಿಕ ಕಾರಣಗಳಿಂದ ಸಹ ಉಂಟಾಗುತ್ತವೆ. ಅವು ಹಲ್ಲುಗಳನ್ನು ಉಜ್ಜುವ ಮೂಲಕ ಗುಣವಾಗಲಾರವು. ಒಳ್ಳೆಯ ಹಲ್ಲುಗಳನ್ನು ಹೊಂದಿದವರು ದಿನಂಪ್ರತಿ ಈ ರೀತಿ ಐದು ಸಾರಿ ಹಲ್ಲು ಉಜ್ಜಿದರೆ ಅವರ ಹಲ್ಲುಗಳು ಹಾಳಾಗಲಾರವು. ನನ್ನ ಭೇಟಿಗೆ ಬರುವ ಕೆಲವು ವಧೂವರರು ಮುತ್ತಿನಂತಹ ಹಲ್ಲು ಹೊಂದಿರುತ್ತಾರೆ. ಅವರಿಗೆ ನಾನು "ಅಲ್ಲಾಹನು ನಿಮಗೊಂದು ಅನುಗ್ರಹ ನೀಡಿದ್ದಾನೆ. ನೀವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಉಪದೇಶವನ್ನು ಪಾಲಿಸಿ ಈ ಅನುಗ್ರಹವನ್ನು ಕಾಪಾಡಬಹುದು" ಎಂದು ಹೇಳುತ್ತೇನೆ.

ಪ್ರಾಯ ಹೆಚ್ಚಾದಂತೆ ಹಲ್ಲುಗಳು ಉದುರಿ ಹೋಗುವುವು ಎಂಬ ಅಭಿಪ್ರಾಯ ತಪ್ಪಾಗಿದೆ. ನಿಮ್ಮ ಹಲ್ಲಿನ ಆರೋಗ್ಯ ನಿಮ್ಮ ವಸಡಿನ ಆರೋಗ್ಯವನ್ನು ಅವಲಂಬಿಸಿದೆ. ನೀವು ಐದು ಸಾರಿ ಹಲ್ಲುಜ್ಜಿದರೆ ನಿಮ್ಮ ವಸಡುಗಳನ್ನು ಮೃದುಗೊಳಿಸಲು ಬ್ಯಾಕ್ಟೀರಿಯಾಗಳಿಗೆ ಸಾಧ್ಯವಾಗಲಾರದು. ವಸಡುಗಳು ಆರೋಗ್ಯದಿಂದ ಇರುವವು.

ನಾನು ನಿಮ್ಮ ಮುಂದೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಉಪದೇಶಗಳಿಂದ ಒಂದು ಚಿಕ್ಕ ಉದಾಹರಣೆ ಮಾತ್ರ ನೀಡಿದ್ದೇನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ನಮಗೆ ನೀಡಿದ ಉಪದೇಶಗಳನ್ನು ನಮ್ಮ ದೈನಂದಿನ ಜೀವಿತದಲ್ಲಿ ಕೃತಿಗಿಳಿಸಿದರೆ ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಸಹವಾಸ ಗಳಿಸಿದಂತೆ ಆಗುವುದು. ನೀವು ನಿಮ್ಮ ಶರೀರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಿರಿ. ನೀವು ಎಲ್ಲಾ ವಿಧ ಕೆಟ್ಟ ಕೆಲಸಗಳಿಂದ ದೂರ ಓಡಿ ಹೋಗಿರಿ ಎಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಉಪದೇಶಿಸಿರುವರು. ಹಝ್ರತ್ ಪೈಗಂಬರರ ಪ್ರತಿಯೊಂದು ಉಪದೇಶ ಒಂದು ಅನುಗ್ರಹವಾಗಿದೆ. ಉಪದೇಶಗಳ ಪಾಲನೆ ನಮ್ಮ ಶರೀರದ ಸಮಗ್ರ ಆರೋಗ್ಯಕ್ಕೆ ಹಿತಕಾರಿಯಾಗಿದೆ. ನೀವು ತಿನ್ನುವ ಆಹಾರ ಧರ್ಮಬದ್ಧ ಅಥವಾ ಹಲಾಲ್ ಆಗಿರಬೇಕಲ್ಲದೆ ಶುದ್ಧವೂ ಆಗಿರ ಬೇಕೆಂದು ಉಪದೇಶಿಸಲಾಗಿದೆ. ನಾನು ಕೇವಲ ಕೆಲವು ಉದಾಹರಣೆಗಳನ್ನು ನೀಡುತ್ತಿದ್ದೇನೆ. ಅವುಗಳೆಲ್ಲವನ್ನೂ ಎಣಿಸಲು ಸಾಧ್ಯವಾಗಲಾರದು.

25ನೇ ಪುಟಕ್ಕೆ

# ಖಿಲಾಫತ್ ಒಂದು ಮಹಾನುಗ್ರಹ

ಮೌಲಾನಾ ಬಿ. ಅಬ್ದುಲ್ಲಾಹ್ ಎಚ್.ಎ.

*"ನಿಮ್ಮ ಪೈಕಿ ಸತ್ಯ ವಿಶ್ವಾಸಿಗಳಾಗಿದ್ದು ಸತ್ಕಾರ್ಯಗಳನ್ನು ಮಾಡುವವರಿಗೆ ಅಲ್ಲಾಹನು, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಪಟ್ಟಿರುವ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯ ಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರ ಯಾರಾದರೂ ನಿರಾಕರಿಸಿದರೆ ಅವರೇ ಅಧರ್ಮಿಗಳು." - ಪವಿತ್ರ ಖುರ್‌ಆನ್ (24:56)*

وَعَدَ اللّٰهُ الَّذِيْنَ اٰمَنُوْا مِنْكُمْ وَعَمِلُوا الصّٰلِحٰتِ
لَيَسْتَخْلِفَنَّهُمْ فِى الْاَرْضِ كَمَا اسْتَخْلَفَ الَّذِيْنَ مِنْ
قَبْلِهِمْ وَلَيُمَكِّنَنَّ لَهُمْ دِيْنَهُمُ الَّذِى ارْتَضٰى لَهُمْ
وَلَيُبَدِّلَنَّهُمْ مِّنْ بَعْدِ خَوْفِهِمْ اَمْنًا يَعْبُدُوْنَنِىْ
لَا يُشْرِكُوْنَ بِىْ شَيْـًٔا وَمَنْ كَفَرَ بَعْدَ ذٰلِكَ فَاُولٰٓئِكَ
هُمُ الْفٰسِقُوْنَ ۵۵

ಮೇಲಿನ ವಚನದಲ್ಲಿ, ಸತ್ಯ ವಿಶ್ವಾಸಿಗಳೂ ಸತ್ಕರ್ಮಿಗಳೂ ಆಗಿರುವ ಯಥಾರ್ಥ ಮುಸ್ಲಿಮರಿಗೆ ಅಲ್ಲಾಹನು ಖಿಲಾಫತ್ ಎಂಬ ಅನುಗ್ರಹೀತ ಸ್ಥಾನವನ್ನು ಏರ್ಪಡಿಸಿಕೊಡುವನೆಂದೂ ಆ ಮೂಲಕ ಅವರ ಭೀತಿಯನ್ನು ನಿವಾರಿಸಿ ಅವರಿಗೆ ಶಾಂತಿ - ಸಮಾಧಾನವನ್ನು ದಯಪಾಲಿಸುವನೆಂದೂ ಹೇಳಲಾಗಿದೆ. ಇದರಿಂದ, ಮುಸ್ಲಿಂ ಪಂಗಡಗಳ ಪೈಕಿ ಯಾವ ಪಂಗಡದಲ್ಲಿ ಖಿಲಾಫತ್ ವ್ಯವಸ್ಥೆ ಇದೆಯೋ ಆ ಪಂಗಡದವರು ಸತ್ಯ ವಿಶ್ವಾಸ ಹೊಂದಿದ ಸತ್ಕರ್ಮಿಗಳಾದ ಯಥಾರ್ಥ ಮುಸ್ಲಿಮರೆಂದು ತೀರ್ಮಾನಿಸಬೇಕಾಗಿದೆ. ಏಕೆಂದರೆ, ಖಿಲಾಫತ್ ಅಂಥವರಿಗೆ ನೀಡಲಾಗುವುದೆಂದು ಅಲ್ಲಾಹನು ವಾಗ್ದಾನ ಮಾಡಿದ್ದಾನೆ.

ಇಸ್ಲಾಮಿನಲ್ಲಿ ಖಿಲಾಫತ್ ಎಂದು ಹೇಳುವುದು ಮುಹಮ್ಮದ್ ಪೈಗಂಬರ್ (ಸ.)ರವರ ಪ್ರಾತಿನಿಧ್ಯ ವಹಿಸುವ ಸ್ಥಾನಕ್ಕಷ್ಟೇ. ಈ ಸ್ಥಾನ ಪೈಗಂಬರರ ನಂತರ ಅವರ ಶಿಷ್ಯರಲ್ಲಿ ಉಂಟಾಗುವುದೆಂದು ಕಲಿಸುವ ಒಂದೇ ಒಂದು ದೇವವಾಕ್ಯ ಮೇಲೆ ಉದ್ಧರಿಸಿದುದೇ ಆಗಿದೆ. ಅದರ ವಾಗ್ದಾನಕ್ಕನುಸಾರವಾಗಿ ಪೈಗಂಬರರ ನಿಧನದ ಬಳಿಕ ಅವರ ಶಿಷ್ಯರಲ್ಲಿ ಖಿಲಾಫತ್ ಉಂಟಾಯಿತು. ಅವರ ಯಥಾರ್ಥವಾದ ಸ್ಥಾನ ಅವರು ನಬಿ ಮತ್ತು ರಸೂಲ್ ಎಂಬುದಾಗಿದೆ. ಆದ್ದರಿಂದ, ಆ ಸತ್ಯಾತ್ಮರ ಯಥಾರ್ಥ ಪ್ರಾತಿನಿಧ್ಯವು ಆಧ್ಯಾತ್ಮಿಕ ಮತ್ತು ಧಾರ್ಮಿಕವಾದ ಪವಿತ್ರ ದೌತ್ಯಕ್ಕೆ ಸಂಬಂಧಿಸಿದುದಾಗಿದೆ. ಪೈಗಂಬರರ ಆಗಮನೋದ್ದೇಶ ಮನುಷ್ಯರನ್ನು ಸನ್ಮಾರ್ಗಿಗಳನ್ನಾಗಿ ಮಾಡಿ ಅವರನ್ನು ಅಲ್ಲಾಹನೆಡೆಗೆ ಕೊಂಡೊಯ್ಯುವುದಷ್ಟೇ. ಹಾಗಿರುವಾಗ ಪೈಗಂಬರರ ಯಥಾರ್ಥ ಖಲೀಫರುಗಳು ಆಧ್ಯಾತ್ಮಿಕತೆಯನ್ನು ಪೋಷಿಸುವ ಪ್ರತಿನಿಧಿಗಳಾಗಬೇಕಾಗಿದೆ. ಆದ್ದರಿಂದಲೇ,

عليكم بسنتى وسنة الخلفاء
الراشدين المهدين

"ನೀವು ನನ್ನ ನಡವಳಿಕೆ ಕ್ರಮವನ್ನು ಮತ್ತು ಸನ್ಮಾರ್ಗಿಗಳೂ ಮಾರ್ಗದರ್ಶನ ಲಭಿಸಿದವರೂ ಆದ ನನ್ನ ಖಲೀಫರ ನಡೆವಳಿಕೆ ಕ್ರಮವನ್ನು ಸ್ವೀಕರಿಸಿರಿ" ಎಂದು ಪೈಗಂಬರರು ನುಡಿದಿದ್ದಾರೆ. ಪೈಗಂಬರರ ಆಗಮನೋದ್ದೇಶ ರಾಜ್ಯಾಡಳಿತೆಯನ್ನು ಸ್ಥಾಪಿಸುವುದಲ್ಲವಾದರೂ ಅಲ್ಲಾಹನು ಪೈಗಂಬರರಿಗೆ ಪಾರಿತೋಷಕವಾಗಿ ಆಡಳಿತಾಧಿಕಾರವನ್ನೂ ನೀಡಿರುವುದರಿಂದ, ಆ ಬಳಿಕ ಕೇವಲ ರಾಷ್ಟ್ರೀಯ ಅಧಿಕಾರ ಹೊಂದಿದ ಮುಸ್ಲಿಂ ರಾಜರುಗಳು ಸಹ ಪೈಗಂಬರರ ಪ್ರತಿನಿಧಿಗಳೆಂಬಂತೆ ಖಲೀಫರೆಂದು ಕರೆಯಲ್ಪಟ್ಟರು. ಆದರೆ, ಪೈಗಂಬರರ ಸಾಕ್ಷಾತ್ ಪ್ರಾತಿನಿಧ್ಯ ರಾಜಕೀಯವಲ್ಲದಿದ್ದರೂ ರಾಜ್ಯಾಡಳಿತೆ ಸಹ ಅನಂತರ ಪೈಗಂಬರರಿಗೆ ಲಭಿಸಿದುದರಿಂದ, ಆದ್ಯದ ಖಲೀಫರುಗಳು ಆಧ್ಯಾತ್ಮಿಕವೂ ಭೌತಿಕವೂ ಆದ ಎರಡು ತರ ಖಿಲಾಫತ್ ಹೊಂದಿದವರಾಗಿದ್ದರು. ಅವರ ಬಳಿಕ ಬರೇ ಆಡಳಿತಾಧಿಕಾರಿಗಳಾದ ರಾಜರುಗಳು ಭೌತಿಕ ನೆಲೆಯಲ್ಲಿ ಮಾತ್ರ ಖಲೀಫರೂ ಇಸ್ಲಾಮಿನಲ್ಲಿ ಆವಿರ್ಭವಿಸುತ್ತಿದ್ದ ಮುಜದ್ದಿದ್‌ಗಳು ಆಧ್ಯಾತ್ಮಿಕ ಪ್ರಾತಿನಿಧ್ಯ ದಿಂದೊಡಗೂಡಿದ ಸಾಕ್ಷಾತ್ ಖಲೀಫರೂ ಆಗಿದ್ದರು. ಸಂಕ್ಷಿಪ್ತವಾಗಿ, ಪೈಗಂಬರರ ಪ್ರಾತಿನಿಧ್ಯ ವಹಿಸಿಕೊಂಡು ಪೈಗಂಬರರ ದೌತ್ಯೋದ್ದೇಶವನ್ನು ಈಡೇರಿಸುವ ಖಲೀಫರುಗಳು ಇಸ್ಲಾಮಿನಲ್ಲಿ ಆಗಮಿಸುತ್ತಲಿರುವರೆಂದು ಮೇಲೆ ಉದ್ಧರಿಸಿದ ಖುರ್‌ಆನ್

ವಚನದಲ್ಲಿ ಹೇಳಲಾಗಿದೆ. ಆದ್ದರಿಂದ ಆ ಯಥಾರ್ಥ ಖಲೀಫರುಗಳಿಗೆ ರಾಜ್ಯಾಡಳಿತೆ ಇರಲೇ ಬೇಕೆಂದಿಲ್ಲ. ಅಂತಹ ಖಲೀಫರುಗಳು ಸತ್ಯ ವಿಶ್ವಾಸಿಗಳೂ ಸತ್ಕರ್ಮಿಗಳೂ ಆಗಿರುವ ಯಥಾರ್ಥ ಮುಸ್ಲಿಮರಲ್ಲಿ ಉಂಟಾಗುತ್ತಲಿರುವರೆಂದು ಈ ಖುರ್ಆನ್ ವಚನದಿಂದ ವ್ಯಕ್ತವಾಗುತ್ತದೆ.

ಇಂದು ಖಿಲಾಫತ್ ಅಹ್ಮದಿಯಾ ಜಮಾಅತಿನಲ್ಲಿ ಮಾತ್ರ ಇದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಇತರ ಮುಸ್ಲಿಂ ಪಂಗಡಗಳಲ್ಲಿ ಯಾವುದರಲ್ಲೂ ಖಿಲಾಫತ್ ಎಂಬ ಈ ಅನುಗ್ರಹ ಇಲ್ಲವೆಂದು ಅವರೇ ಒಪ್ಪುತ್ತಾರೆ. ಅಲ್ಪ ಕಾಲ ಮುಂಚಿನ ವರೆಗೆ ಹೆಸರಿಗೆ ಮಾತ್ರ ತುರ್ಕಿ ಸುಲ್ತಾನನನ್ನು ಅವರು ಖಲೀಫ ಎಂದು ಕರೆಯುತ್ತಿದ್ದರು. ಆದರೆ, ಆ ಖಿಲಾಫತ್, ಸುಲ್ತಾನನ ಆಡಳಿತೆಯ ಅಧೀನದಲ್ಲಿರುವ ತನ್ನ ಪ್ರಜೆಗಳ ಮೇಲಿರುವ ರಾಜಕೀಯ ಅಧಿಕಾರ ಮಾತ್ರವಾಗಿತ್ತು ಹೊರತು, ಮುಸ್ಲಿಮರ ಪೈಕಿ ಯಾವುದೇ ಪಂಗಡ ಆತನ ಆಜ್ಞಾನುಸಾರ ನಡೆಯಬೇಕಾದುದು ತಮ್ಮ ಕರ್ತವ್ಯವೆಂದು ಭಾವಿಸಿರಲಿಲ್ಲ. ಇಂದಾದರೆ, ಆ ನಾಮ ಮಾತ್ರ ಖಿಲಾಫತ್ ಕೂಡ ಭೂಮಿಯಿಂದ ಅಳಿಸಲ್ಪಟ್ಟಿದೆ. ಅದನ್ನು ಆ ಸುಲ್ತಾನನ ಸ್ವಂತ ಜನರಾದ ತುರ್ಕಿಗಳೇ ಕಿತ್ತೆಸೆದರು. ಹಾಗೆ ಅಹ್ಮದಿಯರಲ್ಲದ ಬೇರೆ ಮುಸ್ಲಿಂ ಪಂಗಡಗಳಲ್ಲಿ ಯಾವುದರಲ್ಲೂ ಖಿಲಾಫತ್ ಎಂಬ ದೇವಾನುಗ್ರಹ ನೆಲೆಯಲ್ಲಿಲ್ಲ. ಅಹ್ಮದಿಯರಿಗೆ, ಅವರ ಅನುಸರಣೆಗೆ ಅರ್ಹರಾದ ಇಮಾಂ ಹಾಗೂ ಧಾರ್ಮಿಕವೂ ಆಧ್ಯಾತ್ಮಿಕವೂ ಆದ ವಿಚಾರಗಳಲ್ಲಿ ಅವರಿಗೆ ಮಾರ್ಗದರ್ಶನ ನೀಡುವ ಗುರುವೂ ಆದ ಖಲೀಫ ಇದ್ದಾರೆ. ಸತ್ಯ ವಿಶ್ವಾಸಿಗಳೂ ಸತ್ಕರ್ಮಿಗಳೂ ಆಗಿರುವವರಿಗೆ ನೀಡುವನೆಂದು ಅಲ್ಲಾಹನು ವಾಗ್ದಾನ ಮಾಡಿದ ಖಿಲಾಫತ್ ಹೀಗೆ ಅವರಲ್ಲಿ ನೆಲೆಗೊಂಡಿರುವುದೆಂಬುದು, ಅವರೇ ಯಥಾರ್ಥ ಮುಸ್ಲಿಂ ಪಂಗಡ ಎಂಬುದಕ್ಕೆ ತಕ್ಕುದಾದ ಒಂದು ಪುರಾವೆಯಾಗಿದೆ.

### ಖಿಲಾಫತಿನ ರೂಪಭೇದಗಳು

ತನ್ನ ಬಳಿಕ ಮೊದಲು ನುಬುವ್ವತಿನ ರೀತಿಯಲ್ಲಿರುವ ಖಿಲಾಫತ್ ಸ್ಥಾಪಿತವಾಗುವಂತೆ, ನಂತರದ ಕಾಲದಲ್ಲಿ ಸಹ ಅದೇ ರೀತಿಯಲ್ಲಿರುವ ಖಿಲಾಫತ್ ಉಂಟಾಗುವುದೆಂದು ಪೈಗಂಬರ್ (ಸ) ಭವಿಷ್ಯ ನುಡಿದಿದ್ದಾರೆ. ಅವರು ಹೀಗೆ ಹೇಳಿದರು :

تكون النبوة فيكم ماشاء الله ان
تكون لم يرفعها الله تعلى ثم تكون
خلافة على منهاج النبوة ما شاء الله
أن تكون ثم يرفعها الله تعالى ثم
تكون ملكا عاضا فيكون ما شاء الله
ان يكون ثم يرفعها الله ثم تكون
ملكا جبرية فيكون ما شاء الله ان
يكون ثم يرفعها الله تعالى ثم تكون
خلافة على منهاج نبوة

"ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ನಿಮ್ಮಲ್ಲಿ ನುಬುವ್ವತ್ ನೆಲೆಗೊಳ್ಳುವುದು; ಬಳಿಕ ಅವನು ಅದನ್ನು ಮೇಲೆತ್ತುವನು. ಅನಂತರ, ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ನುಬುವ್ವತಿನ ರೀತಿಯಲ್ಲಿರುವ ಖಿಲಾಫತ್ ನೆಲೆಗೊಳ್ಳುವುದು; ಬಳಿಕ ಅವನು ಅದನ್ನು ಮೇಲೆತ್ತುವನು. ಅನಂತರ, ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ಸ್ವೇಚ್ಛಾಧಿಪತ್ಯ ನೆಲೆಗೊಳ್ಳುವುದು; ಬಳಿಕ ಅವನು ಅದನ್ನು ತೆಗೆದುಬಿಡುವನು. ಅನಂತರ, ಅಲ್ಲಾಹನು ಇಚ್ಛಿಸುವ ಕಾಲದ ವರೆಗೆ ಬಲಾತ್ಕಾರದಿಂದ ಕೂಡಿದ ಆಡಳಿತೆ ನೆಲೆಗೊಳ್ಳುವುದು; ಬಳಿಕ ಅವನು ಅದನ್ನು ಸಹ ತೆಗೆದುಬಿಡುವನು. ಅನಂತರ ನುಬುವ್ವತಿನ ರೀತಿಯಲ್ಲಿರುವ ಖಿಲಾಫತ್ ಉಂಟಾಗುವುದು."

(ಮಿಶ್ಕಾತ್-ಕಿತಾಬುರ್ರಿಖಾಖ್)

ಪೈಗಂಬರರ ಈ ನುಡಿಯಿಂದ, ಅಂತ್ಯಕಾಲದಲ್ಲಿ ನುಬುವ್ವತಿನ ಮಾರ್ಗದಲ್ಲಿರುವ ಖಿಲಾಫತ್ ಸ್ಥಾಪಿತವಾಗುವುದೆಂದು ಸ್ಪಷ್ಟವಾಗುತ್ತದೆ. ಈ ರೀತಿಯ ಖಿಲಾಫತ್ ಇಂದು ಅಹ್ಮದಿಯಾ ಜಮಾಅತಿನಲ್ಲಿ ಮಾತ್ರವೇ ಇದೆ. ವಾಗ್ದತ್ತ ಮಸೀಹ್ ತನ್ನ ಖಲೀಫ ಹಾಗೂ ಪ್ರವಾದಿ ಆಗಿರುವರೆಂದು ಮುಹಮ್ಮದ್ ಪೈಗಂಬರ್ (ಸ) ನುಡಿದಿದ್ದಾರೆ. (ತಬ್ರಾನಿ). ಆದ್ದರಿಂದ ಮೇಲೆ ಉದ್ಧರಿಸಲಾದ ಹದೀಸಿನಲ್ಲಿ ಕೊನೆಗೆ ನುಬುವ್ವತಿನ ಮಾರ್ಗದಲ್ಲಿರುವ ಖಿಲಾಫತ್ ಉಂಟಾಗುವುದೆಂದು ಹೇಳಿರುವುದು ಆ ವಾಗ್ದತ್ತ ಮಸೀಹರ ಉತ್ತರಾಧಿಕಾರವಾಗಿ ಉಂಟಾಗುವ ಖಿಲಾಫತನ್ನು ಉದ್ದೇಶಿಸಿ ಆಗಿತ್ತೆಂದು ಚೆನ್ನಾಗಿ ಮನವರಿಕೆ ಮಾಡಬಹುದು.

ಮುಹಮ್ಮದ್ ಪೈಗಂಬರ್ (ಸ) ಪ್ರವಾದಿ ಮೂಸಾ (ಅ)ರಿಗೆ ಸದೃಶರಾಗಿ ಬಂದ ಪ್ರವಾದಿ ಎಂದು ಪವಿತ್ರ ಖುರ್ಆನ್ ಮತ್ತು ತೌರಾತ್‌ನಿಂದ ವ್ಯಕ್ತವಾಗುತ್ತದೆ. ಆದ್ದರಿಂದ ಮೊದಲು ಉದ್ಧರಿಸಿದ ಖುರ್ಆನ್ ವಾಕ್ಯದಲ್ಲಿ **"ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ"** ಎಂದು ಹೇಳಿರುವುದು ಮೂಸಾನಬಿಯ ಅನುಯಾಯಿಗಳಲ್ಲಿ ಉಂಟಾದ ಖಲೀಫರಿಗೆ ಸಂಬಂಧಿಸಿದ್ದಾಗಿತ್ತೆಂಬುದು ಸ್ಪಷ್ಟ. ಅವರಲ್ಲಿ ಆಡಳಿತಾಧಿಕಾರ ಇದ್ದವರೂ ಇಲ್ಲದವರೂ ಆದ ಖಲೀಫರು ಇದ್ದರು. ಮೂಸಾನಬಿಯ ನಂತರ ಹದಿನಾಲ್ಕನೇ ಶತಮಾನದಲ್ಲಿ ಅವರ ಖಲೀಫರಾಗಿ ಆಗಮಿಸಿದ ಈಸಾನಬಿ (ಅ) ಆಡಳಿತಾಧಿಕಾರವಿಲ್ಲದವರಾಗಿದ್ದರು. ಇದರಿಂದ, ಮೂಸಾನಬಿಯ ಸದೃಶರಾಗಿ ಬಂದ ಮುಹಮ್ಮದ್ ಪೈಗಂಬರರ ನಂತರ ಹದಿನಾಲ್ಕನೇ ಶತಮಾನದಲ್ಲಿ ಈಸಾನಬಿಯೊಡನೆ ಸಾದೃಶ್ಯವಿರುವ ಓರ್ವ ಖಲೀಫ ಉಂಟಾಗುವರೆಂದೂ ಅವರ ನಂತರ ಉಂಟಾಗುವ ಖಿಲಾಫತ್ ನುಬುವ್ವತಿನ ಮಾರ್ಗದಲ್ಲಿರುವ ಖಿಲಾಫತ್ ಆಗಿರುವುದೆಂದೂ ಮನವರಿಕೆಯಾಗುತ್ತದೆ. ಕೊನೆಯಲ್ಲಿ ನುಬುವ್ವತಿನ ಹೆಜ್ಜೆಗುರುತಿನಲ್ಲಿ ಚಲಿಸುವ ಖಿಲಾಫತ್ ಉಂಟಾಗುವುದೆಂದೂ ಅಂತ್ಯಕಾಲದಲ್ಲಿ ಮಸೀಹ್ ಅವತರಿಸುವರೆಂದೂ ತಾನು ಆದ್ಯದಲ್ಲಿ ಮತ್ತು ಮಸೀಹ್ ಅಂತ್ಯದಲ್ಲಿ ಇರುವ ಒಂದು ಸಮುದಾಯ ನಾಶವಾಗುವುದು ಹೇಗೆಂದೂ ಪೈಗಂಬರ್ (ಸ) ನುಡಿದದ್ದು ಇದಕ್ಕೆ ಸಾಕ್ಷ್ಯವಾಗಿದೆ. ತಾನು ಮೂಸಾನಬಿಗೆ ಸದೃಶನಾಗಿ ಬಂದ ಹಾಗೆ ತನ್ನ ನಂತರ ಹದಿನಾಲ್ಕನೇ ಶತಮಾನದಲ್ಲಿ ತನ್ನ ಖಲೀಫ ಆಗಿ ಬರುವ ಮಹಾ ಪುರುಷ ಸಹ ಹಲವು ವಿಚಾರಗಳಲ್ಲಿ ಈಸಾನಬಿಗೆ ಸದೃಶರಾಗಿರುವುದರಿಂದಲೇ ಅವರನ್ನು "ಮಸೀಹ್" ಮತ್ತು "ಇಬ್ನುಮರ್ಯಮ್" ಎಂದು ಪೈಗಂಬರ್ (ಸ) ನಾಮಕರಣ ಮಾಡಿದ್ದಾರೆ.

ವಾಗ್ದಾನ ಮಾಡಲ್ಪಟ್ಟ ಆ ಮಹಾಪುರುಷರ ಕುರಿತು ಅಂತ್ಯಕಾಲದಲ್ಲಿ ಮಸೀಹ್ ಬರುವರೆಂದು ಪೈಗಂಬರ್ (ಸ) ಭವಿಷ್ಯ ನುಡಿದಿದ್ದಾರೆ. ಆ ಮಸೀಹರ ಆವಿರ್ಭಾವದ ನಂತರ ಉಂಟಾಗುವ ಖಿಲಾಫತಿನ ಬಗ್ಗೆಯೇ ಮೇಲೆ ಉದ್ಧರಿಸಿದ ಹದೀಸಿನ ಕೊನೆಯಲ್ಲಿ "ನುಬುವ್ವತಿನ ರೀತಿಯಲ್ಲಿರುವ ಖಿಲಾಫತ್ ಉಂಟಾಗುವುದು" ಎಂದು ಪೈಗಂಬರ್ (ಸ) ನುಡಿದಿದ್ದಾರೆ. ಒಟ್ಟಾರೆ, ಸತ್ಯ ವಿಶ್ವಾಸಿಗಳೂ

ಸತ್ಕರ್ಮಿಗಳೂ ಆದ ಯಥಾರ್ಥ ಮುಸ್ಲಿಮರಲ್ಲಿ ಖಿಲಾಫತ್ ಉಂಟಾಗುವುದೆಂದು ಖುರ್‌ಆನ್ ಹೇಳಿರುವುದು ಯಥಾರ್ಥ ಇಸ್ಲಾಮಿಕ ಪಂಗಡ ಯಾವುದು ಎಂದು ಮನಗಾಣಿಸಿ ಕೊಡುವ ಒಂದು ಪ್ರತ್ಯಕ್ಷ ಸಾಕ್ಷ್ಯವಾಗಿದೆ. ಯಥಾರ್ಥ ಇಸ್ಲಾಮಿಕ ಪಂಗಡ ತಾನು ಮತ್ತು ತನ್ನ ಸಹಚರರು ಇದ್ದ ರೀತಿಯಲ್ಲಿ ಇರುವವರೆಂದೂ ಅವರು ಒಂದು ಜಮಾಅತಾಗಿರುವರೆಂದೂ ಪೈಗಂಬರ್ (ಸ) ಹೇಳಿದ್ದಾರೆ. ಪೈಗಂಬರರ ನಂತರ ಶಿಷ್ಯ ಗಣವು ಖಲೀಫರನ್ನು ಆಯ್ಕೆ ಮಾಡಿ ಅವರ ಖಿಲಾಫತಧಿಕಾರದ ಅಧೀನದಲ್ಲಿ ಜಮಾಅತಾಗಿ ಇದ್ದ ಪ್ರಕಾರವೇ ಖಲೀಫರನ್ನು ಆರಿಸಿ ಖಿಲಾಫತಧಿಕಾರದ ಅಧೀನದಲ್ಲಿ ಜೀವಿಸುವವರು ಇಂದು ಲೋಕದಲ್ಲಿ ಅಹ್ಮದಿಯಾ ಜಮಾಅತ್ ಮಾತ್ರವೆಂಬುದು ಒಂದು ಪ್ರತ್ಯಕ್ಷ ಸಂಗತಿಯಾಗಿದೆ.

### ಭೀತಿಯ ಬದಲಿಗೆ ಶಾಂತಿ

ಮೇಲೆ ಉದ್ಧರಿಸಿದ ಖುರ್‌ಆನ್ ವಾಕ್ಯದಲ್ಲಿ ಖಿಲಾಫತಿನ ಒಂದು ಉದ್ದೇಶವಾಗಿ ಹೇಳಿರುವುದು, ಆ ಮೂಲಕ ಅಲ್ಲಾಹನು ಸತ್ಯ ವಿಶ್ವಾಸಿಗಳ ಧರ್ಮವನ್ನು ಅವರಿಗೆ ಬಲಪಡಿಸಿಕೊಡುವನು ಮತ್ತು ಅವರ ಭೀತಿಯನ್ನು ನಿವಾರಿಸಿ ಅವರಿಗೆ ಶಾಂತಿ ಸಮಾಧಾನ ದಯಪಾಲಿಸುವನು ಎಂದಲ್ಲವೇ. ಇಸ್ಲಾಂ ಧರ್ಮವು ಶತ್ರುಗಳ ಆಕ್ಷೇಪಗಳಿಗೆ ಗುರಿಯಾಗಿ ಮುಸ್ಲಿಮರು ಅದರ ಸತ್ಯವನ್ನು ಇತರರಿಗೆ ಬೋಧಿಸುವ ವಿಚಾರದಲ್ಲಿ ತೀರಾ ನಿರ್ಲಕ್ಷ್ಯರಾಗಿದ್ದ ಕಾಲದಲ್ಲಿ ಅಲ್ಲಾಹನು ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ನಿಯೋಜಿಸಿದನು. ಅವರು ಇಸ್ಲಾಮಿನ ವೈರಿಗಳನ್ನು ಎದುರಿಸಲಿಕ್ಕೆ ಮತ್ತು ಧರ್ಮಬೋಧನೆ ಮಾಡಲಿಕ್ಕೆ ಒಂದು ಮಾರ್ಗವನ್ನು ತೋರಿಸಿಕೊಟ್ಟರು. ತತ್ಫಲವಾಗಿ, ಅವರ ಅನುಚರ ಸಂಘ - ಒಂದು ಚಿಕ್ಕ ಸಂಘವಾದ ಅಹ್ಮದಿಯಾ ಜಮಾಅತ್ - ಲೋಕದ ನಾನಾ ಜಾತಿ ಮತಸ್ಥರ ಮುಂದೆ ಇಸ್ಲಾಮಿನ ಸತ್ಯವನ್ನು ಪ್ರಸ್ತಾಪಿಸಲಿಕ್ಕೂ ಅವರಿಗೆ ಸತ್ಯ ಬೋಧನೆ ಮಾಡಲಿಕ್ಕೂ ಸಾಮರ್ಥ್ಯ ಹಾಗೂ ಧೈರ್ಯ ಹೊಂದಿತು. ಅದರ ಫಲವಾಗಿ ಇಸ್ಲಾಮಿನ ವಿರುದ್ಧವಿರುವ ಆಕ್ಷೇಪಗಳನ್ನು ಕೇಳಿ ಮುಸ್ಲಿಮರು ಭಯಪಡುತ್ತಿದ್ದ ಕಾಲ ಹೋಗಿಬಿಟ್ಟಿತು. ಇಂದು ಇಸ್ಲಾಮಿಕ ತತ್ವಗಳನ್ನು ವಿರೋಧಿಸುವ ಕೃತ್ಯದಿಂದ ಅನ್ಯಧರ್ಮೀಯರು ಹಿಮ್ಮೆಟ್ಟುವ ಸ್ಥಿತಿ ಉಂಟಾಗಿದೆ. ಅಹ್ಮದಿಯಾ ಜಮಾಅತ್ ತನ್ನ ಇಮಾಮರ ನೇತೃತ್ವದಲ್ಲಿ ಲೋಕದ ನಾನಾ ಭಾಗಗಳಲ್ಲಿ ಇಸ್ಲಾಮಿಕ ಪತಾಕೆಯನ್ನು ಎತ್ತಿಕೊಂಡು ಸತ್ಯಬೋಧನೆ ನಡೆಸುತ್ತಿದೆ. ಕೋಟಿಗಟ್ಟಲೆ ಮುಸ್ಲಿಮರಿಗೆ ಸಾಧ್ಯವಾಗದ ಈ ಕಾರ್ಯ ಇವರಿಗೆ ಸಾಧ್ಯವಾಗಿರುವುದು, ಯಾವ ಸ್ಥಾನ ಮೂಲಕ ಸತ್ಯ ವಿಶ್ವಾಸಿಗಳ ಧರ್ಮವನ್ನು ಬಲಪಡಿಸಿ ಅವರ ಭೀತಿಯನ್ನು ಹೋಗಲಾಡಿಸಿ ಅವರಿಗೆ ನೆಮ್ಮದಿಯನ್ನು ದಯಪಾಲಿಸಲಾಗುವುದೆಂದು ಮೇಲೆ ಹೇಳಿದ ಖುರ್‌ಆನ್ ವಾಕ್ಯದಲ್ಲಿ ಪ್ರಸ್ತಾಪಿಸಲಾಗಿಯೋ ಆ ಖಿಲಾಫತ್ ಈ ಜಮಾತಿನಲ್ಲಿ ಇರುವುದರಿಂದಲೇ ಆಗಿದೆ.

### ಶಿರ್ಕ್‌ನಿಂದ ಶುದ್ಧ

ಖಿಲಾಫತಿನ ಅನುಗ್ರಹ ಲಭಿಸಿದವರ ಕುರಿತು ಅಲ್ಲಾಹನು ಹೇಳಿರುವುದು "ಅವರು ನನ್ನನ್ನು ಮಾತ್ರ ಆರಾಧಿಸುವವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು" ಎಂದಾಗಿದೆ. ಈ ಲಕ್ಷಣ ಸಹ ಇಂದು ಅಹ್ಮದಿಯರಲ್ಲೇ ಪೂರ್ತಿಗೊಂಡು ಕಾಣುತ್ತದೆ. ಅಹ್ಮದೀಯರು ಇತರ ಮುಸ್ಲಿಮರಿಗೆ ಹೋಲಿಸಿದರೆ ಹೆಚ್ಚು ಧರ್ಮನಿಷ್ಠೆಯುಳ್ಳವರೂ ಧರ್ಮ ನಿಯಮಗಳನ್ನು ಅನುಸರಿಸಿ ಜೀವಿಸುವವರೂ ಆಗಿದ್ದಾರೆಂಬ ನಿಜಸ್ಥಿತಿಯನ್ನು ನಿಷ್ಪಕ್ಷಪಾತಿಗಳಾದ ಅನ್ಯರೇ ಒಪ್ಪುತ್ತಾರೆ. ಮಾತ್ರವಲ್ಲ, ಮುಸ್ಲಿಮರು ಸಾಮಾನ್ಯವಾಗಿ ಲೌಕಿಕವಾದ ಲಾಭಗಳಿಗೂ ರಾಜಕೀಯವಾದ ಅಧಿಕಾರಲಬ್ಧಿಗೂ ಬೇಕಾಗಿ ಮಾತ್ರ ಸಂಘಗಳನ್ನು ಸ್ಥಾಪಿಸಿ ಮೊರೆಯಿಡುವ ಈ ಕಾಲದಲ್ಲಿ ಇಸ್ಲಾಂ ಧರ್ಮವನ್ನು ಪ್ರಚಾರ ಮಾಡಲಿಕ್ಕೂ ಅದರ ಸಿದ್ಧಾಂತಗಳ ಸತ್ಯವನ್ನು ಸ್ಥಾಪಿಸಲಿಕ್ಕೂ ವ್ಯವಸ್ಥಿತವಾದ ರೀತಿಯಲ್ಲಿ ಪರಿಶ್ರಮಿಸುವುದು ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ. ಇದೇ ಪ್ರಕಾರ, ಅಲ್ಲಾಹನಿಗೆ ಏನನ್ನೂ ಸಹಭಾಗಿ ಮಾಡದೆ ಯಥಾರ್ಥ ದೇವ ವಿಶ್ವಾಸವನ್ನು ಹೊಂದಿರುವವರು ಸಹ ಅವರೇ ಆಗಿದ್ದಾರೆ. ಶಿಯಾ-ಸುನ್ನಿಗಳಾದರೆ ಹಲವು ತರದ 'ಶಿರ್ಕ್'ಗಳಲ್ಲಿ ಮುಳುಗಿದ್ದಾರೆ. ಪುರೋಗಮನವಾದಿಗಳೆಂದು ಹೇಳುವವರು ಸಂದರ್ಭಾನುಸಾರ ಶಿರ್ಕ್‌ಪರವಾದ ವಿಚಾರಗಳಲ್ಲಿ ಇತರರೊಡನೆ ಭಾಗವಹಿಸಿ, ಔಲಿಯಾಗಳಿಗೆ ಬದಲು ಈಸಾನಬಿಗೆ ದೇವತ್ವವನ್ನು ಕಲ್ಪಿಸಿ ಏಕದೇವ ವಿಶ್ವಾಸಕ್ಕೆ ವ್ಯತಿರಿಕ್ತವಾಗಿ ವರ್ತಿಸುತ್ತಾರೆ. ಇವರಲ್ಲಿ ಸೇರದವರು, ಧರ್ಮ ಮತ್ತು ಧರ್ಮ ವಿಶ್ವಾಸ ಬರೇ ವಿನೋದವೆಂಬಂತೆ ಭಾವಿಸಿ ವರ್ತಿಸುವವರಾಗಿದ್ದಾರೆ. ಇವರು ಮುಸ್ಲಿಂ ಸಮುದಾಯದಲ್ಲಿ ಸೇರಿದವರಾದುದರಿಂದ ತಾವು ಸಹ ಮುಸ್ಲಿಮರೆಂದು ಹೇಳುತ್ತಾರೆ ಹೊರತು ಅವರ ಬದುಕಿನಲ್ಲಿ ಇಸ್ಲಾಮಿನೊಂದಿಗೆ ಯಾವುದೇ ಸಂಬಂಧವಿಲ್ಲ. ಅವರ 'ದೀನ್ ಮತ್ತು ಈಮಾನ್' ಎಲ್ಲವೂ ಲೌಕಿಕ ಲಾಭ ಮತ್ತು ಅದಕ್ಕೆ ಸಂಬಂಧಿಸಿದ ಚಿಂತೆ ಮಾತ್ರವಾಗಿದೆ. ಈ ನಿಜಸ್ಥಿತಿಯನ್ನು ಮುಸ್ಲಿಂ ನೇತಾರರೂ ವಿದ್ವಾಂಸರೂ ಒಪ್ಪಿಕೊಂಡು ಉಚ್ಚಸ್ವರದಲ್ಲಿ ಘೋಷಿಸುತ್ತಾರೆ. ಒಟ್ಟಿನಲ್ಲಿ, ಅಲ್ಲಾಹನಿಗೆ ಏನನ್ನೂ ಸಹಭಾಗಿ ಮಾಡದೆ ಅವನನ್ನು ಮಾತ್ರ ಆರಾಧಿಸುವವರೆಂಬ ಲಕ್ಷಣ ಇಂದು ಅಹ್ಮದಿಯಾ ಜಮಾಅತಿನಲ್ಲಿ ಪೂರ್ತಿಗೊಂಡು ಕಾಣುತ್ತದೆ. ಆದ್ದರಿಂದ ಖಿಲಾಫತಿನ ಹಕ್ಕುದಾರರು ಅವರೇ ಆಗಿದ್ದಾರೆ.

### ಮೌಲಾನಾ ಆಝಾದ್ ಹೇಳುತ್ತಾರೆ

ಖಿಲಾಫತನ್ನು ನಿರಾಕರಿಸುವವರ ಕುರಿತು "ಅವರೇ ಅಧರ್ಮಿಗಳು" ಎಂದು ಮೇಲಿನ ಖುರ್‌ಆನ್ ವಾಕ್ಯದ ಕೊನೆಯಲ್ಲಿ ಹೇಳಿರುವುದರ ಬಗ್ಗೆ ದೇವಭಯ ಮತ್ತು ನೀತಿಪ್ರಜ್ಞೆಯಿರುವ ಪ್ರತಿಯೊಬ್ಬನು ಚಿಂತನೆ ಮಾಡಬೇಕಾಗಿದೆ. ಖಲೀಫರನ್ನು ಸ್ವೀಕರಿಸಬೇಕಾದುದು ಅತ್ಯಾವಶ್ಯಕವೆಂದೂ ಸ್ವೀಕರಿಸದಿದ್ದರೆ ಮುಸ್ಲಿಮರಿಗೆ ಮೋಕ್ಷ ಮತ್ತು ಕ್ಷೇಮ ಪ್ರಾಪ್ತವಾಗದೆಂದೂ ಖುರ್‌ಆನ್ ಹೇಳುತ್ತದೆ. ಖಲೀಫರನ್ನು ಅನುಸರಿಸುವ ಆವಶ್ಯಕತೆಯ ಕುರಿತು ಮೌಲಾನಾ ಅಬುಲ್ ಕಲಾಂ ಆಝಾದ್ ತನ್ನ "ಮಸ್‌ಅಲಯೆ ಖಿಲಾಫತ್" ಎಂಬ ಪುಸ್ತಕದಲ್ಲಿ ಹೀಗೆ ಹೇಳುತ್ತಾರೆ:

"ವ್ಯಕ್ತಿಗತವಾಗಿಯೂ ವಿಶ್ವಾಸ ಸಂಬಂಧವಾಗಿಯೂ ಪ್ರವರ್ತನ ಪರವಾಗಿಯೂ ಇರುವ ಜೀವಿತಗಳಿಗೆ ಒಂದೊಂದು ಕೇಂದ್ರವಿರುವುದಾಗಿ ಕಾಣುವ ಪ್ರಕಾರವೇ ಸಾಮುದಾಯಿಕವೂ ಧಾರ್ಮಿಕವೂ ಆದ ಜೀವಿತಕ್ಕೂ ಕೇಂದ್ರವಾಗಿರುವ ಒಂದು ಶಕ್ತಿ ಇರಬೇಕಾದುದು ಅವಶ್ಯವಾಗಿದೆ. ಅಂತೆಯೇ, ಹಾಗೆ ಇರುವ ಒಂದು ಕೇಂದ್ರ ನಿಶ್ಚಯಿಸಲ್ಪಟ್ಟಿದೆ ಕೂಡ. ಸಮುದಾಯವೆಲ್ಲವೂ ಆ ಕೇಂದ್ರಕ್ಕೆ ಸುತ್ತಲೂ ಇರುವ ವೃತ್ತವಾಗಿ ಪರಿಗಣಿಸಲ್ಪಟ್ಟಿದೆ. ಆ ಕೇಂದ್ರ ಶಕ್ತಿಯೊಂದಿಗೆ ಒಂದು ವಿಶಿಷ್ಟ ಸಂಬಂಧ, ಅನುಸರಣೆ ಮತ್ತು ಪರಿಪೂರ್ಣ ರೀತಿಯಲ್ಲಿರುವ ವಿಧೇಯತೆಯನ್ನು ತೋರಿಸಿ, ಅದರ ಕರೆಯನ್ನು ಆಲಿಸಿ, ಅದರ ಆಜ್ಞಾನುಸಾರ ಜೀವವನ್ನೂ ಧನವನ್ನೂ ವ್ಯಯಿಸುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವಾಗಿ

ವಿಧಿಸಲ್ಪಟ್ಟಿದೆ. ಈ ಧರ್ಮವನ್ನು ಅನುಷ್ಠಿಸುವುದರ ಮೂಲಕ ಹೊರತು ಅಜ್ಞಾನಾಂಧಕಾರ ದಿಂದ ಪ್ರಕಾಶದೆಡೆಗೆ ಬರಲಿಕ್ಕೆ ಸಾಧ್ಯವಿಲ್ಲ. ಇಸ್ಲಾಮಿನ ಈ ಸಾಮುದಾಯಿಕ ಕೇಂದ್ರ ಶಕ್ತಿಗೆ ಖಲೀಫ ಎಂದೂ ಇಮಾಂ ಎಂದೂ ಹೇಳಲಾಗುತ್ತದೆ. ಎಷ್ಟರ ವರೆಗೆ ಈ ಕೇಂದ್ರ ಶಕ್ತಿ ಅದರ ಸ್ಥಾನದಿಂದ ವ್ಯತಿಕ್ರಮಿಸ ದಿರುತ್ತದೋ - ಎಷ್ಟರ ವರೆಗೆ ಅದರ ಅನುಶಾಸನಗಳು ಖುರ್‌ಆನ್ ಮತ್ತು ಸುನ್ನತ್‌ಗೆ ಅನುಸಾರವಾಗಿ ಇರುತ್ತವೆಯೋ - ಅಷ್ಟರವರೆಗೆ ಅದನ್ನು ಅನುಸರಿಸುವುದು ಮತ್ತು ಅದಕ್ಕೆ ನೆರವಾಗುವುದು ಪೈಗಂಬರರನ್ನೂ ಅಲ್ಲಾಹನನ್ನೂ ಅನುಸರಿಸುವಂತೆಯೂ ನೆರವಾಗುವಂತೆಯೂ ಆಗಿದೆ." (ಮಸ್‌ಅಲಯೆ ಖಿಲಾಫತ್ - ಪುಟ 26)

ಇನ್ನೂ ಅವರು ಹೇಳುತ್ತಾರೆ: "ಹಝ್ರತ್ ಇಬ್ನು ಉಮರ್‌ರವರ ಒಂದು ನಿವೇದನೆಯಲ್ಲಿ ಹೀಗಿದೆ:

من خلع يداً من طاعة لقي الله يوم

القيمة ولا حجة له ومن مات وليس

في عنقه بيعة مات ميتة جاهلية

'ಯಾರು ಖಲೀಫರ ಅನುಸರಣೆಯನ್ನು ಕೈಬಿಡುವನೋ, ಅವನು ನ್ಯಾಯ ವಿಚಾರಣೆ ದಿನದಂದು ದೇವ ಸನ್ನಿಧಿಯಲ್ಲಿ ಯಾವುದೇ ರಕ್ಷಾ ಮಾರ್ಗವಿಲ್ಲದ ಸ್ಥಿತಿಯಲ್ಲಿ ಹಾಜರಾಗುವನು. ಖಲೀಫರ ಬೈಅತ್ ಮತ್ತು ಅನುಸರಣೆ ಇಲ್ಲದೆ ಯಾವೊಬ್ಬ ಮುಸ್ಲಿಂ ಇಹಲೋಕ ವಾಸವನ್ನು ತ್ಯಜಿಸುವನೋ ಅವನು ಖಂಡಿತವಾಗಿಯೂ ಜಾಹಿಲಿಯ್ಯತಿನ (ಅವಿಶ್ವಾಸದ) ಮರಣವನ್ನು ಹೊಂದುವನು.'

ومن فارق الجماعة شبرا فكانما خلع

ربقة الاسلام من عنقه

"ಯಾರು ಜಮಾಅತಿನಿಂದ ಬಿಟ್ಟು ನಿಲ್ಲುತ್ತಾನೋ ಅವನು ಇಸ್ಲಾಮಿಕ ವೃತ್ತದಿಂದಲೂ ಹೊರಗಿರುವವನಾಗುವನು." (ತಿರ್ಮದಿ).

ಒಂದು ವರದಿಯಲ್ಲಿ دخل النار ಎಂದು ಇದೆ. ಅಂದರೆ, 'ಯಾರು ಖಲೀಫರ ಅನುಸರಣೆಯಿಂದ ಬಿಟ್ಟು ನಿಲ್ಲುತ್ತಾನೋ ಅವನ ವಾಸಸ್ಥಳ ನರಕವಾಗಿರುವುದು' ಎಂದು." (ಮಸ್‌ಅಲಯೆ ಖಿಲಾಫತ್ ಪುಟ 31-32)

ಖಲೀಫರನ್ನು ಸ್ವೀಕರಿಸಿ ಖಲೀಫರ ಆಜ್ಞೆಗಳಿಗೆ ಪೂರ್ಣವಾಗಿ ವಿಧೇಯರಾಗಬೇಕಾದುದು ಇಸ್ಲಾಮಿಕ ದೃಷ್ಟಿಯಲ್ಲಿ ಎಷ್ಟು ಅಗತ್ಯವೆಂದೂ ಖಲೀಫರನ್ನು ಸ್ವೀಕರಿಸದವರ ಮತ್ತು ಖಲೀಫರ ಆಜ್ಞೆಗಳನ್ನು ಧಿಕ್ಕರಿಸುವವರ ಅಂತ್ಯ ಹೇಗಿರುವುದೆಂದೂ ಮೇಲಿನ ಉದ್ಧರಣೆಯಿಂದ ಚೆನ್ನಾಗಿ ಮನಗಾಣಬಹುದು. ಸಂಕ್ಷಿಪ್ತದಲ್ಲಿ, ಖಿಲಾಫತಿನೊಡನೆ ಸದಾ ಸಂಬಂಧವನ್ನಿಟ್ಟುಕೊಂಡು ಇರಬೇಕಾದುದು ಯಥಾರ್ಥ ಮುಸ್ಲಿಮನ ಅನಿವಾರ್ಯ ಕರ್ತವ್ಯವಾಗಿದೆ. *

## ನೇರ ಮಾತು (21ನೇ ಪುಟದಿಂದ)

ಈ ಚಿಕ್ಕ ಚಿಕ್ಕ ಉಪದೇಶಗಳ ಉಪಯುಕ್ತತೆಯ ಕುರಿತು ನಾನು ಯೋಚಿಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಗುಲಾಮರಾದ ನಮಗೆ ಅವರ ಉಪದೇಶಗಳ ಅಪಾರವಾದ ಹಿತಗಳ ಬಗ್ಗೆ ಮನವರಿಕೆಯಾಯಿತು. ಸಹಾಬರು (ಪ್ರವಾದಿಯ ಶಿಷ್ಯರು) ವಿನಯದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ದಿಟ್ಟಿಸಿ ನೋಡುತ್ತಿರಲಿಲ್ಲ. ಹಝ್ರತ್ ಪೈಗಂಬರ್‌ರವರು ನಿಧನ ಹೊಂದಿದ ನಂತರ ಅವರ ಮುಖಚಹರೆಯ ಕುರಿತು ನಿಖರ ಮಾಹಿತಿ ನೀಡಲು ಅನೇಕ ಶಿಷ್ಯರಿಗೆ ಸಾಧ್ಯವಾಗಲಿಲ್ಲ. ಏಕೆಂದರೆ ಅವರು ವಿನಯದಿಂದ ಸದಾ ತಲೆತಗ್ಗಿಸಿ ಪೈಗಂಬರರ ಸನ್ನಿಧಿಯಲ್ಲಿ ಕುಳಿತುಕೊಳ್ಳುತ್ತಿದ್ದರು.

ನಾವು ಎಲ್ಲಾ ವಿಧ ಶಿಷ್ಟಾಚಾರಗಳನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಂದ ಕಲಿತಿರುವೆವು. ನೀವು ಅವುಗಳ ಬಗ್ಗೆ ಚಿಂತಿಸಿದರೆ ಅವುಗಳ ಮೂಲಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ನಿಮಗೆ ಎಷ್ಟು ಉಪಕಾರ ಮಾಡಿರುವರೆಂಬುದನ್ನು ತಿಳಿಯಬಹುದು. ಜನರನ್ನು ಪರಿಶುದ್ಧರನ್ನಾಗಿ ಮಾಡುವ ಪರಿಶುದ್ಧ ಮಹಾನುಭಾವ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರೆಂದು ಪವಿತ್ರ ಖುರ್‌ಆನ್ ಹೇಳುತ್ತಿದೆ. ಇಂತಹ ಪರಿಶುದ್ಧರ ಸಹವಾಸದಲ್ಲಿ ನೀವು ಇದ್ದರೆ ನಿಮಗೆ ಉಪದೇಶಿಸಲಾದ ಉಪದೇಶಗಳನ್ನು ಅನುಸರಿಸಿ ನಡೆಯಲು ಸುಲಭವಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕಿಶ್ತೀ ನೂಹ್‌ನಲ್ಲಿ ಹೀಗೆ ಬರೆದಿದ್ದಾರೆ : "ನೀವು ಸಹನೆ ಮತ್ತು ನಮಾಝ್ ಮೂಲಕ ಅಲ್ಲಾಹನ ಸಹಾಯ ಯಾಚಿಸಿರಿ. ನಮಾಝ್ ಎಂದರೆ ಏನು? ಅದು ದುಆ (ಪ್ರಾರ್ಥನೆ) ಆಗಿದೆ. ತಸ್‌ಬೀಹ್ ಎಂದರೆ ಅಲ್ಲಾಹನ ಪರಿಶುದ್ಧಿಯನ್ನು ಕೊಂಡಾಡುವ ಮೂಲಕ, ತಹ್‌ಮೀದ್ ಎಂದರೆ ಅಲ್ಲಾಹನ ಮಹಿಮೆಯನ್ನು ವರ್ಣಿಸುವ ಮೂಲಕ, ಇಸ್ತಿಗ್‌ಫಾರ್ ಎಂದರೆ ಅಲ್ಲಾಹನಿಂದ ಕ್ಷಮೆಯನ್ನು ಯಾಚಿಸುವ ಮೂಲಕ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಗೆ ಸಲಾತ್ ಮತ್ತು ಸಲಾಮ್ ಅರ್ಪಿಸುವ ಮೂಲಕ ವಿನಯದಿಂದ ಅಲ್ಲಾಹನನ್ನು ಪ್ರಾರ್ಥಿಸಲಾಗುತ್ತದೆ. ನೀವು ನಮಾಝ್ ಮಾಡುವಾಗ ಅಜ್ಞಾನಿಗಳ ಹಾಗೆ ನಿಮ್ಮ ದುಆಗಳಲ್ಲಿ ಬರೇ ಅರಬಿ ಪದಗಳನ್ನು ಮಾತ್ರ ಉಪಯೋಗಿಸ ಬೇಡಿರಿ. ಅಂತಹ ಜನರ ನಮಾಝ್ ಮತ್ತು ಇಸ್ತಿಗ್‌ಫಾರ್ ಬರೇ ಆಚಾರಗಳಾಗಿವೆ. ಅವುಗಳಿಗೆ ಯಥಾರ್ಥತೆ ಏನೂ ಇಲ್ಲ. ಅಖೀಮುಸ್ಸಲಾತ - ನೀವು ನಮಾಝ್‌ನ್ನು ಅನುಷ್ಠಿಸಿರಿ, ವಸ್ತಈನೂ ಬಿಸ್ಸಬ್‌ರಿ ವಸ್ಸಲಾತ್ - ನೀವು ಸಹನೆ ಮತ್ತು ಸಲಾತ್ ನೊಂದಿಗೆ ಅಲ್ಲಾಹನ ಸಹಾಯ ಯಾಚಿಸಿರಿ ಎಂಬ ಆಜ್ಞೆಯನ್ನು ಅಲ್ಲಾಹನು ಶರೀಅತ್ (ಇಸ್ಲಾಮ್ ನಿಯಮ ಸಂಹಿತೆ) ಪ್ರಕಾರ ನೀಡಿರುವನು. ನೀವು ಈ ಆಜ್ಞೆಗಳನ್ನು ಒಂದು ಕಾಲಾವಧಿಯ ವರೆಗೆ ಅನುಷ್ಠಿಸುತ್ತಾ ಇದ್ದರೆ ಈ ಅನುಷ್ಠಾನವು ಶರೀಅತಿನ ಪಾಲನೆಯ ಒಂದು ಭಾಗವಾಗಿ ಇರುವುದರಿಂದ ಪರಿವರ್ತನೆ ಹೊಂದಿ ಅದು ನಿಮ್ಮ ಪ್ರಕೃತಿಯ ಅವಿಭಾಜ್ಯ ಅಂಗವಾಗಿ ಪರಿಣಮಿಸುವುದು. ಆಗ ನೀವು ಅಲ್ಲಾಹನ ಆಜ್ಞೆಗಳಿಗೆ ವಿರುದ್ಧವಾಗಿ ನಡೆಯುವುದು ಅಸಂಭಾವ್ಯವಾಗುತ್ತದೆ."

ನಾವೆಲ್ಲರೂ ಇಂತಹವರಾಗಲು ಅಲ್ಲಾಹನು ನಮಗೆ ಅನುಗ್ರಹ ದಯಪಾಲಿಸಲಿ. (ಖುತ್ಬ ಜುಮುಅ : 14-8-1998)

ಸಂಕ್ಷಿಪ್ತ ಅನುವಾದ : ಎಂ. ಉಬೈದುಲ್ಲಾ *

# ಮುಸ್ಲಿಂ ಸಮುದಾಯದ ವಿಮೋಚನೆಗಾಗಿ

# ಇಮಾಂ ಮಹ್‌ದಿಯ ಆವಿರ್ಭಾವ

ಎಂ.ಪಿ. ಇಬ್ರಾಹಿಂ

ಮುಸ್ಲಿಂ ಸಮುದಾಯ ಅಧಃಪತನಗೊಳ್ಳುವ ಕಾಲದಲ್ಲಿ ಅಲ್ಲಾಹನಿಂದ ನಿಯೋಜಿತರಾಗುವ ಓರ್ವ ಮಹಾತ್ಮರ ಮೂಲಕ ಸಮುದಾಯದ ಪುನರುದ್ಧಾರ ಉಂಟಾಗುವುದೆಂದು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳಲ್ಲಿ ವಿವರಿಸಲಾಗಿದೆ. ಮುಸ್ಲಿಂ ಸಮುದಾಯವು ಪರಂಪರಾಗತವಾಗಿ ಸುದೃಢವಾಗಿ ನಂಬುತ್ತಾ ಬಂದಿರುವ ಈ ಭವಿಷ್ಯವಾಣಿ ಯಥಾವತ್ ಪೂರ್ತಿಯಾಗಿದ್ದರೂ ಸಮುದಾಯವು ಆ ಕಡೆಗೆ ಗಮನ ಹರಿಸದೆ ಮಾನವ ನಿರ್ಮಿತ ಸಂಘ-ಸಂಸ್ಥೆಗಳನ್ನೂ ಪಕ್ಷ-ಪಂಗಡಗಳನ್ನೂ ಆಶ್ರಯಿಸಿಕೊಂಡು ತಮ್ಮದೇ ಆದ ಮಾರ್ಗಗಳ ಮೂಲಕ ಸಮುದಾಯದ ಅವನತಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವುದು ಅತ್ಯಂತ ವಿಷಾದಕರವಾಗಿದೆ.

ಖುರ್‌ಆನ್ ಹೇಳುತ್ತದೆ : "ನಿರಕ್ಷರರಾದ ಈ ಸಮುದಾಯದಿಂದ (ಅರಬಿಗಳೆಡೆಯಿಂದ) ಅವರ ಪೈಕಿ ಓರ್ವ ಸಂದೇಶವಾಹಕನನ್ನು ನಿಯೋಜಿಸಿ ಕಳುಹಿಸಿದವನು ಅವನಷ್ಟೆ;......... ಅವರೊಂದಿಗೆ ಇದುವರೆಗೂ ಸೇರಿಲ್ಲದ ಅವರ ಪೈಕಿ ಮತ್ತೊಂದು ಜನಾಂಗದಿಂದಲೂ." (62:3,4). ಹಝ್ರತ್ ಮುಹಮ್ಮದ್ ಪೈಗಂಬರರು(ಸ.) ಉಮ್ಮಿ (ನಿರಕ್ಷರ ಕುಕ್ಷಿ)ಗಳಾದ ಅರಬ್ ಜನಾಂಗದವರಲ್ಲಿ ಮಾತ್ರವಲ್ಲ ಅವರೊಂದಿಗೆ ಸೇರಿಲ್ಲದ ಬೇರೊಂದು ಜನಾಂಗದಲ್ಲಿ ಸಹ ಮತ್ತೊಮ್ಮೆ ನಿಯೋಜಿಸಲ್ಪಡುವರೆಂಬ ಈ ದೇವವಚನದ ತಾತ್ಪರ್ಯವೇನೆಂದೂ ಈ ಭವಿಷ್ಯವಾಣಿಯಲ್ಲಿ ಯಾರ ಬರುವಿಕೆಯ ಕುರಿತು ಪ್ರಸ್ತಾಪಿಸಲಾಗಿದೆಯೆಂದೂ ಸಹಾಬಿಗಳು ವಿಚಾರಿಸಿದಾಗ ಪ್ರವಾದಿ ಮುಹಮ್ಮದ್(ಸ.) ಅವರು ಅದಕ್ಕೆ ನೀಡಿದ ವಿವರಣೆ ಸಹೀಹ್ ಬುಖಾರಿಯಲ್ಲಿ ಈ ರೀತಿ ಉಲ್ಲೇಖಿಸಲ್ಪಟ್ಟಿದೆ : "ಸತ್ಯ ವಿಶ್ವಾಸ ಸುರಯ್ಯ (ಕಾರ್ತಿಕ) ನಕ್ಷತ್ರದೆಡೆಗೆ ಏರಿ ಹೋಗುವ ಆ ಕಾಲದಲ್ಲಿ (ಅಂದರೆ ಈಮಾನ್ ಭೂಮಿಯಿಂದ ಅಂತರ್ಧಾನವಾಗುವ ವೇಳೆ) ಫಾರ್ಸಿ ವಂಶದ ಓರ್ವ ವ್ಯಕ್ತಿ ಅಥವಾ ಕೆಲವು ವ್ಯಕ್ತಿಗಳು ಅದನ್ನು ವಾಪಾಸು ತರುವರು."

**(ಬುಖಾರಿ-ಕಿತಾಬುತ್ತಫ್‌ಸೀರ್)**

"ಸಹೀಹ್ ಬುಖಾರಿ" ಮತ್ತು "ಸಹೀಹ್ ಮುಸ್ಲಿಂ" ಗ್ರಂಥಗಳಲ್ಲಿ ಉಲ್ಲೇಖವಿರುವ ಹಝ್ರತ್ ಪೈಗಂಬರರ(ಸ.) ಮತ್ತೊಂದು ಪ್ರಸ್ತಾಪನೆ ಈ ರೀತಿಯಿದೆ: "ನನ್ನ ಪ್ರಾಣವು ಯಾರ ಕೈಯಲ್ಲಿದೆಯೋ ಅವನಾಣೆ, ಖಂಡಿತವಾಗಿಯೂ ಇಬ್ನುಮರ್‌ಯಂ ನಿಮ್ಮಲ್ಲಿ ಅವತರಿಸುವರು." ಮತ್ತೊಂದೆಡೆ : "ನಿಮಗೆ ಇಮಾಂ ಆಗಿ ನಿಮ್ಮಿಂದಲೇ ಇಬ್ನುಮರ್‌ಯಂ ಅವತರಿಸುವ ವೇಳೆ ನಿಮ್ಮ ಸ್ಥಿತಿ ಹೇಗಿರಬಹುದು!" ಎಂದೂ ಪೈಗಂಬರ್(ಸ.) ಹೇಳಿರುವರು. **(ಬುಖಾರಿ ಮತ್ತು ಮುಸ್ಲಿಂ)**

> ***ಭವಿಷ್ಯ ವಾಣಿಗಳನ್ನು ಸುಳ್ಳಾಗಿಸುವವರು***
>
> *ಭವಿಷ್ಯವಾಣಿಗಳಲ್ಲಿ ಹೇಳಲಾಗಿರುವ ಕಾಲವು ಕಳೆದು ಹೋದರೂ ಮಹ್‌ದೀ ಇಮಾಂ ಇನ್ನೂ ಆಗಮಿಸಿಲ್ಲವೆಂಬ (?) ನಿರಾಶೆಯಿಂದ ಸಮುದಾಯದ ಉಲಮಾಗಳು ಈಗೀಗ ಇಮಾಂ ಮಹ್‌ದಿಯ ಕುರಿತು ಏನೂ ಪ್ರಸ್ತಾಪಿಸುವುದೇ ಇಲ್ಲ. ನೇತಾರರೂ ಮುಖಂಡರೂ ಸಹ ಆ ಬಗ್ಗೆ ಚಕಾರವೆತ್ತುವುದಿಲ್ಲ. ಸಮುದಾಯವನ್ನು ನಾವು ಸರಿಪಡಿಸುತ್ತೇವೆ ಎಂದು ಹೇಳುತ್ತಾ ರಾಜಕೀಯದ ಮೊರೆಹೊಕ್ಕಿರುವ ಕೆಲವು ನೂತನ ಮಾನವ ನಿರ್ಮಿತ ಪಂಗಡದವರಂತೂ ಮಹ್‌ದೀ ಇಮಾಂ ಬರುವ ಆವಶ್ಯಕತೆಯೇ ಇಲ್ಲವೆಂದು ಹೇಳತೊಡಗಿದ್ದಾರೆ ! (ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್)*

ಮುಸ್ಲಿಂ ಸಮುದಾಯದ ಧಾರ್ಮಿಕ ಅಧಃಪತನದ ಕುರಿತು ವಿವರಿಸಲಾದ ಅನೇಕ ಭವಿಷ್ಯವಾಣಿಗಳು ಹದೀಸ್ ಗ್ರಂಥಗಳಲ್ಲಿವೆ. ಅಂತಹ ಅವನತಿಯ ಕಾಲದಲ್ಲಿ ಮುಹಮ್ಮದ್ ಪೈಗಂಬರ್(ಸ)ರವರ ಸಮುದಾಯವನ್ನು ಅಧಃಪತನದಿಂದ ಪಾರುಮಾಡಲು ಓರ್ವ ಮಹಾಪುರುಷನನ್ನು ಅಲ್ಲಾಹು ಕಳುಹಿಸುವನೆಂದು ಈ ಮೇಲಿನ ಭವಿಷ್ಯವಾಣಿಗಳಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ.

ಬರಲಿರುವ ಆ ಮಹಾತ್ಮರನ್ನು ಮಹ್‌ದೀ, ಮಸೀಹ್, ಈಸಾ, ಇಬ್ನು ಮರ್‌ಯಂ, ಅಬ್ದುಲ್ಲಾಹ್, ಖಲೀಫತುಲ್ಲಾಹ್ ಎಂಬಿತ್ಯಾದಿಯಾಗಿ ಪೈಗಂಬರರು ಹೆಸರಿಸಿದ್ದಾರೆ. ಇವೆಲ್ಲಾ ಬರಲಿರುವ ಆ ಮಹಾನುಭಾವರ ಗುಣನಾಮಗಳು. ಆದರೂ ಅವರ ವ್ಯಕ್ತಿನಾಮ (ಇಸ್ಮ್) ಖುರ್‌ಆನಿನಲ್ಲಿ ಪ್ರಸ್ತಾಪಿಸಿರುವಂತೆ "ಅಹ್ಮದ್" ಆಗಿರುವುದು ಎಂದು ಸಹ ಪೈಗಂಬರ್ (ಸ) ತಿಳಿಸಿಕೊಟ್ಟಿದ್ದಾರೆ.

ಭವಿಷ್ಯವಾಣಿಗಳಲ್ಲಿ ಹಲವಾರು ಗುಣನಾಮಗಳನ್ನು ಸೂಚಿಸಲಾಗಿರುವುದರಿಂದ ಆ ಹೆಸರಿನ ಪ್ರತ್ಯಪ್ರತ್ಯೇಕ ವ್ಯಕ್ತಿಗಳು ಬರುವರೆಂದು ಭಾವಿಸುವುದು ಯಾವತ್ತೂ ಸರಿಯಾಗಲಾರದು. ಮಾತ್ರವಲ್ಲ, ಈಸಾ ಮತ್ತು ಮಹ್‌ದೀ ಬೇರೆ ಬೇರೆ ವ್ಯಕ್ತಿಗಳಲ್ಲ ಎಂದು ಸಹ ಪೈಗಂಬರರು ಸ್ಪಷ್ಟವಾಗಿ ಹೇಳಿದ್ದಾರೆ. (ಇಬ್ನು ಮಾಜಃ)

ಹಿಜರಿ ಶಕ 13ನೇ ಶತಮಾನದ ಕೊನೆಯಲ್ಲಿ ಮುಸ್ಲಿಂ ಸಮುದಾಯದ ಅವನತಿಯು ಪರಾಕಾಷ್ಠೆಗೇರುವ ಸಂದರ್ಭದಲ್ಲಿ, ಅಂದರೆ 14ನೇ ಶತಮಾನದ ಪ್ರಾರಂಭದಲ್ಲಿ ಸಮುದಾಯದ ಉದ್ಧಾರಕ್ಕಾಗಿ ಮಹ್‌ದೀ ಇಮಾಂ(ಅ)ರನ್ನು ಅಲ್ಲಾಹು ನಿಯುಕ್ತಿಗೊಳಿಸುವನೆಂದು ಸಹ

ಪೈಗಂಬರ್(ಸ)ರ ಭವಿಷ್ಯ ವಾಣಿಗಳು ಸ್ಪಷ್ಟಪಡಿಸುತ್ತವೆ.

### ಕಣ್ಣೀರಲ್ಲಿ ಕೈತೊಳೆಯುತ್ತಿರುವ ಮುಸ್ಲಿಂ ಜಗತ್ತು

ಪ್ರವಾದಿ ಮುಹಮ್ಮದ್ (ಸ) ಅವರು ಭವಿಷ್ಯ ನುಡಿದ ಭಯಾನಕವಾದ ಅವನತಿಯ ಆ ದಿನಗಳು ಮುಸ್ಲಿಂ ಜಗತ್ತನ್ನು ಆವರಿಸಿರುವುದು ಸರ್ವವೇದ್ಯವಾದ ಒಂದು ಸಂಗತಿಯಾಗಿದೆ. ಹಿಜರಿ ಶಕ 14ನೇ ಶತಮಾನವು ಕಳೆದು ಇದೀಗ 15ನೇ ಶತಮಾನಕ್ಕೆ ನಾವು ಪ್ರವೇಶಿಸಿದ್ದೇವೆ. 15ನೇ ಶತಮಾನದಲ್ಲೂ ಈಗಾಗಲೇ 19 ವರ್ಷಗಳು ಕಳೆದು ಹೋದವು. ಅಂದರೆ, ನಬಿವರ್ಯರು(ಸ) ಭವಿಷ್ಯವಾಣಿಗಳಲ್ಲಿ ಸೂಚಿಸಿರುವ ಕಾಲಘಟ್ಟವು ಕಳೆದು ಒಂದು ನೂರು ವರ್ಷಗಳಷ್ಟು ಕಾಲ ಹೆಚ್ಚಿಗೆ ಸಂದಿರುತ್ತದೆ. ಹಾಗಿದ್ದೂ ಅಲ್ಲಾಹನ ಕಡೆಯಿಂದ ಆಗಮಿಸಬೇಕಾದ ಆ ವಿಮೋಚಕನ ಬಗ್ಗೆ ಮುಸ್ಲಿಂ ಜಗತ್ತು ಚಿಂತಿಸುವುದಿಲ್ಲವೇಕೆ? ಭವಿಷ್ಯವಾಣಿಗಳಲ್ಲಿ ಹೇಳಲಾಗಿರುವ ಕಾಲವು ಕಳೆದು ಹೋದರೂ ಮಹ್‌ದೀ ಇಮಾಂ ಇನ್ನೂ ಆಗಮಿಸಿಲ್ಲವೆಂಬ (?) ನಿರಾಶೆಯಿಂದ ಸಮುದಾಯದ ಉಲಮಾಗಳು ಈಗೀಗ ಇಮಾಂ ಮಹ್‌ದಿಯ ಕುರಿತು ಏನೂ ಪ್ರಸ್ತಾಪಿಸುವುದೇ ಇಲ್ಲ. ನೇತಾರರೂ ಮುಖಂಡರೂ ಸಹ ಆ ಬಗ್ಗೆ ಚಕಾರವೆತ್ತುವುದಿಲ. ಸಮುದಾಯವನ್ನು ನಾವು ಸರಿಪಡಿಸುತ್ತೇವೆಂದು ಹೇಳುತ್ತಾ ರಾಜಕೀಯದ ಮೊರೆಹೊಕ್ಕಿರುವ ಕೆಲವು ನೂತನ ಮಾನವ ನಿರ್ಮಿತ ಪಂಗಡದವರಂತೂ ಮಹ್‌ದೀ ಇಮಾಂ ಬರುವ ಆವಶ್ಯಕತೆಯೇ ಇಲ್ಲವೆಂದು ಹೇಳತೊಡಗಿದ್ದಾರೆ! (ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್)

"(ಮುಸ್ಲಿಂ ಸಮುದಾಯವೇ,) ಮಾನವ ಕುಲದ ಒಳಿತಿಗಾಗಿ ಆರಿಸಲ್ಪಟ್ಟ ಅತ್ಯುತ್ತಮ ಸಮುದಾಯ ನೀವಾಗಿದ್ದೀರಿ" ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ (3:111). ಪ್ರಿಯ ಮುಸ್ಲಿಂ ಬಾಂಧವರೇ, ಪ್ರವಾದಿವರ್ಯರು (ಸ) ಜಗತ್ತಿನ ಮುಂದೆ ಅಭಿಮಾನಪೂರ್ವಕವಾಗಿ ಸಾದರಪಡಿಸಿದಂತಹ ಆ ಅತ್ಯುತ್ತಮ ಸಮುದಾಯಕ್ಕೆ ಇಂದು ಏನು ಸಂಭವಿಸಿದೆ? ಯಹೂದಿ-ನಸಾರಾಗಳ ಮತ್ತು ಇತರ ಎಲ್ಲ ಶಕ್ತಿಗಳ ಕ್ರೂರವಾದ ಆಕ್ರಮಣಕ್ಕೆ ಬಲಿಯಾಗಿ ಅವರಿಗೆ ದಾಸರಾಗಿ ಹೋದ ಮುಸ್ಲಿಂ ದೇಶಗಳು! ಅನೇಕ ಪಕ್ಷ ಪಂಗಡಗಳಾಗಿ ಹೋಳಾಗಿ ಹೋಗಿರುವ ಹಾಗೂ ಪರಸ್ಪರ ಘೋರ ಸಮರ ಹೂಡಿ ಸ್ವಯಂ ನಾಶಹೊಂದುತ್ತಿರುವ ಮುಸ್ಲಿಂ ಸಹೋದರರು; ನಲ್ವತ್ತಕ್ಕಿಂತಲೂ ಅಧಿಕವಿರುವ ಮುಸ್ಲಿಂ ರಾಷ್ಟ್ರಗಳು ಕೈಕಟ್ಟಿ ನೋಡುತ್ತಾ ನಿಂತಿರುವಂತೆಯೇ ಸಾಮೂಹಿಕ ಹತ್ಯಾಕಾಂಡಕ್ಕೂ, ಘೋರ ಪೀಡನೆಗಳಿಗೂ ಬಲಿಯಾಗುತ್ತಿರುವ ಮುಸ್ಲಿಂ ಯುವಪೀಳಿಗೆ; ಮಾನಭಂಗಕ್ಕೆ ಗುರಿಯಾಗುತ್ತಿರುವ ಮುಸ್ಲಿಂ ವನಿತೆಯರು; ಐಶ್ವರ್ಯದ ದುಂದುವೆಚ್ಚದಲ್ಲಿ ಮೈಮರೆತಿರುವ ರಾಜಕುಮಾರರು; ಮತ್ತೊಂದೆಡೆ ದಾರಿದ್ರ್ಯದ ಕ್ರೂರ ದವಡೆಗೆ ಸಿಲುಕಿ ಹಸಿದು ಸಾಯುತ್ತಿರುವ ಮುಸ್ಲಿಂ ಹಸುಳೆಗಳು. ಈ ರೀತಿ ಕಣ್ಣೀರು ಮತ್ತು ರಕ್ತದ ಮಡುವಿನಲ್ಲಿ ಗೋಳಾಡುತ್ತಿರುವ ಮುಸ್ಲಿಂ ಸಮುದಾಯವು ಇಂದು ವರ್ಣಿಸಲಸಾಧ್ಯವಾದ ರೀತಿಯಲ್ಲಿ ದುಃಖ ದುಮ್ಮಾನಗಳ ದುರಂತ ಭೂಮಿಯಾಗಿ ಮಾರ್ಪಟ್ಟಿದೆ. ಹತಾಶರಾಗಿ ತಮ್ಮ ನೋವನ್ನು ತಾವೇ ಅದುಮಿ ಸಹಿಸುತ್ತಿರುವ, ಬೆಂದು ಬೆಂಡಾಗಿರುವ, ಬಿಕ್ಕಿ ಬಿಕ್ಕಿ ಅಳುತ್ತಿರುವ ಸಮುದಾಯದ ಈ ಅವಸ್ಥೆಯು ಓರ್ವ ದೇವ ನಿಯೋಜಿತ ವಿಮೋಚಕನ ಕಡೆಗೆ ನಮ್ಮ ಗಮನವನ್ನು ಸೆಳೆಯದಿದ್ದರೆ, ಅಕಟಾ! ನಮ್ಮ ಈಮಾನಿಗೆ ಏನು ಸಂಭವಿಸಿದೆ? ಪ್ರಿಯ ಸಹೋದರರೇ, ಮಾನವ ನಿರ್ಮಿತವಾದ ಯಾವ ಸಂಘಟನೆಯಿಂದ ನಮಗೆ ರಕ್ಷಣೆ ಸಿಗುವುದೆಂಬ ನಿರೀಕ್ಷೆಯಲ್ಲಿ ನೀವು ಇದ್ದೀರಿ?

### ಮುಹಮ್ಮದ್ ಪೈಗಂಬರರ ಸಮುದಾಯವನ್ನು ಅಲ್ಲಾಹು ಕೈಬಿಟ್ಟಿಲ್ಲ

ಹಝ್ರತ್ ಮುಹಮ್ಮದ್ (ಸ) ಅವರ ಅಭಿಮಾನದ ಮುದ್ರೆಯಾಗಿರುವ ಮುಸ್ಲಿಂ ಉಮ್ಮತ್ತನ್ನು ಕರುಣಾಮಯನಾದ ಅಲ್ಲಾಹು ಯಾವತ್ತೂ ಕೈಬಿಡಲಾರ. ದಿನೇ ದಿನೇ ಹೆಚ್ಚುತ್ತಿರುವ ಅಂತ್ಯವಿಲ್ಲದ ಶಾಪಕ್ಕೆ ಮುಹಮ್ಮದ್ ಪೈಗಂಬರರ ಸಮುದಾಯವನ್ನು ಅಲ್ಲಾಹನು ಎಂದಿಗೂ ಗುರಿಪಡಿಸಲಾರ. ಅಲ್ಲಾಹನ ಅತಿದೊಡ್ಡ ಅನುಗ್ರಹವಾದ ಪ್ರವಾದಿತ್ವವೂ ದಿವ್ಯಜ್ಞಾನ ಲಬ್ಧಿಯೂ ಪುನರುದ್ಧಾರ ವ್ಯವಸ್ಥೆಯೂ ಇನ್ನು ಉಂಟಾಗುವುದು ಮುಸ್ಲಿಂ ಸಮುದಾಯದಲ್ಲಿ ಮಾತ್ರ. ಪ್ರಿಯ ಮುಸ್ಲಿಂ ಸಹೋದರರೇ, ನೀವು ಸಮಾಧಾನಚಿತ್ತರಾಗಿ ತುಸು ಆಲೋಚಿಸಿ ನೋಡಿರಿ. ವಿನಾಶದೆಡೆಗೆ ಸಾಗುವ ಜನ ಸಮುದಾಯಗಳನ್ನು, ತನ್ನ ಸಂದೇಶವಾಹಕರನ್ನು ಕಳುಹಿಸಿ ಕಾಪಾಡುವ ಪದ್ಧತಿ ಕ್ರಮ ಅಲ್ಲಾಹನದು. ಅವನು ತನ್ನ ಅತ್ಯಂತ ಶ್ರೇಷ್ಠ ಪ್ರವಾದಿಯ ಅತ್ಯಂತ ಶ್ರೇಷ್ಠ ಸಮುದಾಯದಲ್ಲಿ ತನ್ನ ವಾಗ್ದಾನ ಪ್ರಕಾರ ತಕ್ಕ ಸಮಯದಲ್ಲೇ ಓರ್ವ ಮಹಾತ್ಮರನ್ನು ಕಳುಹಿಸಿ ಈ ಸಮುದಾಯದ ವಿಮೋಚನೆಗೆ ಹಾಗೂ ಅದರ ಪುನರುತ್ಥಾನಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಿರುತ್ತಾನೆ. "ಒಬ್ಬ ಸಂದೇಶ ವಾಹಕನನ್ನು ಕಳುಹಿಸದೆ ನಾವು ಶಿಕ್ಷೆ ಇಳಿಸುವುದಿಲ್ಲ" (17:16) ಎಂಬ ಅಲ್ಲಾಹನ ವಚನವನ್ನು ಗಮನಿಸಿರಿ.

### ಏಕಮಾತ್ರ ಪರಿಹಾರ

ಇಂದಿನ ಈ ದುರವಸ್ಥೆಯ ಕುರಿತು ಪ್ರವಾದಿ (ಸ) ಎಷ್ಟೊಂದು ಸ್ಪಷ್ಟವಾದ ಮುನ್ಸೂಚನೆಗಳನ್ನು ನೀಡಿದ್ದಾರೆ! ಅದಕ್ಕಿಂತಲೂ ಸ್ಪಷ್ಟವಾಗಿ ಅದರ ಪರಿಹಾರ ಮಾರ್ಗವನ್ನು ಸಹ ಆ ಮಹಾನ್ ಪ್ರವಾದಿ (ಸ) ಸೂಚಿಸಿದ್ದಾರೆ. ಅದುವೇ ಮಹ್‌ದೀ ಮಸೀಹ್‌ರ ಆಗಮನದ ಬಗ್ಗೆ ವಾಗ್ದಾನ. ಮುಸ್ಲಿಂ ಸಮುದಾಯದ ಚಿಕ್ಕ ಮಕ್ಕಳಿಗೂ ಸಹ ತಿಳಿದಿರುವ ಈ ಒಂದು ಪರಿಹಾರ ಮಾರ್ಗವಲ್ಲದೆ ಬೇರೆ ಯಾವ ಸೂತ್ರವನ್ನು ನಬಿವರ್ಯರು ನಮಗೆ ನಿರ್ದೇಶಿಸಿದ್ದಾರೆ? ಯಾವುದಾದರೂ ಪಂಗಡದವರನ್ನಾಗಲೀ ಯಾವುದೇ ಸಂಘಟನೆಯನ್ನಾಗಲೀ ಯಾವ ಶಂಸ್-ಖಮರ್ ಪಂಡಿತರನ್ನಾಗಲೀ ಪರಿಹಾರಕ್ಕಾಗಿ ನಬಿವರ್ಯರು ನಮ್ಮ ಮುಂದಿಟ್ಟಿಲ್ಲ. ಸೂಚಿಸಲ್ಪಟ್ಟ ಪರಿಹಾರ ಒಂದೇ ಒಂದು. ಅದು ಮಹ್‌ದೀ ಮಸೀಹ್‌ರ ಆವಿರ್ಭಾವ. ಬರಲಿರುವ ಆ ಮಹಾತ್ಮರು ಪ್ರವಾದಿ ಯಾಗಿರುವರೆಂದು ಸಹ ನಬಿವರ್ಯರು ಸ್ಪಷ್ಟವಾಗಿ ಹೇಳಿಕೊಟ್ಟಿದ್ದಾರೆ.

ಅನೇಕ ಪಕ್ಷ ಪಂಗಡಗಳಾಗಿ ಹೋಳಾಗಿ ಹೋಗಿರುವ ಹಾಗೂ ಪರಸ್ಪರ ಪೈಪೋಟಿ ನಡೆಸುತ್ತಿರುವ ಇಂದಿನ ಈ ಉಲಮಾಗಳಿಂದಾಗಲೀ ಯಾವುದಾದರೂ ಮಾನವ ನಿರ್ಮಿತ ಸಂಘ-ಸಂಸ್ಥೆಗಳಿಂದಾಗಲೀ ಮುಸ್ಲಿಂ ಸಮುದಾಯವನ್ನು ಉದ್ಧರಿಸಲು ಸಾಧ್ಯವೆಂದು ಯಾರಾದರೂ ಭಾವಿಸಿದ್ದರೆ, ಅವರ ಆ ಭಾವನೆಗೆ ಇಸ್ಲಾಂ ನಿರ್ದೇಶಿಸುವ ತತ್ವಗಳೊಂದಿಗೆ ಯಾವುದೇ ಸಂಬಂಧವಿಲ್ಲ. ಸಮುದಾಯವನ್ನು ಪುನರುಜ್ಜೀವನಗೊಳಿಸುವ ಹಾಗೂ ಜನರನ್ನು ಅಲ್ಲಾಹನಿಗೆ

*ಯುಗವಾಣಿ*

*"ಯಾರ ಕೈಯಲ್ಲಿ ನನ್ನ ಪ್ರಾಣವಿದೆಯೋ ಆ ಸರ್ವಶಕ್ತನ ಮೇಲೆ ಆಣೆ ಹಾಕಿ ನಾನು ಹೇಳುತ್ತೇನೆ-ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅವರು ವಾಗ್ದಾನ ಮಾಡಿರುವ ಮಸೀಹ್ ಮತ್ತು ಮಹ್‌ದೀ ನಾನೇ ಆಗಿರುವೆನೆಂದು ದಿವ್ಯ ಬೋಧನೆಗಳ ಮೂಲಕ ಅಲ್ಲಾಹು ನನಗೆ ತಿಳಿಸಿರುತ್ತಾನೆ. ....'ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್' ಎಂಬುದೇ ನನ್ನ ವಿಶ್ವಾಸದ ಬುನಾದಿಯಾಗಿದೆ. ಆ ದಿವ್ಯಾತ್ಮರು (ಮುಹಮ್ಮದ್ ಪೈಗಂಬರ್-ಸ-) ಖಾತಮನ್ನಬಿಯ್ಯೀನ್ ಎಂದು ನಾನು ಸುದೃಢವಾಗಿ ನಂಬುತ್ತೇನೆ. ನನ್ನ ಈ ಪ್ರಸ್ತಾಪನೆಗಳು ಸತ್ಯವೆಂಬ ಬಗ್ಗೆ ಅಲ್ಲಾಹನಿಗೆ ಎಷ್ಟು ನಾಮಗಳಿವೆಯೋ ಅಷ್ಟೂ ಸಲ, ನಬಿವರ್ಯರಿಗೆ(ಸ) ಎಷ್ಟು ಮಹಾತ್ಮೆಗಳಿವೆಯೋ ಅಷ್ಟೂ ಸಲ ಅಲ್ಲಾಹನ ಹೆಸರಿನಲ್ಲಿ ನಾನು ಪ್ರಮಾಣ ಮಾಡುತ್ತೇನೆ. ಅಲ್ಲಾಹನ ಮತ್ತು ಅವನ ರಸೂಲರ ಆಜ್ಞೆಗಳಿಗೆ ವಿರುದ್ಧವಾಗಿ ನಾನು ಯಾವ ನಂಬಿಕೆಯನ್ನೂ ಹೊಂದಿರುವುದಿಲ್ಲ. ಯಾರಾದರೂ ಆ ರೀತಿ ಗ್ರಹಿಸಿದ್ದರೆ ಅದು ಅವರ ಕೇವಲ ತಪ್ಪು ತಿಳುವಳಿಕೆಯಾಗಿದೆ".*

***ಹಝ್ರತ್ ಮಿರ್ಝಾಗುಲಾಂ ಅಹ್ಮದ್(ಅ)***
***ವಾಗ್ದತ್ತ ಮಹ್‌ದೀ ಮಸೀಹ್.***

ಹತ್ತಿರಗೊಳಿಸುವ ಕಾರ್ಯವನ್ನು ಸಂಘಟನೆಗಳಿಗಾಗಲೀ ಸರಕಾರಗಳಿಗಾಗಲೀ ವಹಿಸಿಕೊಡುವ ಪದ್ಧತಿ ಅಲ್ಲಾಹನದ್ದಲ್ಲ. ಆ ಕಾರ್ಯ ನಿರ್ವಹಿಸಬೇಕಾದುದು ಅಲ್ಲಾಹನಿಂದ ದಿವ್ಯ ಸಂದೇಶ ಲಭಿಸುವ ಹಾಗೂ ಆಧ್ಯಾತ್ಮಿಕ ಜ್ಞಾನ ಹೊಂದಿರುವ ದೇವನಿಯುಕ್ತ ಮಹಾಪುರುಷರೆಂದು ಪವಿತ್ರ ಖುರ್‌ಆನ್ ಮತ್ತು ಹದೀಸ್‌ಗಳು ವ್ಯಕ್ತಪಡಿಸುತ್ತವೆ. ಇದು ಅಲ್ಲಾಹನ ದಿವ್ಯ ನಡವಳಿಕೆಯಾಗಿದೆ. "ಅಲ್ಲಾಹನ ನಡವಳಿಕೆ ಕ್ರಮದಲ್ಲಿ ನೀನು ಯಾವ ಮಾರ್ಪಾಟನ್ನೂ ಕಾಣಲಾರೆ"

(ಖುರ್‌ಆನ್ 35:44)

## ಒಂದು ದಿವ್ಯ ಸಂದೇಶ

ಪ್ರಿಯ ಮುಸ್ಲಿಂ ಬಾಂಧವರೇ, ಹಝ್ರತ್ ಮುಹಮ್ಮದ್ ಪೈಗಂಬರ್(ಸ.) ಅವರು ಪ್ರವಾದನಗೈದ, ಮೇಲೆ ವಿವರಿಸಿದ ಭವಿಷ್ಯವಾಣಿ ಯಥಾ ಸಮಯ ನೆರವೇರಿದೆಯೆಂದೂ ಅಧರ್ಮದ ಅಂಧಕಾರದಲ್ಲಿ ಮುಳುಗಿ ಹೋಗಿರುವ ಮನುಷ್ಯ ವಂಶವನ್ನು, ವಿಶಿಷ್ಟವಾಗಿ ಮುಸ್ಲಿಂ ಸಮುದಾಯವನ್ನು ಉದ್ಧರಿಸಲಿಕ್ಕಾಗಿ ಇಸ್ಲಾಂ ಧರ್ಮದಲ್ಲಿ ವಾಗ್ದಾನ ಮಾಡಲಾದ ಆ ಮಹಾಪುರುಷನ ಆಗಮನ ಉಂಟಾಗಿರುವುದೆಂದೂ ಶುಭವಾರ್ತೆಯನ್ನು ನಾವು ನಿಮ್ಮ ಮುಂದಿಡುತ್ತೇವೆ. ವಾಗ್ದಾನ ಮಾಡಲ್ಪಟ್ಟ ಮಹ್‌ದೀ ಮಸೀಹರ ಆಗಮನವಾಗಿ ಒಂದು ಶತಮಾನವೇ ಕಳೆದುಹೋದರೂ ಬಹುಸಂಖ್ಯಾತ ಮುಸ್ಲಿಂ ಸಮುದಾಯವು ಆ ಕಡೆ ಗಮನ ಹರಿಸಲಿಲ್ಲವೆಂಬುದು ದೌರ್ಭಾಗ್ಯವೇ ಸರಿ. ಅದರ ದುಷ್ಫಲವನ್ನು ಸಮುದಾಯ ಇಂದು ಅನುಭವಿಸುತ್ತಿದೆ. "ಒಬ್ಬ ಸಂದೇಶವಾಹಕನನ್ನು ಕಳುಹಿಸದೆ ನಾವು ಶಿಕ್ಷೆ ಇಳಿಸುವುದಿಲ್ಲ" (17:16) ಎಂಬ ಅಲ್ಲಾಹನ ಮುನ್ನೆಚ್ಚರಿಕೆಯ ವಚನವನ್ನು ಮತ್ತೊಮ್ಮೆ ಜ್ಞಾಪಿಸಿಕೊಳ್ಳಿರಿ.

*ಖಲೀಫ*

*ಸತ್ಯ ವಿಶ್ವಾಸಿಗಳಿಗೂ ಸತ್ಕರ್ಮಿಗಳಿಗೂ ಅಲ್ಲಾಹು ಭೂಮಿಯಲ್ಲಿ "ಖಿಲಾಫತ್"ನ ವಾಗ್ದಾನ ನೀಡಿರುವನು (ಖುರ್‌ಆನ್ 24:56). ಈ ಖಿಲಾಫತ್ ಇಂದು ಅಹ್ಮದಿಯಾ ಜಮಾಅತಿನಲ್ಲಿ ಅಲ್ಲದೆ ಬೇರೆ ಯಾವ ಮುಸ್ಲಿಂ ಪಂಗಡದಲ್ಲೂ ಇಲ್ಲ.*

*ಅಲ್ಲಾಹನ ಸಹಾಯ ಲಭಿಸುತ್ತಿರುವ ಪ್ರಭಾವಶಾಲಿಯಾದ ಓರ್ವ ಖಲೀಫ ಈ ಜಮಾಅತಿಗೆ ನೇತೃತ್ವ ನೀಡುತ್ತಿದ್ದಾರೆ.*

*ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ಅವರ ದಿವ್ಯ ಸಂದೇಶವನ್ನು ಭೂಗೋಳದ ಎಲ್ಲೆಡೆಗೂ ತಲಪಿಸಲು ಲೋಕದೆಲ್ಲೆಡೆ ವ್ಯಾಪಿಸಿರುವ ದೀನೀ ಪ್ರಬೋಧಕರು ಜಗತ್ತಿನಾದ್ಯಂತ ಪ್ರಚುರಪಡಿಸುತ್ತಿರುವ ಇಸ್ಲಾಮೀ ಸಾಹಿತ್ಯಗಳು, ಉಪಗ್ರಹ ವಾರ್ತಾ ಮಾಧ್ಯಮ(ಮುಸ್ಲಿಂ ಟೆಲಿವಿಜನ್ ಅಹ್ಮದಿಯಾ ಇಂಟರ್‌ನೇಶನಲ್-MTAI ), ಇಂಟರ್‌ನೆಟ್ ಮೂಲಕ ಇಸ್ಲಾಂ ಧರ್ಮ ಪ್ರಚಾರ ಮೊದಲಾದ ಅಂತರ್ರಾಷ್ಟ್ರೀಯವಾದ ಪ್ರವರ್ತನ ಶೃಂಖಲೆ ಖಲೀಫರ ಕೈಕೆಳಗೆ ಕಾರ್ಯವೆಸಗುತ್ತಿದೆ.*

ಈ ಕಾಲಘಟ್ಟದ ಧರ್ಮೋದ್ಧಾರಕರಾಗಿ ಅಲ್ಲಾಹನಿಂದ ನಿಯುಕ್ತರಾದ ಮಹ್‌ದೀ ಮಸೀಹ್ ಹಝ್ರತ್ ಅಹ್ಮದ್(ಅ) ಈ ರೀತಿ ಹೇಳುತ್ತಾರೆ : "ಯಾರ ಕೈಯಲ್ಲಿ ನನ್ನ ಪ್ರಾಣವಿದೆಯೋ ಆ ಸರ್ವಶಕ್ತನ ಮೇಲೆ ಆಣೆ ಹಾಕಿ ನಾನು ಹೇಳುತ್ತೇನೆ - ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅವರು ವಾಗ್ದಾನ ಮಾಡಿರುವ ಮಸೀಹ್ ಮತ್ತು ಮಹ್‌ದೀ ನಾನೇ ಆಗಿರುವೆನೆಂದು ದಿವ್ಯ ಬೋಧನೆಗಳ ಮೂಲಕ ಅಲ್ಲಾಹು ನನಗೆ ತಿಳಿಸಿರುತ್ತಾನೆ. ........ 'ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್' ಎಂಬುದೇ ನನ್ನ ವಿಶ್ವಾಸದ ಬುನಾದಿಯಾಗಿದೆ. ಆ ದಿವ್ಯಾತ್ಮರು (ಮುಹಮ್ಮದ್ ಪೈಗಂಬರ್-ಸ-) ಖಾತಮನ್ನಬಿಯ್ಯೀನ್ ಎಂದು ನಾನು ಸುದೃಢವಾಗಿ ನಂಬುತ್ತೇನೆ. ನನ್ನ ಈ ಪ್ರಸ್ತಾಪನೆಗಳು ಸತ್ಯವೆಂಬ ಬಗ್ಗೆ ಅಲ್ಲಾಹನಿಗೆ ಎಷ್ಟು ನಾಮ ಗಳಿವೆಯೇ ಅಷ್ಟೂ ಸಲ, ನಬಿವರ್ಯರಿಗೆ(ಸ.) ಎಷ್ಟು ಮಹಾತ್ಮೆಗಳಿ ವೆಯೇ ಅಷ್ಟೂ ಸಲ ಅಲ್ಲಾಹನ ಹೆಸರಿನಲ್ಲಿ ನಾನು ಪ್ರಮಾಣ ಮಾಡುತ್ತೇನೆ. ಅಲ್ಲಾಹನ ಮತ್ತು ಅವನ ರಸೂಲರ ಆಜ್ಞೆಗಳಿಗೆ ವಿರುದ್ಧ ವಾಗಿ ನಾನು ಯಾವ ನಂಬಿಕೆಯನ್ನೂ ಹೊಂದಿರುವುದಿಲ್ಲ. ಯಾರಾದರೂ ಆ ರೀತಿ ಗ್ರಹಿಸಿದ್ದರೆ ಅದು ಅವರ ಕೇವಲ ತಪ್ಪು ತಿಳುವಳಿಕೆಯಾಗಿದೆ."

**(ಕರಾಮಾತುಸ್ಸಾದಿಖೀನ್)**

ಅಲ್ಲಾಹನ ನಾಮದಲ್ಲಿ ಇಷ್ಟೊಂದು ಶಕ್ತಿಯುತವಾಗಿ ಪ್ರಮಾಣ ಮಾಡಿ ತನ್ನ ದಿವ್ಯ ದೌತ್ಯವನ್ನು ಸಾರಿದ ಹಝ್ರತ್ ಅಹ್ಮದ್(ಅ) ಅವರಿಂದ ಮುಖ ತಿರುಗಿಸುವವರು ಅದೆಷ್ಟು ಭಾಗ್ಯಹೀನರು! ಇಸ್ಲಾಂ ಧರ್ಮದ ಪುನರುದ್ಧಾರಕ್ಕಾಗಿ ಅಲ್ಲಾಹನು ನಿಯೋಗಿಸಿ ಕಳುಹಿಸಿರುವ ಮುಹಮ್ಮದ್ ಪೈಗಂಬರ್(ಸ.)ರವರ ಈ ವಿನೀತ ಶಿಷ್ಯನನ್ನು ನಿರಾಕರಿಸಿಕೊಂಡು ಮುಸ್ಲಿಂ ಸಮುದಾಯ ಸಾಗುತ್ತಿರುವುದಾದರೂ ಎಲ್ಲಿಗೆ?

# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ - 13

ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್
ಕನ್ನಡಕ್ಕೆ : M.P.I.

ಮುಸ್ಲಿಮರನ್ನು ಪರಸ್ಪರ ಭ್ರಾತೃತ್ವ ಸಂಬಂಧದಿಂದ ಒಂದುಗೂಡಿಸಿದ ನಂತರ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮದೀನದ ಇತರ ನಿವಾಸಿಗಳೊಡನೆಯೂ ಒಂದು ಮೈತ್ರಿ ಒಪ್ಪಂದವನ್ನು ರೂಪಿಸಿಕೊಂಡರು. ಮದೀನದವರಾದ ಯಹೂದ್ಯರ ಮುಖಂಡರನ್ನೂ ಇತರ ಅರಬ ಜನಾಂಗದ ನೇತಾರರನ್ನೂ ಒಟ್ಟುಸೇರಿಸಿ ಪೈಗಂಬರರು ಅವರೊಡನೆ ಹೀಗೆಂದರು : "ಮೊದಲು ಇಲ್ಲಿ ಎರಡು ಪಂಗಡದವರು ಮಾತ್ರ ಇದ್ದರು. ಯಹೂದ್ಯರು ಮತ್ತು ಮದೀನದ ಅರಬ್ ಗೊತ್ರದವರು. ಆದರೆ ಈಗ ಮುಸಲ್ಮಾನರ ಆಗಮನದಿಂದ ಮೂರು ಪಂಗಡಗಳಾಗಿವೆ. ಆದುದರಿಂದ ಮದೀನದ ಪ್ರಜೆಗಳೆಲ್ಲರೂ ಶಾಂತಿಯುತ ಸಹಬಾಳ್ವೆ ನಡೆಸುವಂತಾಗಲು ಈ ಮೂರು ಪಂಗಡದವರೊಳಗೆ ಪರಸ್ಪರ ಒಂದು ಶಾಂತಿ ಒಪ್ಪಂದ ಹಾಗೂ ನೀತಿ ಸಂಹಿತೆ ಉಂಟಾಗಬೇಕಾದುದು ಅಗತ್ಯವಾಗಿದೆ. ಇದರಿಂದ ನಾಡಿನಲ್ಲಿ ಶಾಂತಿ-ಸುವ್ಯವಸ್ಥೆ ನೆಲೆಗೊಳ್ಳಲು ಸಹಾಯಕವಾಗುತ್ತದೆ."

ಹಾಗೆ, ಮದೀನದ ಈ ಮೂರು ಪಂಗಡದವರೊಳಗೆ ಪರಸ್ಪರ ಐಕ್ಯಮತ್ಯದ ಒಂದು ಶಾಂತಿ ಒಪ್ಪಂದ ರೂಪುಗೊಂಡಿತು. ಆ ಒಡಂಬಡಿಕೆಯ ಒಕ್ಕಣೆ ಈ ರೀತಿಯಿತ್ತು :

"ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್(ಸ) ಮತ್ತು ಇಸ್ಲಾಂ ಧರ್ಮ ವಿಶ್ವಾಸಿಗಳಾದ ಮುಸ್ಲಿಮರು, ಹಾಗೂ ಈ ಒಡಂಬಡಿಕೆಗೆ ಸ್ವಇಚ್ಛೆಯಿಂದ ಬದ್ಧರಾಗುವ ಇತರ ಎಲ್ಲರೂ ಸೇರಿ ಪರಸ್ಪರ ಮಾಡಿಕೊಂಡ ಒಪ್ಪಂದ :

"ಮಕ್ಕದವರಾದ ಮುಸ್ಲಿಮರಲ್ಲಿ (ಮುಹಾಜಿರ್‌ಗಳಲ್ಲಿ) ಯಾರಾದರೂ ವಧಿಸಲ್ಪಟ್ಟರೆ ಅದರ ಹೊಣೆಗಾರಿಕೆ ಅವರ ಮೇಲೆಯೇ ಇರುವುದು. ಅದಕ್ಕೆ ಇತರರನ್ನು ಜವಾಬ್ದಾರರನ್ನಾಗಿ ಮಾಡಲಾಗದು.

## ಇಮಾಂ ಮಹ್‌ದಿಯ ಆವಿರ್ಭಾವ (28ನೇ ಪುಟದಿಂದ)

### ಅಹ್ಮದಿಯಾ ಮುಸ್ಲಿಂ ಜಮಾಅತ್

ಇಸ್ಲಾಂ ಧರ್ಮದ ಪುನರುದ್ಧಾರಕ್ಕಾಗಿ ಅಲ್ಲಾಹನಿಂದ ನಿಯುಕ್ತರಾದ ಮಹ್‌ದೀ ಇಮಾಂ ಹಝ್ರತ್ ಅಹ್ಮದ್(ಅ) ಅವರು ಅಲ್ಲಾಹನ ನಿರ್ದೇಶನ ಪ್ರಕಾರ "ಅಹ್ಮದಿಯಾ ಮುಸ್ಲಿಂ ಜಮಾಅತ್" ಎಂಬ ಒಂದು ಸಂಘಟನೆಯನ್ನು ಸ್ಥಾಪಿಸಿದರು. ಅದು ಯಥಾರ್ಥ ಇಸ್ಲಾಂ ಧರ್ಮವೇ ಅಲ್ಲದೆ ಬೇರೇನೂ ಅಲ್ಲ. ಕಾಲಾಂತರದಲ್ಲಿ ಮುಸ್ಲಿಂ ಸಮುದಾಯದಿಂದ ನಾಸ್ತಿಯಾಗಿ ಹೋದ ಇಸ್ಲಾಮಿನ ಯಥಾರ್ಥ ಆಧ್ಯಾತ್ಮಿಕ ಚೈತನ್ಯವನ್ನು ಭೂಲೋಕದಲ್ಲಿ ಮರಳಿ ಪ್ರತಿಷ್ಠಾಪನೆಗೊಳಿಸಲು ಮಹ್‌ದೀ ಇಮಾಮರ ಮೂಲಕ ಸ್ಥಾಪನೆಗೊಂಡ ಅಹ್ಮದಿಯಾ ಜಮಾಅತಿಗೆ ಮಾತ್ರವೇ ಸಾಧ್ಯ.

ಅಶ್ರಫುಲ್ ಖಲ್‌ಖ್ ಮುಹಮ್ಮದ್ ಮುಸ್ತಫಾ(ಸ) ಅವರ ಅನುಗ್ರಹೀತ ಸಮುದಾಯವು ನಾಶವಾಗಬೇಕಾದ ಸಮುದಾಯವಲ್ಲ. ಅದು ಸಮಸ್ತ ಲೋಕವನ್ನು ಜಯಿಸಬೇಕಾದ ಸಮುದಾಯವಾಗಿದೆ. (ಖುರ್‌ಆನ್ 9:33). ಆ ಕಾರ್ಯ ಅಲ್ಲಾಹನಿಂದ ನಿಯೋಜಿತರಾದ ಮಹ್‌ದೀ ಇಮಾಂ ಸ್ಥಾಪಿಸಿದ ಜಮಾಅತಿನ ಮೂಲಕ ಮಾತ್ರವೇ ಸಾಧ್ಯ. ಸತ್ಯವಿಶ್ವಾಸಿಗಳಿಗೂ ಸತ್ಕರ್ಮಿಗಳಿಗೂ ಅಲ್ಲಾಹು ಭೂಮಿಯಲ್ಲಿ "ಖಿಲಾಫತ್"ನ ವಾಗ್ದಾನ ನೀಡಿರುವನು.(ಖುರ್‌ಆನ್24:56). ಈ ಖಿಲಾಫತ್ ಇಂದು ಅಹ್ಮದಿಯಾ ಜಮಾಅತಿನಲ್ಲಿ ಅಲ್ಲದೆ ಬೇರೆ ಯಾವ ಮುಸ್ಲಿಂ ಪಂಗಡದಲ್ಲೂ ಇಲ್ಲ. ಸತ್ಯ ವಿಶ್ವಾಸಿಗಳಿಗೆ ಅಲ್ಲಾಹು ವಾಗ್ದಾನ ಮಾಡಿರುವ ಖಿಲಾಫತ್ ವ್ಯವಸ್ಥೆಗೆ ಬುನಾದಿ ಹಾಕಿಕೊಂಡೇ ಹಝ್ರತ್ ಅಹ್ಮದ್(ಅ) ದಿವಂಗತರಾದುದು. ಯಥಾರ್ಥ ಇಸ್ಲಾಮಿಕ ಖಿಲಾಫತ್ ವ್ಯವಸ್ಥೆ ಈ ಜಮಾಅತಿನಲ್ಲಿದೆ. ಇದಲ್ಲದೆ ಮುಸ್ಲಿಮರಿಗೆ ಬೇರೆ ಯಾವ ರಕ್ಷಾ ಮಾರ್ಗವೂ ಇರುವುದಿಲ್ಲ.

ಅಲ್ಲಾಹನ ಸಹಾಯ ಲಭಿಸುತ್ತಿರುವ ಪ್ರಭಾವಶಾಲಿಯಾದ ಓರ್ವ ಖಲೀಫ ಈ ಜಮಾಅತಿಗೆ ನೇತೃತ್ವ ನೀಡುತ್ತಿದ್ದಾರೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಅವರ ದಿವ್ಯ ಸಂದೇಶವನ್ನು ಭೂಗೋಳದ ಎಲ್ಲೆಡೆಗೂ ತಲಪಿಸಲು ಲೋಕದೆಲ್ಲೆಡೆ ವ್ಯಾಪಿಸಿರುವ ದೀನೀ ಪ್ರಬೋಧಕರು ಜಗತ್ತಿನಾದ್ಯಂತ ಪ್ರಚುರಪಡಿಸುತ್ತಿರುವ ಇಸ್ಲಾಮೀ ಸಾಹಿತ್ಯಗಳು, ಉಪಗ್ರಹ ವಾರ್ತಾ ಮಾಧ್ಯಮ (ಮುಸ್ಲಿಂ ಟೆಲಿವಿಜನ್ ಅಹ್ಮದಿಯಾ ಇಂಟರ್‌ನೇಶನಲ್ -MTAI), ಇಂಟರ್‌ನೆಟ್ ಮೂಲಕ ಇಸ್ಲಾಂ ಧರ್ಮ ಪ್ರಚಾರ ಮೊದಲಾದ ಅಂತರ್ರಾಷ್ಟ್ರೀಯವಾದ ಪ್ರವರ್ತನ ಶೃಂಖಲೆ ಖಲೀಫರ ಕೈಕೆಳಗೆ ಕಾರ್ಯವೆಸಗುತ್ತಿದೆ.

ಪ್ರಿಯ ಸಹೋದರರೇ, ತಪ್ಪು ತಿಳುವಳಿಕೆಯಿಂದಲೂ ಪೂರ್ವ ಗ್ರಹದಿಂದಲೂ ನೀವು ಅಹ್ಮದಿಯಾ ಜಮಾಅತಿನಿಂದ ದೂರ ಸರಿಯದಿರಿ. ನಿಮ್ಮ ಒಳಿತಿಗಾಗಿ ಅಲ್ಲಾಹು ಏರ್ಪಾಟು ಮಾಡಿರುವ ಈ ದಿವ್ಯ ಬಾಗಿಲನ್ನು ನಿಮ್ಮ ಕೈಗಳಿಂದಲೇ ನೀವು ಮುಚ್ಚಬೇಡಿರಿ. ಈ ಪವಿತ್ರ ಜಮಾಅತಿನ ಬಗ್ಗೆ ಅಧ್ಯಯನ ನಡೆಸಿ ಅದರಲ್ಲಿ ಪ್ರವೇಶಿಸಿರಿ. ಪಾವನವಾದ ಇಸ್ಲಾಂ ಧರ್ಮದ ಸೇವೆಗೈಯಲು ಒದಗಿಬಂದಿರುವ ಈ ಸೌಭಾಗ್ಯವನ್ನು ನೀವು ತಿರಸ್ಕರಿಸಬೇಡಿರಿ. ಇಸ್ಲಾಂ ಧರ್ಮಕ್ಕೆ ವಾಗ್ದಾನ ಮಾಡಲ್ಪಟ್ಟ ಸುನಿಶ್ಚಿತವಾದ ಸಾರ್ವತ್ರಿಕ ವಿಜಯಕ್ಕಾಗಿ ನಾವೆಲ್ಲರೂ ಸೇರಿ ಓರ್ವ ಖಲೀಫರ ನೇತೃತ್ವದಲ್ಲಿ ಒಟ್ಟಾಗಿ ಮುನ್ನಡೆಯೋಣ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹು ಹೇಳುತ್ತಾನೆ : "ಒಂದು ಸಮುದಾಯದವರು ತಮ್ಮ ಹೃದಯಗಳಲ್ಲಿ ಒಂದು ಮಾರ್ಪಾಟನ್ನು ಸ್ವಯಂ ಮಾಡದೆ ಅಲ್ಲಾಹನು ಅವರ ಸ್ಥಿತಿಯಲ್ಲಿ ಯಾವುದೇ ಬದಲಾವಣೆ ಮಾಡಲಾರ" (13:12)

ಅಲ್ಲಾಹು ನಮ್ಮೆಲ್ಲರನ್ನೂ ಸತ್ಯಪಥದಲ್ಲಿ ನಡೆಯಿಸಲಿ - ಆಮೀನ್.

-ವ ಆಖಿರು ದಅ್‌ವಾನಾ ಅನಿಲ್ ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್-*

ಅವರ ಪೈಕಿ ಬಂಧನದಲ್ಲಿರುವವರನ್ನು ಬಿಡುಗಡೆಗೊಳಿಸಬೇಕಾದ ಜವಾಬ್ದಾರಿಕೆಯೂ ಅವರದೇ ಆಗಿದೆ. ಅದೇ ರೀತಿ ಮದೀನದ ಮುಸ್ಲಿಮರೂ(ಅನ್ಸಾರ್) ಸಹ ತಮ್ಮ ಜೀವಕ್ಕೂ ಬಂಧಿಗಳ ಬಿಡುಗಡೆಯ ಕುರಿತೂ ಅವರೇ ಸ್ವತಃ ಹೊಣೆಗಾರರಾಗಿರುತ್ತಾರೆ. ಯಾರೇ ಆದರೂ ನಾಡಿನಲ್ಲಿ ಗಲಭೆಯುಂಟುಮಾಡಿ ಶಾಂತಿ ಭಂಗವಾಗುವಂತೆ ವರ್ತಿಸಿದರೆ ಹಾಗೂ ಸಾಮಾಜಿಕ ನೆಮ್ಮದಿಯನ್ನು ಭಂಗಪಡಿಸಿದರೆ ಅಂಥವರ ವಿರುದ್ಧ ಎಲ್ಲರೂ ಒಗ್ಗಟ್ಟಾಗಿ ಹೋರಾಡಿ ಶಾಂತಿ ಸ್ಥಾಪನೆಗೆ ನೆರವಾಗತಕ್ಕದ್ದು. ಅಂತಹ ಅಪರಾಧವೆಸಗುವವರು ಹತ್ತಿರದ ಸಂಬಂಧಿಕರಾದರೂ ಸ್ವಂತ ಮಗನೇ ಆಗಿದ್ದರೂ ಕೂಡ ಅವರ ವಿರುದ್ಧ ಹೋರಾಡಲು ಹಿಂಜರಿಯಬಾರದು.

"ಯುದ್ಧ ವೇಳೆಯಲ್ಲಿ ಅಮುಸ್ಲಿಮನಾದ ಓರ್ವ ವ್ಯಕ್ತಿ ಮುಸ್ಲಿಮನೊಬ್ಬನ ಕೈಯಿಂದ ಹತ್ಯೆಗೀಡಾದರೆ, ಹತ್ಯೆಗೀಡಾದವನ ಮುಸ್ಲಿಂ ಸಂಬಂಧಿಕರು ಅದಕ್ಕೆ ಪ್ರತೀಕಾರ ಮಾಡಬಾರದು. ಹಾಗೂ ಮುಸ್ಲಿಮರಿಗೆದುರಾಗಿ ವರ್ತಿಸುವಂತೆ ಅಮುಸ್ಲಿಮರಿಗೆ ಯಾರೂ ಸಹಕಾರ ನೀಡಬಾರದು. ಯಹೂದ್ಯರಲ್ಲಿ ಯಾರೇ ಆದರೂ ಈ ಕರಾರು ಶರ್ತಗಳಿಗೆ ಒಪ್ಪಿ, ಒಪ್ಪಂದದಲ್ಲಿ ಭಾಗಿಯಾದರೆ ಅಂಥವರಿಗೆ ಅಗತ್ಯವಿರುವ ಎಲ್ಲ ರೀತಿಯ ಸಹಾಯ ಸಹಕಾರಗಳನ್ನು ಎಲ್ಲರೂ ಸೇರಿ ನೀಡುವುದು ಹಾಗೂ ಯಹೂದ್ಯರಿಗೆ ಯಾವ ರೀತಿಯ ತೊಂದರೆಗಳೂ ಉಂಟಾಗದಂತೆ ನೋಡಿಕೊಳ್ಳುವುದು. ಅವರಿಗೆ ವಿರುದ್ಧವಾಗಿ ಬರುವ ಅವರ ಶತ್ರುಗಳಿಗೆ ಯಾರೂ ಸಹಾಯ ನೀಡತಕ್ಕದ್ದಲ್ಲ.

"ಮುಸ್ಲಿಮರಲ್ಲದ ಯಾರು ಸಹ ಮಕ್ಕದ ನಿವಾಸಿಗಳಿಗೆ ತಮ್ಮ ಮನೆಯಲ್ಲಿ ಆಶ್ರಯ ನೀಡಬಾರದು. ಅವರ ಸ್ವತ್ತು ಸಾಮಗ್ರಿಗಳನ್ನು ತಮ್ಮ ಬಳಿ ಅಮಾನತ್ತು ಇಟ್ಟುಕೊಳ್ಳುವುದೂ ಕೂಡದು. ಮುಸ್ಲಿಮರು ಮತ್ತು ಅಮುಸ್ಲಿಮರೊಳಗೆ ಯುದ್ಧವುಂಟಾದಲ್ಲಿ ಯಾರ ಪಕ್ಷದಲ್ಲೂ ಸೇರಕೂಡದು. ವಿನಾ ಕಾರಣ ಓರ್ವ ಮುಸ್ಲಿಮನನ್ನು ಯಾರಾದರೂ ಆಕ್ರಮಿಸಿದರೆ, ಅಂತಹ ದೌರ್ಜನ್ಯಕಾರರ ವಿರುದ್ಧ ಹೋರಾಡುವ ಹಕ್ಕು ಮುಸ್ಲಿಮರಿಗೆ ಇರುವುದು. ಹೊರಗಿನಿಂದ ಬಂದು ಮದೀನದ ಮೇಲೆ ಯಾರಾದರೂ ಆಕ್ರಮಣ ನಡೆಸುವರಾದರೆ, ಯಹೂದ್ಯರು ಮುಸ್ಲಿಮರ ಜತೆ ಸೇರಿ ಆ ವೈರಿಯೊಡನೆ ಯುದ್ಧ ಮಾಡಬೇಕಲ್ಲದೆ ಯುದ್ಧದ ವೆಚ್ಚಭರಿಸುವ ಸಲುವಾಗಿ ತಮ್ಮ ಪಾಲಿನ ವಂತಿಗೆಯನ್ನು ಸಹ ನೀಡಬೇಕು. ಮದೀನದ ಇತರ ಗೋತ್ರದವರೊಡನೆ ಒಪ್ಪಂದ ಮಾಡಿಕೊಂಡಿರುವ ಯಹೂದ್ಯ ಗೋತ್ರದವರ ಹಿತರಕ್ಷಣೆ ಮಾಡಲಾಗುವುದು. ಇತರ ಮುಸ್ಲಿಮರಿಗೆ ಎಂಬಂತೆಯೇ ಅವರಿಗೆ ಸಹ ಹಕ್ಕು ಮತ್ತು ಸ್ವಾತಂತ್ರ್ಯಗಳು ಇರುವವು. ಯಹೂದ್ಯರು ಮತ್ತು ಮುಸ್ಲಿಮರು ಅವರವರ ಧರ್ಮ ತತ್ವಗಳಲ್ಲಿ ಸ್ವತಂತ್ರವಾಗಿ ನಂಬಿಕೆಯನ್ನು ಹೊಂದಿಕೊಳ್ಳಬಹುದು. ಈ ಕರಾರು ಮೂಲಕ ಯಹೂದ್ಯರಿಗೆ ಏನೇನು ಸವಲತ್ತುಗಳೂ ಹಕ್ಕುಗಳೂ ಲಭಿಸುವುವೋ ಅವುಗಳು ಅವರ ವಾರೀಸುದಾರರಿಗೂ ಲಭಿಸತಕ್ಕದ್ದು.

"ಮದೀನ ನಿವಾಸಿಗಳಾದ ಯಾರು ಕೂಡ ಮುಹಮ್ಮದ್ ಪೈಗಂಬರರ ಅನುಮತಿಯಿಲ್ಲದೆ ಯುದ್ಧ ಘೋಷಣೆಯನ್ನು ಮಾಡಬಾರದು. ಆದರೆ ದೌರ್ಜನ್ಯಕ್ಕೊಳಗಾದ ಓರ್ವ ಪ್ರಜೆಯ ವ್ಯಕ್ತಿಗತ ಪ್ರತಿಭಟನಾ ಸ್ವಾತಂತ್ರ್ಯಕ್ಕೆ ಇದು ಬಾಧಕವಾಗತಕ್ಕದ್ದಲ್ಲ.

"ಯಹೂದ್ಯರು ಅವರ ಸಂಘಟನಾತ್ಮಕ ವ್ಯವಸ್ಥೆಗೆ ತಗಲುವ ಖರ್ಚು ವೆಚ್ಚಗಳನ್ನು ಸ್ವಯಂ ಭರಿಸಿಕೊಳ್ಳತಕ್ಕದ್ದು. ಅಂತೆಯೇ ಮುಸ್ಲಿಮರು ಸಹ ಅವರ ಸಾಮೂಹಿಕ ಆವಶ್ಯಕತೆಗಳನ್ನು ಅವರೇ ಸ್ವಯಂ ನಿರ್ವಹಿಸಿಕೊಳ್ಳತಕ್ಕದ್ದು. ಆದರೆ, ನಾಡಿನ ಸುರಕ್ಷತೆಯ ಪ್ರಶ್ನೆಯೆದ್ದಾಗ ಎಲ್ಲರೂ ಒಗ್ಗಟ್ಟಾಗಿ ಪರಸ್ಪರ ಹೊಂದಾಣಿಕೆಯಿಂದ ಶತ್ರುಗಳೊಡನೆ ಹೋರಾಡತಕ್ಕದ್ದು.

"ಈ ಕರಾರಿಗೆ ಬದ್ಧರಾಗುವ ಎಲ್ಲರೂ ಮದೀನವನ್ನು ಒಂದು ಪಾವನ ನಗರವಾಗಿ ಗ್ರಹಿಸತಕ್ಕದ್ದು. ಹೊರನಾಡಿನಿಂದ ಬಂದು ಮದೀನದವರ ಆಶ್ರಯದಲ್ಲಿ ಕಳೆಯುವವರಿಗೆ ಸಹ ಮದೀನದ ಪೌರತ್ವದ ಹಕ್ಕು ಇರುವುದು. ಅವರೊಡನೆ ಇತರ ಪ್ರಜೆಗಳೊಡನೆಯೆಂಬಂತೆಯೇ ವರ್ತಿಸಲಾಗುವುದು. ಆದರೆ, ಮದೀನದ ಯಾವನೇ ಪೌರನಿಗೂ ಯಾವ ಮಹಿಳೆಯನ್ನೂ ಆ ಮಹಿಳೆಯ ರಕ್ಷಕರ ಅಥವಾ ಸಂಬಂಧಿಕರ ಅನುಮತಿಯ ಹೊರತಾಗಿ ತನ್ನ ಆಶ್ರಯದಲ್ಲಿ ಇಟ್ಟುಕೊಳ್ಳುವ ಹಕ್ಕು ಇರುವುದಿಲ್ಲ. ಎಲ್ಲಾ ವ್ಯಾಜ್ಯಗಳೂ ವಿವಾದಗಳೂ ಅಲ್ಲಾಹನ ಪೈಗಂಬರರ ಸಮಕ್ಷಮದಲ್ಲಿ ತೀರ್ಮಾನಿಸಲ್ಪಡುವುವು.

"ಈ ಕರಾರಿಗೆ ಬದ್ಧರಾಗಿ ಸಹಿಮಾಡಿರುವ ಯಾವ ಪಂಗಡದವರೂ ಇನ್ನು ಮುಂದೆ ಮಕ್ಕದವರೊಡನೆಯಾಗಲೀ ಅವರ ಮಿತ್ರ ಪಕ್ಷದವರೊಡನೆಯಾಗಲೀ ಯಾವ ರೀತಿಯ ಕರಾರು ಯಾ ಒಪ್ಪಂದಗಳನ್ನೂ ಮಾಡಿಕೊಳ್ಳಬಾರದು. ಯಾಕೆಂದರೆ, ನಾಡಿನ ರಕ್ಷಣೆಗಾಗಿ ಹೋರಾಡಬೇಕಾದ ಸಂದರ್ಭವುಂಟಾದರೆ, ಪರಸ್ಪರ ಭಿನ್ನಾಭಿಪ್ರಾಯವಾಗಲೀ ಯಾವುದೇ ಅಡೆತಡೆಗಳಾಗಲೀ ಉಂಟಾಗಬಾರದಷ್ಟೆ. ಯಾವ ರೀತಿ ಒಬ್ಬೊಬ್ಬರಾಗಿ ಯುದ್ಧ ಮಾಡಲಾಗುವುದಿಲ್ಲವೋ ಅದೇ ರೀತಿ ಒಬ್ಬೊಬ್ಬರಾಗಿ ರಾಜಿ ಮಾಡಿಕೊಳ್ಳುವುದು ಸಹ ಸಾಮೂಹಿಕ ಹಿತದೃಷ್ಟಿಯಿಂದ ಸರಿಯಾಗಿರಲಾರದು. ಅದಾಗ್ಯೂ ಕಡ್ಡಾಯವಾಗಿ ಯುದ್ಧದಲ್ಲಿ ಭಾಗವಹಿಸುವಂತೆ ಯಾರ ಮೇಲೂ ಒತ್ತಡ ಹೇರತಕ್ಕದ್ದಲ್ಲ. ದೌರ್ಜನ್ಯ ಅಥವಾ ಅನ್ಯಾಯ ವೆಸಗುವ ಯಾವನೇ ವ್ಯಕ್ತಿಯನ್ನೂ ಖಂಡಿತವಾಗಿಯೂ ನ್ಯಾಯಾಂಗ ಪ್ರಕ್ರಿಯೆಗೆ ಗುರಿಪಡಿಸಲಾಗುವುದು. ನಿಶ್ಚಯವಾಗಿಯೂ ಸದ್ಧರ್ಮಿಗಳ ಮತ್ತು ನೀತಿವಂತರ ಸಂರಕ್ಷಕ ಅಲ್ಲಾಹನಾಗಿದ್ದಾನೆ. ಮುಹಮ್ಮದ್ ಅಲ್ಲಾಹನ ಪ್ರವಾದಿಯಾಗಿದ್ದಾರೆ." (ಇಬ್ನುಹಿಶಾಂ ಭಾಗ - 1, ಪುಟ - 178).

ಇದು ಒಡಂಬಡಿಕೆಯ ಶರ್ತಗಳ ಸಂಕ್ಷಿಪ್ತ ವಿವರಣೆ. ನ್ಯಾಯ ನಿಷ್ಠೆ ಮತ್ತು ಸದಾಚಾರವನ್ನು ಯಾವ ಕಾರಣಕ್ಕೂ ಕೈಬಿಡಲಾಗುವುದಿಲ್ಲವೆಂಬ ಅಂಶ ಈ ಸಂಧಿಪತ್ರದ ಒಕ್ಕಣೆಯಲ್ಲಿ ಎದ್ದು ಕಾಣುತ್ತದೆ. ಅತಿಕರ್ಮಿ ಯಾರಾಗಿದ್ದರೂ ಸರಿ, ಆತನೇ ಅದಕ್ಕೆ ಜವಾಬ್ದಾರನು. ಮುಹಮ್ಮದ್ ಪೈಗಂಬರ್(ಸ) ಮದೀನದ ಯಹೂದಿಯರೊಡನೆ ಮತ್ತು ಇತರ ಅಮುಸ್ಲಿಂ ಪ್ರಜೆಗಳೊಡನೆ ಸಹಾನುಭೂತಿಯಿಂದಲೂ ಸ್ನೇಹದಿಂದಲೂ ವರ್ತಿಸಲು ತೀರ್ಮಾನಿಸಿರುವುದಾಗಿಯೂ ಅವರೊಂದಿಗೆ ಸಾಹೋದರ್ಯದ ಸಹಬಾಳ್ವೆ ನಡೆಸಲು ಬಹಳ ಉತ್ಸುಕರಾಗಿದ್ದರೆಂದೂ ಈ ಮೇಲಿನ ಕರಾರು ಶರ್ತಗಳಿಂದ ಮನವರಿಕೆಯಾಗುತ್ತದೆ. ಇದಾದ ಬಳಿಕವೂ ಯಹೂದ್ಯರು ಸಂಘರ್ಷಕ್ಕಿಳಿದಿದ್ದರೆ ಅದರ ಪೂರ್ಣ ಹೊಣೆಗಾರಿಕೆ ಅವರ ಮೇಲೆಯೇ ಇರುವುದು. *

ಪ್ರತಿಕ್ರಿಯೆ

# ಮೌದೂದಿಗೆ ಮರಣ ದಂಡನೆ !

ಇಬ್ನು ಅಬ್ದುಲ್ಲಾಹ್

'ಸನ್ಮಾರ್ಗ' ವಾರ ಪತ್ರಿಕೆಯ 98ನೇ ಅಕ್ಟೋಬರ್ 25-31ರ ಸಂಚಿಕೆಯ 'ಕೇಳಿದಿರಾ? ಕೇಳಿ' ವಿಭಾಗದಲ್ಲಿ ಪ್ರಕಟವಾದ ಒಂದು ಪ್ರಶ್ನೆ:

*'ಖತಮೆ ನುಬುವ್ವತ್'ನ ಸಲುವಾಗಿ ಮೌ| ಮೌದೂದಿ, ಅತಾವುಲ್ಲಾ ಶಾ ಬುಖಾರಿ ಮೊದಲಾದವರು ಜೈಲಿಗೆ ಹೋಗಿರುವರು. ಈ 'ಖತಮೆ ನುಬುವ್ವತ್' ಎಂದರೇನು? ಈ ಮಹನೀಯರು ಅದಕ್ಕಾಗಿ ಮಾಡಿದ ಕಾರ್ಯವೇನು?*

ಮೇಲಿನ ಪ್ರಶ್ನೆಗೆ ನೀಡಲಾದ ಉತ್ತರದಲ್ಲಿ ಒಂದೆಡೆ ಈ ರೀತಿ ಬರೆಯಲಾಗಿದೆ : "........ ಅದರ ವಿರುದ್ಧ ಮೌಲಾನ ಮೌದೂದಿಯವರು 'ಕಾದಿಯಾನಿ ಮಸ್‌ಅಲ' (ಕಾದಿಯಾನಿ ಸಮಸ್ಯೆ) ಎಂಬ ಒಂದು ಪುಸ್ತಕ ಬರೆದರು. ಅದರ ವಿರುದ್ಧ ಪಾಕ್ ಸರಕಾರವು ಕಾದಿಯಾನಿಗಳ ಕುಮ್ಮಕ್ಕಿನಿಂದಾಗಿ ಕಾನೂನು ಕ್ರಮ ಕೈಗೊಂಡಿತು. ಏಕೆಂದರೆ ಅಲ್ಲಿನ ಆಡಳಿತ ವರ್ಗದಲ್ಲಿ ಬಹಳ ಮಂದಿ ಕಾದಿಯಾನಿಗಳೂ ಇದ್ದರು. ಈ ಪ್ರಕರಣದಲ್ಲಿ ಮೌ| ಮೌದೂದಿಯವರಿಗೆ ಮರಣದಂಡನೆಯನ್ನೂ ವಿಧಿಸಲಾಗಿತ್ತು."

ಯಾವುದೇ ಸಂಕೋಚವಿಲ್ಲದೆ ಸಾರಾ ಸಗಟು ಸುಳ್ಳು ಹೇಳುವುದು 'ಸನ್ಮಾರ್ಗ' ಪತ್ರಿಕೆಯ ಜಾಯಮಾನವಾಗಿ ಬಿಟ್ಟಿದೆ. ಆದರೆ ಅವರು ಬರೆಯುವ ಎಲ್ಲಾ ಸುಳ್ಳುಗಳನ್ನು ಓದುಗರು ನಂಬುವರೇ ಎಂಬ ಕುರಿತು ಅವರು ಯೋಚಿಸದೆ ಹೋದದ್ದು ಆಶ್ಚರ್ಯ. "ಕಾದಿಯಾನಿ ಮಸ್‌ಅಲ" ಎಂಬ ಒಂದು ಕಿರುಪುಸ್ತಕ ಬರೆದ ಕಾರಣಕ್ಕಾಗಿ ಪಾಕಿಸ್ತಾನ ಸರಕಾರ ಮೌದೂದಿಯವರಿಗೆ ಮರಣದಂಡನೆ ವಿಧಿಸಿದೆಯಂತೆ! 'ಸನ್ಮಾರ್ಗ' ಪತ್ರಿಕೆಯು ಅದರ ವಾಚಕರನ್ನು ಉದ್ದೇಶಪೂರ್ವಕ ತಪ್ಪುದಾರಿಗೆಳೆಯುತ್ತಿದೆ. ಅಥವಾ ಸಂಗತಿಗಳ ನಿಜಾಂಶ ತಿಳಿಯದೆ ಅವರು ಈ ರೀತಿ ಬರೆಯುತ್ತಿದ್ದಾರೆ ಎಂದು ಭಾವಿಸಬೇಕಾಗಿದೆ.

1953ರಲ್ಲಿ ಪಾಕಿಸ್ತಾನದಲ್ಲಿ ಅಹ್ಮದೀಯರ ವಿರುದ್ಧ ಅತಿ ಭಯಂಕರವಾದ ಗಲಭೆ ಸ್ಫೋಟಗೊಂಡಿತು. ಈ ಗಲಭೆಯ ಸೂತ್ರಧಾರಿ 'ಜಮಾತೆ ಇಸ್ಲಾಮಿ' ಎಂಬ ಹೆಸರಿನಿಂದ ಕರೆಯಲ್ಪಡುವ ಮೌದೂದಿ ಪಂಗಡದವರಾಗಿದ್ದರು. ಮೌ| ಮೌದೂದಿಯವರಿಗೆ ಮರಣದಂಡನೆ ವಿಧಿಸಲು ಕಾರಣವಾದ ಸಂಭವಗಳ ಹಿನ್ನೆಲೆ ಈ ಗಲಭೆಯೇ ಆಗಿದೆ. 1953ರಲ್ಲಿ ಈ ಪಕ್ಷದವರು ಅಹ್ರಾರ್ ಎಂಬ ಮತ್ತೊಂದು ಉಗ್ರವಾದಿ ಸಂಘದವರನ್ನೂ ತಮ್ಮೊಟ್ಟಿಗೆ ಸೇರಿಸಿಕೊಂಡು ಪಾಕಿಸ್ತಾನದಲ್ಲಿ ಅತ್ಯಂತ ಭಯಂಕರವಾದ ರೀತಿಯಲ್ಲಿ ಗಲಭೆ ಸೃಷ್ಟಿಸಿದರು. ಅಹ್ಮದೀಯರನ್ನು ಮುಸ್ಲಿಮರಲ್ಲವೆಂದು ಸರಕಾರ ಘೋಷಿಸಬೇಕು. ಸರ್ವ ರೀತಿಯಲ್ಲೂ ಅವರ ಮೇಲೆ ಬಹಿಷ್ಕಾರ ಹೇರಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟು ಸರಕಾರದ ವಿರುದ್ಧ ಇವರು ದಂಗೆಯೆದ್ದರು ಹಾಗೂ ಪಾಕಿಸ್ತಾನದ ಪಂಜಾಬಿನಲ್ಲಿ ಕೊಲೆ, ಸುಲಿಗೆ, ಕೊಳ್ಳಿಯಿಡುವಿಕೆ ಮುಂತಾದ ಸಮಾಜದ್ರೋಹ ಕೃತ್ಯಗಳಲ್ಲಿ ತೊಡಗಿದರು. ನಂತರ ಅದು ಪಾಕಿಸ್ತಾನದ ಇತರೆಡೆಗಳಲ್ಲೂ ವ್ಯಾಪಿಸಿ ಅತ್ಯಂತ ಭಯಂಕರ ರೂಪವನ್ನು ತಾಳಿತು. ಎಷ್ಟೋ ಅಹ್ಮದೀಯರನ್ನು ಈ ನರಪಿಶಾಚಿಗಳು ಕೊಂದು ಹಾಕಿದರು. ಅವರ ವ್ಯಾಪಾರ ಕೇಂದ್ರಗಳನ್ನೂ ಸೊತ್ತು ಸಂಪತ್ತನ್ನೂ ಕೊಳ್ಳೆ ಹೊಡೆದರು ಹಾಗೂ ಬೆಂಕಿಯಿಟ್ಟು ನಾಶಮಾಡಿದರು. ಗಲಭೆಯು ಪಾಕಿಸ್ತಾನದ ಕೇಂದ್ರ ಸರಕಾರವನ್ನೇ ನಡುಗಿಸಿತು. ಕೊನೆಗೆ ಬೇರೆ ದಾರಿಯಿಲ್ಲದೆ ಪಂಜಾಬ್ ಪ್ರಾಂತ್ಯದಲ್ಲಿ "ಮಾರ್ಷಲ್ ಲಾ" ಜಾರಿಗೊಳಿಸಲಾಯಿತು ಎಂಬುದು ಗಲಭೆಯ ಗಂಭೀರತೆಯನ್ನು ತೋರಿಸಿಕೊಡುತ್ತದೆ. ಸೇನಾಡಳಿತ ಜಾರಿಗೊಂಡ ಪರಿಣಾಮವಾಗಿ ಗಲಭೆಯು ಸ್ವಲ್ಪಮಟ್ಟಿಗೆ ಶಮನಗೊಂಡಂತಾದರೂ ಸಾವಿರಾರು ಜನರು ಸೇನೆಯ ಗುಂಡಿಗೆ ಬಲಿಯಾಗಬೇಕಾಯಿತು. ನಂತರ ಕೇಂದ್ರಾಡಳಿತದಲ್ಲಿದ್ದ ನಾಝಿಮುದ್ದೀನ್ ಸರಕಾರವನ್ನು ಸಹ ಅಂದಿನ ಗವರ್ನರ್ ಜನರಲ್ ಬರ್ಖಾಸ್ತುಗೊಳಿಸಿದರು. ಹಾಗೆ, ಇಡೀ ಪಾಕಿಸ್ತಾನವು ಮಿಲಿಟರಿ ಆಡಳಿತದ ಹಿಡಿತಕ್ಕೆ ಒಳಗಾಯಿತು.

ಇದು 1953ರಲ್ಲಿ ಪಾಕಿಸ್ತಾನದಲ್ಲಿ ರಂಗೇರಿದ ಸನ್ನಿವೇಶದ ಒಂದು ಸಂಕ್ಷಿಪ್ತ ಚಿತ್ರ. ಓರ್ವ ಆಂಗ್ಲ ಬರಹಗಾರ ಆ ಘಟನೆಗಳನ್ನು ಈ ರೀತಿ ವರ್ಣಿಸುತ್ತಾರೆ :

"ವ್ಯಾಪಕವಾದ ಜನ ಬೆಂಬಲದೊಂದಿಗೆ ರಾಜ್ಯದ ಉದ್ದಗಲಕ್ಕೂ ಸಾವಿರಾರು ದಾಂಧಲೆಕೋರರು ಒಂದು ಸಾಮೂಹಿಕ ನರಬೇಟೆಯ ರೀತಿಯಲ್ಲಿ ಉನ್ಮತ್ತರಾಗಿ ಹೊರಟರು. ದುರ್ಬಲರೂ ನಿಸ್ಸಹಾಯಕರೂ ಆದ ಅಹ್ಮದಿಯಾ ಪಂಗಡದವರ ವಿರುದ್ಧ ಹಾಗೂ ಅವರನ್ನು ಧಾರ್ಮಿಕವಾಗಿಯೂ ರಾಜಕೀಯವಾಗಿಯೂ ಬಹಿಷ್ಕರಿಸುವ ಆಜ್ಞೆ

ಹೊರಡಿಸದ ಕಾರಣಕ್ಕಾಗಿ ಸರಕಾರದ ವಿರುದ್ಧವೂ ಅವರು ಪೈಶಾಚಿಕ ರೀತಿಯಲ್ಲಿ ದಾಂಧಲೆಯೆಬ್ಬಿಸಿದರು...... ಕೊನೆಗೆ ಈ ಗಲಭೆಗಳನ್ನು ಬಡಿದಡಗಿಸಿದ್ದು ಇಸ್ಲಾಂ ಧರ್ಮದ ಹೆಸರಿನಲ್ಲಾಗಿರಲಿಲ್ಲ. ಬದಲಾಗಿ, ಸರಕಾರದ ಸುಭದ್ರತೆಯ ದೃಷ್ಟಿಯಿಂದಾಗಿತ್ತು. ಸಾಮಾನ್ಯ ವಿವೇಕ ಆವಶ್ಯಪಡುವುದು ಕೂಡ ಇದನ್ನೇ." (Islam in Modern History- Wilfred Cantwell Smith. page 232, 238)

1953ರ ಈ ಅಹ್ಮದಿಯಾ ವಿರುದ್ಧ ಗಲಭೆಯಲ್ಲಿ ಜಮಾತೆ ಇಸ್ಲಾಮಿ ಎಂಬ ಹೆಸರಿನ ಮೌದೂದಿ ಪಕ್ಷದವರು ಮತ್ತು ಅದರ ಸ್ಥಾಪಕ ನೇತಾರ ಅಬುಲ್ ಆಲಾ ಮೌದೂದಿಯವರು ನಿರ್ವಹಿಸಿದ ಪಾತ್ರವನ್ನು ಯಾರಿಂದಲೂ ನಿರಾಕರಿಸಲು ಸಾಧ್ಯವಿಲ್ಲ. ಗಲಭೆಯ ಕುರಿತು ವಿಚಾರಣೆ ನಡೆಸಲು ನಿಯುಕ್ತರಾದ ನ್ಯಾಯಾಧೀಶ ಮುಹಮ್ಮದ್ ಮುನೀರ್ ತಮ್ಮ ವರದಿಯಲ್ಲಿ ಅದನ್ನು ಪ್ರತ್ಯೇಕ ಉಲ್ಲೇಖಿಸಿದ್ದಾರೆ. ಗಲಭೆಯು ದಯನೀಯವಾಗಿ ಪರಾಭವಗೊಂಡ ಬಳಿಕ ಅದರ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಮೌದೂದಿಗಳು ಪ್ರಯತ್ನಿಸಿದರು. ಆದರೆ ಮೌದೂದಿ ಸಾಹೇಬರು ಗಲಭೆಗೆ ಮುಂದಾಳುತ್ವ ನೀಡಿದ್ದರೆಂದೂ ಅವರ ಪಂಗಡದವರು ಗಲಭೆಯಲ್ಲಿ ನೇರವಾಗಿ ಭಾಗವಹಿಸಿದ್ದರೆಂದೂ ವಿಚಾರಣಾ ಆಯೋಗದ ವರದಿ ಸ್ಪಷ್ಟಪಡಿಸಿದೆ. ನಂತರ ಪಾಕಿಸ್ತಾನದ ಸುಪ್ರೀಂ ಕೋರ್ಟಿನ ಪ್ರಧಾನ ನ್ಯಾಯಾಧೀಶರಾಗಿ ನಿಯುಕ್ತಿಗೊಂಡ ಜಸ್ಟಿಸ್ ಮುಹಮ್ಮದ್ ಮುನೀರ್ ನೇತೃತ್ವದ ವಿಚಾರಣಾ ಆಯೋಗವು ಸಲ್ಲಿಸಿದ ವರದಿಯಲ್ಲಿ ಒಂದೆಡೆ ಈ ರೀತಿ ಹೇಳಲಾಗಿದೆ :

"Moulana took a defiant attitude, blamed the Government for everything that had occured and attempted to create sympathy with disorderly elements by describing them as subjects of repression. The impression that one gets from the evidence about his attitude at the Government House is that he was anticipating the whole system of administration to crumble down and expressing his glee over the expected discomfiture and surrender of Government. And when all this is taken into consideration with the avowed object of Jamaat-i-Islami to seize power, because, according to it, this is the most effective way of achieving it's object of establishing religious institutions under the Sovereignity of Allah, no doubt is left in one's mind that what was happening had the complete approval of the Jamaat............ The confidential reports submitted by the Deputy Commissioners and the Superintendents of Police of several districts show that members of Jamaat-i-Islami took part in the disturbances."

*"ಮೌಲಾನಾ(ಮೌದೂದಿ) ಧಿಕ್ಕಾರ ಮನೋಭಾವದಿಂದ ವರ್ತಿಸಿದರು. ದಂಗೆಕೋರರನ್ನೇ ದೌರ್ಜನ್ಯಕ್ಕೆ ಗುರಿಯಾದವರಂತೆ ಚಿತ್ರೀಕರಿಸಿ ಅವರ ಮೇಲೆ ಅನುಕಂಪ ಸೃಷ್ಟಿಯಾಗುವಂತೆ ಯತ್ನಿಸುತ್ತಿದ್ದರು. ಆಡಳಿತ ವ್ಯವಸ್ಥೆಯು ಸಂಪೂರ್ಣ ಪತನಗೊಂಡು ನುಚ್ಚುನೂರಾಗುವುದನ್ನು ಅವರು ಎದುರುನೋಡುತ್ತಿದ್ದರೆಂದೂ ಸರಕಾರವು ಪರಾಭವಗೊಂಡು ಶರಣಾಗುವುದೆಂದು ನಿರೀಕ್ಷಿಸಿ ಅವರು ಸಂತಸಪಡುತ್ತಿದ್ದರೆಂದೂ ಗವರ್ನ್‌ಮೆಂಟ್ ಹೌಸ್‌ನಲ್ಲಿ ಅವರ ವರ್ತನೆಗಳ ಬಗ್ಗೆ ಸಂಗ್ರಹಿಸಲಾದ ಪುರಾವೆಗಳಿಂದ ತಿಳಿದು ಬರುತ್ತದೆ. ಈ ಎಲ್ಲಾ ಸಂಗತಿಗಳೊಂದಿಗೆ ಜಮಾತೆ ಇಸ್ಲಾಮಿಯ ಅಂಗೀಕೃತ ಧೋರಣೆಯಾದ ಅಧಿಕಾರವನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳುವ ತತ್ವವನ್ನು ಗಣನೆಗೆ ತೆಗೆದುಕೊಂಡರೆ, ಸಂಭವಿಸಿರುವ ಎಲ್ಲಾ ಘಟನೆಗಳಿಗೂ ಈ ಜಮಾತಿನ ಪೂರ್ಣ ಅನುಮತಿ ಇತ್ತೆಂಬುದರಲ್ಲಿ ಯಾರಿಗೂ ಸಂಶಯ ಪಡಲು ಸಾಧ್ಯವಿಲ್ಲ; ಯಾಕೆಂದರೆ, ಈ ಪಾರ್ಟಿಯ ಧೋರಣೆಯ ಪ್ರಕಾರ ಧಾರ್ಮಿಕ ಸಂಸ್ಥೆಗಳನ್ನು ದೇವ ಸಾಮ್ರಾಜ್ಯದ ಅಧೀನಕ್ಕೆ ತರಲು ಇದುವೇ ಅತ್ಯಂತ ಉಪಯುಕ್ತವಾದ ಮಾರ್ಗವಾಗಿದೆ............ ಹಲವು ಜಿಲ್ಲೆಗಳ ಜಿಲ್ಲಾಧಿಕಾರಿಗಳೂ ಜಿಲ್ಲಾ ಪೋಲೀಸ್ ಅಧೀಕ್ಷಕರೂ ಸಲ್ಲಿಸಿದ ಗುಪ್ತ ಮಾಹಿತಿಗಳ ಪ್ರಕಾರ ಜಮಾತೆ ಇಸ್ಲಾಮಿ ಸಂಘದ ಸದಸ್ಯರು ಗಲಭೆಯಲ್ಲಿ ಪಾಲ್ಗೊಂಡಿರುವುದಾಗಿ ಸ್ಪಷ್ಟವಾಗುತ್ತದೆ."* (Report of the Court of Inquiry - Punjab Disturbances of 1953, Lahore, printed by the Supt., Government Printing, Punjab - 1954. Page 253, 254)

ವಿಚಾರಣಾ ಆಯೋಗ ಸಲ್ಲಿಸಿದ ವರದಿಯಲ್ಲಿ ಜಮಾತೆ ಇಸ್ಲಾಮಿ ಪಾರ್ಟಿಯು ಪ್ರಾರಂಭದಿಂದಲೇ ಗಲಭೆಯಲ್ಲಿ ಸಕ್ರಿಯ ಪಾತ್ರ ವಹಿಸಿರುವುದಾಗಿಯೂ ಅಬುಲ್ ಆಲಾ ಮೌದೂದಿಯವರು ಗಲಭೆಗೆ ನೇತೃತ್ವ ವಹಿಸಿದ್ದರೆಂದೂ ಸ್ಪಷ್ಟಪಡಿಸಿದೆ. ಹಾಗೆ ದಂಗೆಕೋರರಿಗೆ ಶಿಕ್ಷೆ ವಿಧಿಸಿದ ಮಿಲಿಟರಿ ನ್ಯಾಯಾಲಯವು ಮೌದೂದಿ ಸಾಹೇಬರಿಗೆ ಪಾಸಿ ಶಿಕ್ಷೆ ವಿಧಿಸಿತು. ನಂತರ ಪಾಕ್ ಸರಕಾರ ಅದನ್ನು 14 ವರ್ಷಗಳ ಕಠಿಣ ಜೈಲು ಶಿಕ್ಷೆಯಾಗಿ ಬದಲಾಯಿಸಿತು.

ವಸ್ತುಸ್ಥಿತಿ ಹೀಗಿರುವಾಗ, ಮೌದೂದಿ ಸಾಹೇಬರು 'ಕಾದಿಯಾನಿ ಮಸ್‌ಅಲ' ಎಂಬ ಒಂದು ಪುಸ್ತಕ ಬರೆದರೆಂದೂ ಅದಕ್ಕಾಗಿ ಮೌದೂದಿಯವರಿಗೆ ಮರಣದಂಡನೆ ವಿಧಿಸಲಾಯಿತೆಂದೂ 'ಸನ್ಮಾರ್ಗ' ಪತ್ರಿಕೆ ಹೇಳುತ್ತಿರುವುದು ವಾಚಕರ ಕಣ್ಣಿಗೆ ಮಣ್ಣೆರಚುವ ಉದ್ದೇಶದಿಂದ ಮಾತ್ರ. ಒಂದು ಕಿರು ಪುಸ್ತಕ ಬರೆದ ಮಾತ್ರಕ್ಕೆ ಇಷ್ಟು ದೊಡ್ಡ ಅಬೂ(ಅಲ್ ಆಲಾ) ಮೌಲಾನಾರಿಗೆ ಮರಣದಂಡನೆಯಾಗುವುದೇ? ಇಂತಹ ಸುಳ್ಳನ್ನು ಕೂಡ ವಾಚಕರು ನಂಬುವರೆಂದು 'ಸನ್ಮಾರ್ಗ'ದವರು ಭಾವಿಸಿದ್ದಾರೆಯೇ? ಮೌದೂದಿಯವರಿಗೆ ನೇಣುಗಂಬದ ಶಿಕ್ಷೆಯಾದುದು ಗಲಭೆ ಸೃಷ್ಟಿಸಿದ್ದಕ್ಕೆ ಹೊರತು ಪುಸ್ತಕ ಬರೆದದ್ದಕ್ಕಾಗಿ ಅಲ್ಲ ಎಂಬುದನ್ನು ನಾವು ಸ್ಪಷ್ಟಪಡಿಸಬಯಸುತ್ತೇವೆ.

*

# ಜಮಾತೆ ಇಸ್ಲಾಮಿಯ 'ಶಾಂತಿಮಂತ್ರ'

ಕಳೆದ ಫೆಬ್ರವರಿಯಲ್ಲಿ ಬೆಂಗಳೂರಿನಲ್ಲಿ ಜರಗಿದ ಜಮಾತೆ ಇಸ್ಲಾಮಿ ದಕ್ಷಿಣ ಭಾರತ ಸಮ್ಮೇಳನದಲ್ಲಿ ಆ ಸಂಘಟನೆಯ ನಾಯಕರು ನೀಡಿದ ಸೋಗಿನ ಹೇಳಿಕೆಗಳು ಕೆಲವು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಆ ಹೇಳಿಕೆಗಳು ಹಾಸ್ಯಾಸ್ಪದವಾಗಿವೆ.

ಪಾಕಿಸ್ಥಾನ, ಬಾಂಗ್ಲಾದೇಶ ಮೊದಲಾದ ಕಡೆಗಳಲ್ಲಿ ಜಮಾಅತೆ ಇಸ್ಲಾಮಿ ಕಾರ್ಯಕರ್ತರು ಮತ್ತು ಬೆಂಬಲಿಗರು ನಡೆಸುತ್ತಿರುವ ದಾಂಧಲೆಗಳು ಸರ್ವವಿಧಿತವಷ್ಟೆ. ಅವರೊಡನೆ ಯಾವುದೇ ರೀತಿಯ ಸಂಬಂಧವನ್ನು ತಾವು ಹೊಂದಿಲ್ಲವೆಂದು ಇಲ್ಲಿನ ಜಮಾತೆ ಇಸ್ಲಾಮಿ ನಾಯಕರು ಹೇಳುತ್ತಾರೆ. ಆದರೆ ಪಾಕಿಸ್ಥಾನ, ಬಾಂಗ್ಲಾದೇಶ, ಭಾರತ ಮುಂತಾದ ದೇಶಗಳಲ್ಲಿರುವ ಜಮಾತೆ ಇಸ್ಲಾಮಿ ಸಂಘಟನೆಗಳ ಮೂಲ ಪುರುಷ ಅಥವಾ ಸ್ಥಾಪಕ ಒಬ್ಬರೇ - ಮೌಲಾನ ಅಬುಲ್ ಆಲಾ ಮೌದೂದಿ. ಅವರು ಬೋಧಿಸಿದ ತತ್ವಗಳೇ ಜಮಾತೆ ಇಸ್ಲಾಮಿಯರಿಗೆ ಮಾರ್ಗದರ್ಶನ.

ಖಡ್ಗ, ಬಂದೂಕುಗಳ ಮೂಲಕ ಯಾವುದೇ ವಿಷಯ ಇತ್ಯರ್ಥ ಮಾಡಬಹುದೆಂಬ ತತ್ವದಲ್ಲಿ ಜಮಾತೆ ಇಸ್ಲಾಮಿಗೆ ವಿಶ್ವಾಸವಿಲ್ಲವೆಂದು ಅಖಿಲ ಭಾರತ ಅಧ್ಯಕ್ಷ ಮೌ| ಸಿರಾಜುಲ್ ಹಸನ್ ಹೇಳುತ್ತಾರೆ. ಆದರೆ ಉಪದೇಶಗಳು ಫಲಕಾರಿಯಾಗದ ಸಂದರ್ಭದಲ್ಲಿ ಖಡ್ಗ ಪ್ರಯೋಗದಿಂದ ಕಾರ್ಯ ಸಾಧಿಸಿದ ಬಗ್ಗೆ ಮೌ| ಮೌದೂದಿ "ಅಲ್ ಜಿಹಾದ್ ಫಿಲ್ ಇಸ್ಲಾಂ" ಎಂಬ ತನ್ನ ಪುಸ್ತಕದಲ್ಲಿ ಉದಾಹರಿಸಿ, ಖಡ್ಗ ಅಥವಾ ಬಂದೂಕು ಪ್ರಯೋಗದ ಆವಶ್ಯಕತೆಯನ್ನು ತನ್ನ ಅನುಯಾಯಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಅಧಿಕಾರ ಗಳಿಸುವುದು ತಮ್ಮ ಗುರಿ ಅಲ್ಲವೆಂದು ಮೌ| ಸಿರಾಜುಲ್ ಹಸನ್ ಹೇಳುತ್ತಾರೆ. ಆದರೆ ಮೌ| ಮೌದೂದಿಯವರ ಕಾಲ್ಪನಿಕ ದೇವಾಡಳಿತೆ (ಹುಕೂಮತೆ ಇಲಾಹಿ) ಹೊರತು ಬೇರೆಲ್ಲ ಆಡಳಿತೆಗಳು ಪೈಶಾಚಿಕವೆಂದೂ, ಪೈಶಾಚಿಕ ಶಕ್ತಿಗಳಿಂದ ಅಧಿಕಾರವನ್ನು ಕಿತ್ತುಕೊಂಡು ದೇವಾಡಳಿತೆಯನ್ನು ಸ್ಥಾಪಿಸುವುದು ಆದ್ಯ ಕರ್ತವ್ಯವೆಂದೂ ಮೌ| ಮೌದೂದಿ ತನ್ನ ಅನುಯಾಯಿಗಳಿಗೆ "ಖುತ್‌ಬಾತ್"ನಲ್ಲಿ ಉಪದೇಶಿಸಿದ್ದಾರೆ.

ಜಮಾತೆ ಇಸ್ಲಾಮಿ ಕೋಮುವಾದಿ ಸಂಘಟನೆ ಅಲ್ಲವೆಂದು ಮೌ| ಸಿರಾಜುಲ್ ಹಸನ್ ಹೇಳುತ್ತಾರೆ. ಆದರೆ ತನ್ನ ರಾಜಕೀಯ ಸಿದ್ಧಾಂತ ಫಾಸಿಸ್ಟ್ (ಕೋಮುವಾದಿ) ಮತ್ತು ಕಮ್ಯುನಿಸ್ಟ್ ಸಿದ್ಧಾಂತಗಳನ್ನು ಹೋಲುತ್ತದೆ ಎಂದು ಮೌ| ಮೌದೂದಿ "ಇಸ್ಲಾಂ ಕಾ ನಝ್ರಿಯಯೆ ಸಿಯಾಸಿ" ಎಂಬ ಪುಸ್ತಕದಲ್ಲಿ ಬರೆದಿದ್ದಾರೆ.

ಧಾರ್ಮಿಕ ಸ್ವಾತಂತ್ರ್ಯಕ್ಕೆ ಮೌ| ಮೌದೂದಿಯವರ ದೃಷ್ಟಿಯಲ್ಲಿ ಸ್ಥಾನವಿಲ್ಲ. ಇಸ್ಲಾಂ ಧರ್ಮವನ್ನು ಒಬ್ಬನು ತ್ಯಜಿಸಿದರೆ ಅವನನ್ನು ವಧಿಸಬೇಕು ಎಂಬುದು ಅವರ ಬೋಧನೆಯಾಗಿದೆ ("ಮುರ್ತದ್ ಕಿ ಸಜಾ ಇಸ್ಲಾಮೀ ಕಾನೂನ್ ಮೆ"). ಧರ್ಮದ ಹೆಸರಿನಲ್ಲಿ ಕೋಮುವಾದ, ಉಗ್ರವಾದವನ್ನು ಪ್ರತಿಪಾದಿಸಿ 1953ರಲ್ಲಿ ಪಾಕಿಸ್ಥಾನದಲ್ಲಿ ಕ್ಷೋಭೆಯನ್ನು ಹರಡಿಸಿ ಅನೇಕ ಜನರ ಜೀವಹಾನಿ, ಮಾನಹಾನಿ, ಸಂಪತ್ತು ಹಾನಿಗೆ ಕಾರಣಕರ್ತನಾದ ಮೌ| ಅಬುಲ್ ಆಲಾ ಮೌದೂದಿಗೆ ಪಾಕ್ ಸರಕಾರ ಮರಣದಂಡನೆ ವಿಧಿಸಿತ್ತು.

ಭಾರತೀಯರಾದ ನಾವು ಇಲ್ಲಿನ 'ಜಮಾತೆ ಇಸ್ಲಾಮಿ'ಯ ಶಾಂತಿಯ ಸೋಗಿಗೆ ಮರುಳಾಗದೆ ಅವರ ವ್ಯಾಘ್ರಮುಖದ ಬಗ್ಗೆ ಎಚ್ಚರಿಕೆಯಿಂದಿರಬೇಕಾಗಿದೆ.

- ಎ. ಎಂ. ಲುಕ್ಮಾನ್


# MINARET

## QUARTERLY JOURNAL

Ahmadiyya English Organ

**Annual Subscription : Rs. 40/-**

Write to: The Manager, **Minaret Quarterly**
Royal Agency, Kannur - 670 001 (Kerala)

# ಭವಿಷ್ಯದ ಮುಗುಳ್ನಗೆ

(ಕೇರಳ ರಾಜ್ಯದ ಪ್ರಥಮ ಅಹ್ಮದಿಯಾ ಅಮೀರ್ ಆಗಿದ್ದ ಮುರ್ಹೂಮ್ ಸಿದ್ದೀಖ್ ಅಮೀರಲಿ ಸಾಹೇಬ್, ಮೊಗ್ರಾಲ್ ರಚಿಸಿದ್ದ "ಭಾವಿಯುಡೆ ಪುಂಜಿರಿ" ಎಂಬ ಕವಿತೆಯ ಭಾವಾನುವಾದ)

ರಚನೆ : ಕೆ.ಎಂ. ಉಮರ್, ಮಡಿಕೇರಿ

ಹದಿನಾಲ್ಕನೇ ಶತಮಾನವೋ ಕಳೆದು ಹೋಯಿತು
ಹೊಸತೊಂದು ಲೋಕವಿದೋ ರೂಪುಗೊಂಡಿತು
ಗಗನದಿಂದ ಈಸ ಬರೋಲ್ಲ
ಖಡ್ಗ ಹಿಡಿದ ಮಹ್‌ದಿ ಬರೋಲ್ಲ
ಆಸೆಗೆ ಇನ್ನು ಮಾರ್ಗವೇ ಇಲ್ಲ
ಆಕಾಶ ನೋಡಿ ನೋಡಿ ಬಳಲುವಿರಿ ನೀವು
ಆಕಾಶ ಲಕ್ಷ್ಯಮಾಡಿ ಏರುವೆವು ನಾವು
ನಮ್ಮನು ನೋಡಿ ನಕ್ಕರೆ ನೀವು
ನಿಮ್ಮನು ನೋಡಿ ಅತ್ತೆವು ನಾವು
ವಿಭಜನವಾಯಿತು ಹಾಗೇ ಭೂಮಿ
ಭೂಮಿಯು ನಿಮಗೆ ಇಂದು ಸುತ್ತಲೂ ಮುದುಡುವುದು
ಭೂಮಿಯ ನಾಲ್ಕು ಕಡೆಯೂ ನಾವು ಹರಡುವೆವು
ನೋಟವು ಬಂದಿತು ವಿಜಯವ ಕಂಡು
ನಾಡಲಿ ಹಲವರು ಬಳಲಿದರಂದು
ಕೋಟೆಯ ಒಳಗಡೆ ಜಿಗಿತವು ಬಂತು
ದೊರೆಗಳು ನಮ್ಮೆದುರಲ್ಲಿ 'ನಂಬ್ರೂದಾ'ಗುವರು
ದ್ವೇಷದಲಿ ಎಣ್ಣೆಯ ಹಣದಿ ಅಗ್ನಿಯ ತೋರುವರು
ಅಗ್ನಿಯ ಕಂಡರೂ ಹೆದರಿಕೆ ಇಲ್ಲ
ಅಗ್ನಿಯಿಂ ನಾವು ಬೇಯುವುದಿಲ್ಲ
ಅಗ್ನಿಯ ಆಟದಿ ಸಾಯುವುದಿಲ್ಲ
ಇಬ್‌ರಾಹೀಂ ಇರುವರನೇಕ ನಮ್ಮೊಳಗೆ ಇಂದು
ಲೋಕವೀ ಸತ್ಯವನ್ನು ಕಾಣುವುದು ಮುಂದು
"ಕೂನೀ ಬರ್ದನ್" ಎನ್ನುವ ಶಬ್ದ
ಕೇಳುವೆವು ನಾವು ಸಂಶಯವಿಲ್ಲ
ಕಾಣುವುದದ್ಭುತ ಇನ್ನೂ ಲೋಕ
ಅಹ್ಮದರ ಅನ್‌ಸಾರ್‌ಗಳು ಅಣಿಯಲಿ ನಿಂತಿಹರು
ನಾಯಕರ ಆಜ್ಞೆಯಂತೆ ಮುಂದಕ್ಕೆ ಸಾಗುವರು
ಖಲೀಫರಿರುವರು ನಮ್ಮೊಳಗಿಂದು
ನಾಯಕನ್ಯಾರೋ ನಿಮ್ಮೊಳಗಿಂದು
ಸೋದರ ಬೇಗನೇ ಯೋಚಿಸು ಇಂದು

ಇಸ್ಲಾಮಿನ ಬಾವುಟ ಹೊತ್ತು ಸಾಗುವೆವು ನಾವು
ಇಸ್ಲಾಮಿನ ಹೊಂಗಿರಣವು ಇತ್ತ ಬರುತಿಹುದು
ಲೋಕದಲ್ಲೆಲ್ಲ ಹರಡುವೆವು ನಾವು
ಲೋಕವು ಮತ್ತೆ ನೋಡುವುದೆಮ್ಮನು
ಲೋಕದಿ ಇಸ್ಲಾಂ ಗಳಿಸುವುದುನ್ನತಿ
ಭವಿಷ್ಯವು ನಮ್ಮನು ನೋಡಿ ಮುಗುಳ್ನಗೆ ಬೀರುವುದು
ಹದಿನೈದನೇ ಶತಮಾನವೋ ಯಾತ್ರೆಯ ತೊಡಗಿಹುದು
ಸೋದರ ನೀನೂ ಬಾರೋ ಬೇಗ
ಸಾಲಲಿ ಬಂದು ಸೇರೋ ಬೇಗ
ತಡವು ಮತ್ತೆ ತರುವುದು ಖೇದ
ಹದಿನಾಲ್ಕನೇ ಶತಮಾನವೋ ಕಳೆದು ಹೋಯಿತು
ಹೊಸತೊಂದು ಲೋಕವಿದೋ ರೂಪುಗೊಂಡಿತು

*


**SATHYADOOTHAN**

**MONTHLY**

**Ahmadiyya Malayalam Organ**

***Annual Subscription : Rs. 50/-***

***Single Copy : Rs. 5/-***

Write to : The Manager, Sathyadoothan
Thavakkara, Kannur - 670 001

**SAMADHANA VAZHI**

**MONTHLY**

**Ahmadiyya Tamil Organ**

*Annual Subscription : Rs. 45/-*

Write to : The Editor
Samadhana Vazhi
3, First Main Road,
U.I. Colony,
Kodambakkam,
Chennai - 24

# ಅಹ್ಮದಿಯಾ ಮುಸ್ಲಿಂ ಜಮಾಅತಿನ 108ನೇ ವಾರ್ಷಿಕ ಮಹಾಸಮ್ಮೇಳನ (ಜಲ್ಸ ಸಾಲಾನ)

ಭಾರತದ ಅಹ್ಮದಿಯಾ ಕೇಂದ್ರವಾದ
ಪಂಜಾಬಿನ ಖಾದಿಯಾನ್ ದಾರುಲ್ ಅಮಾನ್‌ನಲ್ಲಿ

**1999 ನವೆಂಬರ್ 13, 14, 15 - ಶನಿವಾರ, ಆದಿತ್ಯವಾರ, ಸೋಮವಾರ**

ಸ್ವದೇಶ ಮತ್ತು ವಿದೇಶಗಳಿಂದ ಸಾವಿರಾರು ಪ್ರತಿನಿಧಿಗಳು ಭಾಗವಹಿಸುತ್ತಾರೆ.

**ಅಹ್ಮದಿಯಾ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರ**
**ವಿದ್ವತ್ಪೂರ್ಣ ಪ್ರವಚನ**

ಈ ಆಧ್ಯಾತ್ಮಿಕ ಸಂಗಮಕ್ಕೆ ಸರ್ವರನ್ನೂ ಸಾದರ ಸ್ವಾಗತಿಸುತ್ತೇವೆ.

- ಅಹ್ಮದಿಯಾ ಪ್ರಧಾನ ಪ್ರಚಾರ ಕಾರ್ಯದರ್ಶಿ
ಖಾದಿಯಾನ್

ನಿಧನ ವಾರ್ತೆ

# ಸಯ್ಯದ್ ಫರ್ಝ್ಲ್ ಅಹ್ಮದ್ ಸಾಹೇಬ್

ಬಿಹಾರ್ ರಾಜ್ಯದ ಅಹ್ಮದಿಯಾ ಅಮೀರ್ ಜನಾಬ್ ಸಯ್ಯದ್ ಫರ್ಝ್ಲ್ ಅಹ್ಮದ್ ಸಾಹೇಬರು ಕಳೆದ ಜೂನ್ 20ರಂದು ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್). ಅವರು ಅಹ್ಮದಿಯಾ ಜಮಾಅತಿನ ಸ್ಥಾಪಕರ ಶಿಷ್ಯಗಣದ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರ ತಂದೆ ಜನಾಬ್ ವಝಾರತ್ ಹುಸೈನ್ ಸಾಹೇಬ್ ಮತ್ತು ದೊಡ್ಡಪ್ಪ ಸಯ್ಯದ್ ಇರಾದತ್ ಹುಸೈನ್ ಸಾಹೇಬ್ ಹಝ್ರತ್ ಅಹ್ಮದ್ (ಅ)ರವರ ಶಿಷ್ಯರಾಗಿದ್ದರು. ಅವರು ಪಾಟ್ನಾ ಜಮಾಅತಿನ ಸದಸ್ಯರಾಗಿದ್ದರು.

ಬಿಹಾರ್ ರಾಜ್ಯದ ಐ.ಜಿ. (ಸಿ.ಐ.ಡಿ.) ಆಗಿ ಉತ್ತಮ ಸೇವೆ ಸಲ್ಲಿಸಿದ್ದ ಫರ್ಝ್ಲ್ ಅಹ್ಮದ್ ಸಾಹೇಬರು ನಿವೃತ್ತರಾದ ಬಳಿಕ ತನ್ನ ಜೀವನವನ್ನು ಅಹ್ಮದಿಯಾ ಜಮಾಅತಿನ ಸೇವೆಗಾಗಿ ಮುಡಿಪಾಗಿಟ್ಟಿದ್ದರು.

ಕಾಸರಗೋಡಿನಲ್ಲಿ ಜರಗಿದ 21ನೇ ಕೇರಳ ಅಹ್ಮದಿಯಾ ವಾರ್ಷಿಕ ಸಮ್ಮೇಳನದ ಸಮಾರೋಪ ಸಮ್ಮೇಳನವನ್ನು 1978 ಮೇ 7ರಂದು ಉದ್ಘಾಟಿಸಲು ಆಗಮಿಸಿದ್ದ ಫರ್ಝ್ಲ್ ಅಹ್ಮದ್ ಸಾಹೇಬರು ಮೇ 9ರಂದು ಮಂಗಳೂರಿಗೆ ಭೇಟಿಯಿತ್ತು ಜಿಲ್ಲಾ ಪೊಲೀಸ್ ಇಲಾಖೆಯ ಅತಿಥಿಯಾಗಿ ಉಳಕೊಂಡಿದ್ದರು.

ಫರ್ಝ್ಲ್ ಅಹ್ಮದ್ ಸಾಹೇಬರ ಮೃತದೇಹವನ್ನು ಜೂನ್ 21ರಂದು ಖಾದಿಯಾನಿನಲ್ಲಿ ದಫನ ಮಾಡಲಾಯಿತು. ಅನೇಕ ಪೊಲೀಸ್ ಉನ್ನತಾಧಿಕಾರಿಗಳೂ ಸಾಮಾಜಿಕ ನೇತಾರರೂ ಗಣ್ಯ ವ್ಯಕ್ತಿಗಳೂ ಅಂತ್ಯಕ್ರಿಯೆಯ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಅಲ್ಲಾಹನು ದಿವಂಗತರಿಗೆ ಮಗ್‌ಫಿರತ್ ಮತ್ತು ಸಂತಪ್ತ ಕುಟುಂಬಕ್ಕೆ ಸಹನೆಯನ್ನು ದಯಪಾಲಿಸಲಿ. ಆಮೀನ್.

ದೇವಾಸ್ತಿತ್ವವನ್ನು ರುಜುಗೊಳಿಸುವ, ಧರ್ಮಗಳ ಆವಶ್ಯಕತೆಯನ್ನು ಸಾರುವ, ಆಧ್ಯಾತ್ಮಿಕ ಜ್ಞಾನವನ್ನು ಜನರ ಹೃದಯಗಳಲ್ಲಿ ಮೂಡಿಸುವ ಒಂದು ಉತ್ಕೃಷ್ಟ ತ್ರೈಮಾಸ ಪತ್ರಿಕೆ

# ಯುಗರಶ್ಮಿ

ಯಥಾರ್ಥ ಇಸ್ಲಾಂ ಮತ್ತು ಅಹ್ಮದಿಯಾ ಸಂಘಟನೆಯ ಸೇವೆಗಾಗಿ ಮೀಸಲಾಗಿರಿಸಿದ "ಯುಗರಶ್ಮಿ" ತ್ರೈಮಾಸಿಕವು ವಿವಿಧ ಧರ್ಮಗಳ ತುಲನಾತ್ಮಕ ಪಠನಾಸಕ್ತರಿಗೆ ಒಂದು ಉತ್ತಮ ಪತ್ರಿಕೆಯಾಗಿದೆ.

ದೇವಾಸ್ತಿತ್ವ, ಇತರ ಧರ್ಮ ಮತ್ತು ಧರ್ಮಾಚಾರ್ಯರ ಕುರಿತು ಇಸ್ಲಾಮಿನ ವೀಕ್ಷಣೆ, ಕೋಮು ಸೌಹಾರ್ದದ ಮಾರ್ಗಗಳು, ಇಸ್ಲಾಮಿನ ತತ್ತೋಪದೇಶಗಳು, ಮಾನವ ಕುಲದ ಏಳಿಗೆಗೆ ಇಸ್ಲಾಮಿನ ಕೊಡುಗೆ, ಇಂದಿನ ಆಧ್ಯಾತ್ಮಿಕ ಅಧಃಪತನ ಮತ್ತು ಪುನರುಜ್ಜೀವನ ಮಾರ್ಗಗಳು ಮೊದಲಾದ ವಿಷಯಗಳ ಕುರಿತು ಲೇಖನ ಪರಾಮರ್ಶೆಗಳನ್ನು ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಕಾಣಬಹುದು.

| ಬಿಡಿ ಪ್ರತಿ: ರೂ. 5-00 | ವಾರ್ಷಿಕ ಚಂದಾ : ರೂ. 20-00 | ಅಂಚೆ ಮೂಲಕ : ರೂ. 25-00 |
|---|---|---|

ವ್ಯವಹರಿಸಿರಿ:

**The Editor**

**YUGARASHMI**

**Kannada Quarterly**

10-23-1008/1, I Floor, Ansari Road
Bunder, Mangalore - 575 001


**ಈ ವರ್ಷದ "ಯುಗರಶ್ಮಿ"ಯ ಉಚಿತ ಪ್ರತಿಗಳನ್ನು ವಿತರಣೆ ಮಾಡಲು ಸಹಾಯಧನ ನೀಡಿದ ಉದಾರಶೀಲರು.**

| | | ಪ್ರತಿಗಳು |
|---|---|---|
| 7. | ಜನಾಬ್ ಎಂ.ಎಫ್. ಬಶೀರ್ ಅಹ್ಮದ್ ಸಾಹೇಬ್, ಮಡಿಕೇರಿ | 40 |
| 8. | ಜನಾಬ್ ಎಂ.ಇ. ಮುಹಮ್ಮದ್ ಸಾಹೇಬ್, ಮಡಿಕೇರಿ | 20 |
| 9. | ಜನಾಬ್ ಪಿ. ಅಬ್ದುಲ್ ರಹೀಂ ಸಾಹೇಬ್, ಮಡಿಕೇರಿ | 10 |

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ

ಏಕೈಕ ಟಿ.ವಿ. ಚ್ಯಾನೆಲ್

# ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ ಇಂಟರ್‌ನೇಶನಲ್

# THE FIRST ISLAMIC SATELLITE CHANNEL

**BROADCASTING ROUND THE CLOCK**

**AUDIO FREQUENCY**

| | | |
|---|---|---|
| URDU | : | 6.50 |
| ENGLISH | : | 7.02 |
| ARABIC | : | 7.20 |
| BENGALI | : | 7.38 |
| FRENCH | : | 7.56 |
| DUTCH | : | 7.74 |
| TURKISH | : | 8.10 |

| | | |
|---|---|---|
| SATELLITE | : | INTELSAT 703 IS-703 AT 57* E |
| DECODER | : | C Band |
| POSITION | : | 57* East |
| POLARITY | : | Left Hand Circular |
| DISH SIZE | : | Max 8.Ft. |
| VIDEO FREQUENCY | : | 4177.5 Mhz |
| AUDIO FREQUENCY | : | 6.50 Mhz |

E Mail : mta @ bitinternet.com

INTERNET CODE : http://www.alislam.org/mta

**MTA International,** P.O. Box 12926, London SW 18 4ZN

Tel : 44-181 870 0922 Fax : 44-181 875 0249

Internet Code: http://www.alislam.org/mta

Regd. with the Registrar of Newspapers for India No. R.N. 27354/75
YUGARASHMI Kannada Quarterly, August - 1999


# ಸ್ಟ್ಯಾಂಡರ್ಡ್ ಟೈಲರಿ

ಕಡೂರು, ಚಿಕ್ಕಮಗಳೂರು ಜಿಲ್ಲೆ.

## ರಾಜಾ ಮಾರ್ಕಿನ ಹಂಚುಗಳು

ಚಾವಣಿ ಹಂಚು, ಮೂಲೆ ಹಂಚು, ಗೋಡೆ ಹಂಚು, ಹಾಸು ಹಂಚು,
ಮೆತ್ತಡ ಹಂಚು, ಅಲಂಕಾರಿಕ ಹಂಚು ಮೊದಲಾದ
ಎಲ್ಲ ತರದ ಆವೆಮಣ್ಣಿನ ಉತ್ಪನ್ನಗಳು ದೊರೆಯುತ್ತವೆ.

# STANDARD TILERY

**KADUR,**
CHICKMAGALUR DISTRICT

## RAJA MARK

**Roofing Tiles, Ridges, Wall Tiles, Span Tiles, Floorings, Decorative Tiles, Ceillings Etc., Etc.**

**ALL CLAY PRODUCTS AVAILABLE.**


Edited and Published by **Muhammad Yusuf** on behalf of Jamath Ahmadiyya at 10-23-1008/1, I Floor, Ansari Road, Mangalore - 575 001.
Printed at **Manorama Offsets**, Mangalore on behalf of Jubilee Printing Press, Mangalore.
Typeset at **Madhuban Graphics**, Alake, Mangalore - 575 003